ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 22 ಮಂಗಳವಾರ 2022

₹4

ಸಂಪುಟ: 43 | ಸಂಚಿಕೆ: 215 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ರತುನ ಮೆಚ್ಚಿದ ಕಥೆಗಳು ಕೃತಿ ಲೋಕಾರ್ಪಣೆ



ಮೈಸೂರು, ನ. 21– ಸಂಸ್ಕೃತಿ ಪ್ರಕಾಶನದ ವತಿಯಿಂದ ಲೇಖಕಿ ಗಾಯತ್ರಿ ಸುಂದರೇಶ್ ಅವರ "ರತುನ ಮೆಚ್ಚಿದ ಕಥೆಗಳು" ಇಂದು ಲೋಕಾರ್ಪಣೆಗೊಂಡಿತು. ನಗರದ ಕೃಷ್ಣಧಾಮ ಸಮೀಪವಿರುವ ಬಬ್ಬೂರು ಕಮ್ಮೆ ಸಂಘದಲ್ಲಿ ಅಂಕಣಕಾರರು ಲೇಖಕರೂ ಆದ ಡಾ.ವಿ.ರಂಗನಾಥ್ ಅವರು ಕೃತಿ ಲೋಕಾರ್ಪಣೆಗೊಳಿಸಿದರು.

ಒಟ್ಟು 17 ಕಥೆಗಳನ್ನೊಳಗೊಂಡಿರುವ ಈ ಕೃತಿಯನ್ನು ಲೇಖಕಿಯವರು ಕನ್ನಡ ಸಾಹಿತ್ಯ ದೇವಿಗೆ ತಮ್ಮ ಅತ್ತೆ ನಾಗರತ್ನಮ್ಮನವರ ಮೊದಲನೇ ವರುಷದ ಪುಣ್ಯಸ್ಮರಣೆಯ ಪ್ರಯುಕ್ತ ಬಾಗಿನದ ಮೂಲಕ ವಿಶೇಷವಾಗಿ ಅರ್ಪಣೆ ಮಾಡಿದರು.

ಪುಸ್ತಕ ಲೋಕಾರ್ಪಣೆಗೊಳಿಸಿ ಬಾಗಿನ ಸ್ವೀಕರಿಸಿ ಮಾತನಾಡಿದ ಡಾ.ವಿ.ರಂಗನಾಥ್ ಅವರು, ಧಾರ್ಮಿಕ ಆಚರಣೆಯೊಂದಿಗೆ ಸಾಹಿತ್ಯದ ಆಚರಣೆಗೂ ಅವಕಾಶ ಮಾಡಿಕೊಟ್ಟು ಸಾಹಿತ್ಯ ಶ್ರೀಮಂತಿಕೆ ಹೆಚ್ಚಿಸುವ ಜವಾಬ್ದಾರಿಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡಿದರು. ಸಮಾರಂಭದಲ್ಲಿ ಲೇಖಕರು ಪುಸ್ತಕ ಸಲಹೆಗಾರರೂ ಆದ ಸಂಸ್ಕೃತಿ ಸುಬ್ರಹ್ಮಣ್ಯ ಹಾಗೂ ನಿವೃತ್ತ ರೈಲ್ವೆ ಅಧಿಕಾರಿ ಹೆಚ್.ಎಸ್.ರಾಮಣ್ಣ ಉಪಸ್ಥಿತರಿದ್ದರು.

ಭಾರತೀಯ ಔಷಧ ಉದ್ಯಮ ಹೊಸ ಆವಿಷ್ಕಾರಗಳನ್ನೊಳಗೊಂಡಿದೆ



ಮೈಸೂರು,ನ.21–ಭಾರತೀಯ ಔಷಧಿ ಉದ್ಯಮವು ಹೊಸ ಆವಿಷ್ಕಾರಗಳ ಧ್ಯೇಯವನ್ನೊಳಗೊಂಡಿದೆ ಎಂದು ಸೆಂಟ್ರಲ್ ಡ್ರಗ್ಸ್ ಸ್ಟ್ಯಾಂಡರ್ಡ್ ಕಂಟ್ರೋಲ್ ಆರ್ಗನೈಸೇಶನ್ (ಸಿಡಿಎಸ್‌ಸಿಒ)ನ ಉಪ ಡ್ರಗ್ಸ್ ಕಂಟ್ರೋಲರ್ ಡಾ.ಎ.ರಾಮ್‌ಕಿಶನ್ ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್ ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ '61ನೇ ರಾಷ್ಟ್ರೀಯ ಫಾರ್ಮಸಿ ಸಪ್ತಾಹ'ದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತ ದೇಶವು ಜೀವ ಉಳಿಸುವ ಔಷಧಿಗಳನ್ನು ಕೈಗೆಟಕುವ ಬೆಲೆಯಲ್ಲಿ ಅತ್ಯಂತ ಅಗತ್ಯವಿರುವ ದೇಶಗಳಿಗೆ ತಲುಪಿಸಲಾಗುತ್ತಿದೆ ಎಂದರು.

ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್ ಮೈಸೂರು ಘಟಕದ ಅಧ್ಯಕ್ಷ ಡಾ.ಟಿ.ಎಂ.ಪ್ರಮೋದ್‌ಕುಮಾರ್, ಸದಸ್ಯೆ ಶಿಲ್ಪ ಪಾಲಾಕ್ಷ, ಖಜಾಂಚಿ ಡಾ.ಬಿ.ಎಂ.ಗುರುಪಾದಯ್ಯ, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಎಂ.ಮಂಜುನಾಥ, ಡಾ.ಆರ್.ಎಸ್.ಚಂದನ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಹೊಸಬಂಡಿಕೇರಿಯ ಶ್ರೀ ಮಲೈ ಮಹದೇಶ್ವರ ಸ್ವಾಮಿ ಪೂಜಾ ಸಮಿತಿ, ಪಶುಪಾಲಕರ ಸೇವಾ ಸಮಿತಿ ವತಿಯಿಂದ 4ನೇ ಹಾಗೂ ಕಡೇ ಕಾರ್ತಿಕ ಸೋಮವಾರದ ಪೂಜಾ ಕಾರ್ಯಕ್ರಮದ ನಿಮಿತ್ತ ವಿವಿಧ ಕಲಾ ತಂಡಗಳೊಂದಿಗೆ ಮಲೈ ಮಹದೇಶ್ವರರ ಭವ್ಯ ಮೆರವಣಿಗೆ ಜರುಗಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರಾದ ಬಂಡಿಕೇರಿ ಮೋಹನ್, ಪ್ರಕಾಶ್, ರವಿ ಇನ್ನಿತರರಿದ್ದರು.

ಅಂತರ ಶಾಲಾ ಚೆಸ್ ಪಂದ್ಯಾವಳಿಯಲ್ಲಿ ಧಾತ್ರಿ–ದಿಯಾ ಸಹೋದರಿಯರ ಅಮೋಘ ಪ್ರದರ್ಶನ

ಮೈಸೂರು, ನ.21–ಮೈಸೂರಿನ ಭರವಸೆಯ ಚೆಸ್ ಆಟಗಾರ್ತಿಯರಾದ ಧಾತ್ರಿ ಉಮೇಶ್ ಮತ್ತು ದಿಯಾ ಉಮೇಶ್ ಸಹೋದರಿಯರು ಬೆಂಗಳೂರಿನಲ್ಲಿ ನಡೆದ



ಅಂತರ ಶಾಲಾ ಚೆಸ್ ಚಾಂಪಿಯನ್ ಶಿಪ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ಗಳಿಸಿದ್ದಾರೆ.


ಬೆಂಗಳೂರಿನ ಎಚ್.ಎಸ್.ಆರ್. ಲೇಔಟ್ ಶಾಖೆಯ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಆಯೋಜಿಸಿದ್ದ ಈ ಚದುರಂಗ ಪಂದ್ಯಾವಳಿಯಲ್ಲಿ ಕರ್ನಾಟಕದ ಬಹುತೇಕ ಶಾಲೆಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ತೀವ್ರ ಹಣಾಹಣಿ ಏರ್ಪಟ್ಟಿದ್ದ ಪಂದ್ಯಾವಳಿಯಲ್ಲಿ ಧಾತ್ರಿ ಉಮೇಶ್ ಅಮೋಘ ಪ್ರದರ್ಶನ ನೀಡಿ ಮೊದಲ ರನ್ನರ್ ಅಪ್ ಆಗಿ ಹೊರಹೊಮ್ಮಿದರು. ದಿಯಾ ಉಮೇಶ್ ಸಹ U- 11 ಕೆಟಗರಿಯಲ್ಲಿ ಉತ್ತಮ ಪ್ರದರ್ಶನ ನೀಡಿ ದ್ವಿತೀಯ ರನ್ನರ್ ಅಪ್ ಆಗಿ ಬಹುಮಾನ ಗಳಿಸಿದರು.

ಧಾತ್ರಿ ಮತ್ತು ದಿಯಾ ಮೈಸೂರು ಚೆಸ್ ಸೆಂಟರ್‌ನಲ್ಲಿ ಅಭ್ಯಾಸ ಮಾಡಿ ಇದೀಗ ಬೆಂಗಳೂರಿನ ಶ್ರೀ ಅರವಿಂದ ಶಾಸ್ತ್ರಿಯವರ ಬಳಿ ಚದುರಂಗ ಪಟ್ಟುಗಳನ್ನು ಕಲಿಯುತ್ತಿದ್ದಾರೆ. ಇಬ್ಬರೂ ಮೈಸೂರಿನ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ಇಬ್ಬರೂ ಮೈಸೂರಿನ ಟಿ.ಕೆ.ಲೇಔಟ್‌ನಲ್ಲಿ ನೆಲೆಸಿರುವ ಖ್ಯಾತ ಲೇಖಕ ಎಸ್.ಉಮೇಶ್ ಮತ್ತು ಬೃಂದಾ ಅವರ ಪುತ್ರಿಯರು. ಧಾತ್ರಿ ಮತ್ತು ದಿಯಾರ ಗೆಲುವಿಗೆ ನ್ಯಾಷನಲ್ ಪಬ್ಲಿಕ್ ಶಾಲೆ ಪ್ರಾಂಶುಪಾಲರಾದ ಶ್ರೀಮತಿ ಅಖಿಲಾ ದಿನೇಶ್ ಮತ್ತು ತಂಡದ ಮ್ಯಾನೇಜರ್ ಆದ ಶ್ರೀಮತಿ ನಳಿನಾ ಅವರು ಅತೀವ ಸಂತಸ ವ್ಯಕ್ತಪಡಿಸಿದ್ದಾರೆ.



ಕಡೇ ಕಾರ್ತಿಕ ಸೋಮವಾರದ ಪ್ರಯುಕ್ತ ದೇವರಾಜ ಮೊಹಲ್ಲಾದ ಶ್ರೀ ಹನುಮಂತೇಶ್ವರ ದೇವಾಲಯದಲ್ಲಿ ವಿಶೇಷ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ವಾಸಂತಿ ಮತ್ತು ವೃಂದ, ವಿಜಯ ಮತ್ತು ವೃಂದ ಮತ್ತು ಶ್ರೀ ಹರಿ ವಾಯು ಭಜನಾ ಮಂಡಲಿಯವರಿಂದ ಭಜನಾ ಕಾರ್ಯಕ್ರಮ ನಡೆಯಿತು. ವಿದ್ವಾನ್ ಶ್ರೀ ಪ್ರಣವನಾಥ ಸ್ವಾಮಿಯವರಿಂದ ಮಹಾ ಮಂಗಳಾರತಿ ನಡೆಯಿತು. ಬಳಿಕ ಪ್ರಸಾದ ವಿನಿಯೋಗ ನಡೆಯಿತು.

ನಿಧನ



ಸಿ.ಬಾಲು

ಮೈಸೂರು,ನ.21–ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಸಿಬ್ಬಂದಿ ಹಾಗೂ ಪಡುವಾರಹಳ್ಳಿ ನಿವಾಸಿ ಸಿ.ಬಾಲು (50) ಸೋಮವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನೋಂದಾಯಿತ ಅಕ್ಕಿ ಗಿರಣಿಗಳಲ್ಲಿಯೇ ಭತ್ತ ಖರೀದಿ ಕೇಂದ್ರ ತೆರೆಯಿರಿ

ಸರ್ಕಾರಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯ

ಮೈಸೂರು,ನ.21(ಪಿಎಂ)– ಕಳೆದ ನಾಲ್ಕೈದು ವರ್ಷಗಳಿಂದ ನಡೆದು ಬಂದಿರುವಂತೆ ನೋಂದಾಯಿತ ಅಕ್ಕಿ ಗಿರಣಿಗಳಲ್ಲಿಯೇ ಭತ್ತ ಖರೀದಿ ಕೇಂದ್ರ ತೆರೆದು ರೈತರಿಂದ ಭತ್ತ ಖರೀದಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಪ್ರಸಕ್ತ ಸಾಲಿನ ಮುಂಗಾರು ಋತುವಿನಲ್ಲಿ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಮೂಲಕ ಆಯಾಯ ತಾಲೂಕಿನ ಎಪಿಎಂಸಿಗಳಲ್ಲಿ ಭತ್ತ ಖರೀದಿಗೆ ಸರ್ಕಾರ ಆದೇಶ ಹೊರಡಿಸಿದೆ. ಇದರಿಂದ ರೈತರಿಗೆ ಅನಾನುಕೂಲವೇ ಹೆಚ್ಚು ಎಂದು ಪ್ರತಿಪಾದಿಸಿದರು.

ಈ ಹೊಸ ಆದೇಶ ಜಾರಿಯಾದರೆ ಪ್ರತಿ ತಾಲೂಕು ಮಟ್ಟದಲ್ಲಿ ಒಂದು ಅಥವಾ ಎರಡು ಜಾಗದಲ್ಲಿ ಮಾತ್ರ ಖರೀದಿಗೆ ಅವಕಾಶ ದೊರೆಯಲಿದೆ. ಹೆಚ್ಚು ಕೇಂದ್ರಗಳನ್ನು ವ್ಯವಸ್ಥೆಗೊಳಿಸುವಷ್ಟು ಮೂಲ ಸೌಲಭ್ಯ ಸದರಿ ನಿಗಮದಲ್ಲಿ ಇಲ್ಲ. ಹಾಗಾಗಿ ಈ ಹಿಂದಿನ ವ್ಯವಸ್ಥೆಯನ್ನೇ ಮುಂದುವರೆಸಬೇಕು ಎಂದು ಒತ್ತಾಯಿಸಿದರು.



ಪತ್ರಿಕಾಗೋಷ್ಠಿ ಬಳಿಕ ರೈತ ಸಂಘದ ಪದಾಧಿಕಾರಿಗಳು ಅಕ್ಕಿ ಗಿರಣಿಗಳಲ್ಲಿಯೇ ಭತ್ತ ಖರೀದಿ ಕೇಂದ್ರ ತೆರೆಯಲು ಕೋರಿ ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥಸ್ವಾಮಿ ಅವರಿಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸೋಮವಾರ ಮನವಿ ಸಲ್ಲಿಸಿದರು.

ಸ್ಥಳೀಯ ಹೋಬಳಿ ಮತ್ತು ಹಳ್ಳಿಗಳಲ್ಲಿ ಅಲ್ಲಿನ ನೋಂದಾಯಿತ ಅಕ್ಕಿ ಗಿರಣಿಗಳಲ್ಲಿ ಕೇಂದ್ರ ತೆರೆದು ಭತ್ತ ಖರೀದಿ ಮಾಡುವುದು ಈವರೆಗೆ ನಡೆದುಕೊಂಡು ಬಂದಿದೆ. ಇದು ರೈತರಿಗೆ ಅನುಕೂಲಕಾರಿ. ಸಾಗಾಣಿಕೆ ವೆಚ್ಚ, ಸರದಿ ಕಾಯುವ ಪರಿಸ್ಥಿತಿ ಇಲ್ಲವಾಗುವುದು ಮಾತ್ರವಲ್ಲದೆ, ದಲ್ಲಾಳಿಗಳ ಹಾವಳಿ ಇರುವುದಿಲ್ಲ. ಹಾಗಾಗಿ ಈ ಹಿಂದಿನಂತೆ ಅಕ್ಕಿ ಗಿರಣಿಗಳಲ್ಲಿ ಭತ್ತ ಖರೀದಿಸುವ ವ್ಯವಸ್ಥೆಯನ್ನೇ ಮುಂದುವರೆಸಬೇಕು ಎಂದು ಆಗ್ರಹಿಸಿದರು.

ಮೈಸೂರು ಭಾಗಕ್ಕೂ ಪ್ರೋತ್ಸಾಹಧನ ನೀಡಿ: ಪ್ರಸಕ್ತ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿಸಲು ಸಾಮಾನ್ಯ ಭತ್ತಕ್ಕೆ 2,040 ರೂ. ಹಾಗೂ ಗ್ರೇಡ್ ಎ ಭತ್ತಕ್ಕೆ 2,060 ರೂ. ದರ ನಿಗದಿ ಮಾಡಲಾಗಿದೆ (ಕ್ವಿಂಟಾಲ್‌ಗೆ). ಕರಾವಳಿ ಜಿಲ್ಲೆಗಳಾದ ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಸ್ಥಳೀಯ ತಳಿಗಳ ಭತ್ತಕ್ಕೆ ಪ್ರತಿ ಕ್ವಿಂಟಾಲ್‌ಗೆ 500 ರೂ. ಪ್ರೋತ್ಸಾಹಧನ ನೀಡಲು ಸರ್ಕಾರ ಕ್ರಮ ವಹಿಸಿದೆ ಎಂದರು. ಜೊತೆಗೆ ಈ ಜಿಲ್ಲೆಗಳ ರೈತರಿಂದ ಪ್ರತಿ ಎಕರೆಗೆ ಗರಿಷ್ಠ 16 ಕ್ವಿಂಟಾಲ್‌ನಂತೆ ಪ್ರತಿ ರೈತರಿಂದ 40 ಕ್ವಿಂಟಾಲ್ ಭತ್ತ ಖರೀದಿಸಲು ಸರ್ಕಾರ ಮುಂದಾಗಿದೆ. ಇದೇ ಮಾದರಿಯಲ್ಲಿ ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆಗಳಲ್ಲಿಯೂ ನಾಟಿ ತಳಿ ಭತ್ತ ಖರೀದಿಸಲು ಕ್ರಮ ವಹಿಸಬೇಕೆಂದು ಹೊಸೂರು ಕುಮಾರ್ ಒತ್ತಾಯಿಸಿದರು. ಸಂಘದ ಪದಾಧಿಕಾರಿಗಳಾದ ಮರಂಕಯ್ಯ, ಮಂಟಗಳ್ಳಿ ಮಹೇಶ್, ವಿಜಯೇಂದ್ರ, ಮಹಿಳಾ ಘಟಕದ ಅಧ್ಯಕ್ಷೆ ನೇತ್ರಾವತಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಭರವಸೆಯಂತೆ ರೈತರಿಗೆ ನಿವೇಶನ ಕಲ್ಪಿಸಿ

ಜಿಲ್ಲಾಡಳಿತ ಭರವಸೆಯಂತೆ ಕೆಂಚಲಗೂಡು ಸರ್ಕಾರಿ ಭೂಮಿಯಲ್ಲಿ ರೈತರಿಗೆ ನಿವೇಶನಗಳನ್ನು ಕಲ್ಪಿಸಿಕೊಡಬೇಕೆಂದು ರೈತ ಸಂಘದ ಮುಖಂಡ ಮರಂಕಯ್ಯ ಕೋರಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ತಾಲೂಕು ಜಯಪುರ ಹೋಬಳಿ ಕೆಂಚಲಗೂಡಿನ ಸರ್ವೆ ನಂ.14ರಲ್ಲಿ 27 ಎಕರೆ ಸರ್ಕಾರಿ ಭೂಮಿಯಲ್ಲಿ 70 ವರ್ಷಗಳಿಂದ ರೈತರು ಉಳುಮೆ ಮಾಡುತ್ತಿದ್ದರಲ್ಲದೆ, ಸಾಗುವಳಿ ಪತ್ರಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ ಅರ್ಜಿಗಳು ತಿರಸ್ಕೃತಗೊಂಡವು. ಆದಾಗ್ಯೂ ರೈತರು ಸಾಗುವಳಿ ಮುಂದುವರೆಸಿದ್ದರು. ಈ ನಡುವೆ 2011ರಲ್ಲಿ ವಾಯುಸೇನೆಗೆ 27 ಎಕರೆ ಭೂಮಿ ಪೈಕಿ 13 ಎಕರೆಯನ್ನು ಮಂಜೂರು ಮಾಡಲಾಯಿತು ಎಂದರು.

ಇದನ್ನು ರೈತರು ವಿರೋಧಿಸಿದಾಗ, ಉಳಿಕೆ ಭೂಮಿಯಲ್ಲಿ ಅಲ್ಲಿ ಉಳುಮೆ ಮಾಡುತ್ತಿದ್ದ ರೈತರಿಗೆ ನಿವೇಶನ ನೀಡುವುದಾಗಿ ಜಿಲ್ಲಾಡಳಿತ ಆಶ್ವಾಸನೆ ನೀಡಿತು. ಈ ನಡುವೆ ಸದರಿ ಭೂಮಿಯಲ್ಲಿ 4 ಎಕರೆ ತಮ್ಮದೆಂದು ನಕಲಿ ದಾಖಲೆ ಸೃಷ್ಟಿಸಿಕೊಂಡು ಒಬ್ಬರು ಕೋರ್ಟ್‌ಗೆ ಹೋಗಿದ್ದಾರೆ. ಇದನ್ನು ಶೀಘ್ರ ಇತ್ಯರ್ಥಪಡಿಸಿ, ಭರವಸೆಯಂತೆ 280 ಫಲಾನುಭವಿಗಳಿಗೆ ನಿವೇಶನ ನೀಡಬೇಕು ಎಂದು ಜಿಲ್ಲಾಡಳಿತವನ್ನು ಒತ್ತಾಯಿಸಿದರು.

ವಿನಾಯಕ ಕ್ರೀಡಾ– ಸಮಾಜ ಸೇವಾ ಸಂಸ್ಥೆ ಪದಾಧಿಕಾರಿಗಳು

ಮೈಸೂರು,ನ.21–ಮೈಸೂರಿನ ಅಶೋಕಪುರಂನ ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಎಂ.ಮಾದಯ್ಯ (ಗೌರವಾಧ್ಯಕ್ಷ), ಆನಂದಮೂರ್ತಿ (ಅಧ್ಯಕ್ಷ), ಬಿ.ಎಂ.ಶ್ರೀಕಂಠಮೂರ್ತಿ, ಕೆಂಪಸಿದ್ದಯ್ಯ (ಉಪಾಧ್ಯಕ್ಷ), ಎಂ.ಕೆ. ರೇವಣ್ಣ (ಕಾರ್ಯದರ್ಶಿ), ಈಶ್ವರ, ಎಂ. ಗಂಗಾಧರ (ಸಹ ಕಾರ್ಯದರ್ಶಿಗಳು), ರಾಜಣ್ಣ (ರೈಲ್ವೆ) (ಸಂಘಟನಾ ಕಾರ್ಯದರ್ಶಿ), ಎಂ.ಪುರುಷೋತ್ತಮ (ಖಜಾಂಚಿ), ದೇವರಾಜು (ಗೌರವ ಸಲಹೆಗಾರರು).

ಇಂದಿನಿಂದ ಜಿಲ್ಲಾ ಪೊಲೀಸ್ ಕ್ರೀಡಾಕೂಟ

ಮೈಸೂರು, ನ.21–ಮೈಸೂರು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ ನ.22 ರಿಂದ 24ರವರೆಗೆ ಜ್ಯೋತಿನಗರ ಡಿಎಆರ್ ಕವಾಯತು ಮೈದಾನದಲ್ಲಿ ನಡೆಯಲಿದೆ. ಮೈಸೂರು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಪೂರ್ಣಿಮಾ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ. ಜ.24ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ದಕಿಣ ವಲಯ ಪೊಲೀಸ್ ಮಹಾ ನಿರೀಕ್ಷಕ ಪ್ರವೀಣ್ ಮಧುಕರ್ ಪವಾರ್ ಮುಖ್ಯ ಅತಿಥಿಗಳಾಗಿರುವರು ಎಂದು ಪ್ರಕಟಣೆ ತಿಳಿಸಿದೆ.

ಕಣ್ಣಿನ ತಪಾಸಣಾ ಶಿಬಿರ

ಮೈಸೂರು,ನ.21–ಡಾ.ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಪ್ರತಿ ಬುಧವಾರ ಮೈಸೂರಿನ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣೆ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಮತ್ತು ಸಯ್ಯಾಜಿರಾವ್ ರಸ್ತೆಯ ಆಸ್ಪತ್ರೆ ಶಾಖೆಗಳಿಗೆ ಭೇಟಿ ನೀಡಿ ಇದರ ಉಪಯೋಗ ಪಡೆದುಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ. 8884477956 ಸಂಪರ್ಕಿಸಿ.

ಉಚಿತ ತರಬೇತಿ

ಮೈಸೂರು,ನ.21–ಕೌಶಲ್ಯ ಕರ್ನಾಟಕ ಯೋಜನೆಯಡಿ ಅಕೌಂಟ್ಸ್ ಎಕ್ಸಿಕ್ಯೂಟಿವ್, ಫಿಲಂ ಟೆಕ್ನಿಷಿಯನ್ ಕಂಪ್ಯೂಟಿಂಗ್ ಮತ್ತು ಫೆರಿಫರಲ್ಸ್ ಕುರಿತು ಉಚಿತ ತರಬೇತಿ ನೀಡಲಾಗುತ್ತಿದ್ದು, ಆಸಕ್ತರು ಮೊ– 96635 79654, 9902955544 ಸಂಪರ್ಕಿಸಿ.

ಕಾರಿನಲ್ಲಿದ್ದ ಚಿನ್ನಾಭರಣ ದೋಚಿದ್ದ ಖದೀಮ ಸೆರೆ

7 ಲಕ್ಷ ರೂ. ಮೌಲ್ಯದ ಆಭರಣ ವಶ

ಮೈಸೂರು, ನ.21(ಎಸ್‌ಬಿಡಿ)– ದಸರಾ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಬಂದಿದ್ದವರ ಕಾರಿನಲ್ಲಿದ್ದ ಚಿನ್ನಾಭರಣ ದೋಚಿದ್ದ ಖದೀಮನನ್ನು ಮೈಸೂರಿನ ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಒಂದೂವರೆ ತಿಂಗಳಿಂದ ಶೋಧ ನಡೆಸುತ್ತಿದ್ದ ಪೊಲೀಸರು ನ.19ರಂದು ಖದೀಮನನ್ನು ಬಂಧಿಸಿದ್ದು, ಈತ ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ಮೂಲದವನೆಂದು ಪೊಲೀಸರು ತಿಳಿಸಿದ್ದಾರೆ. ಬಂಧಿತನಿಂದ ಸುಮಾರು 7 ಲಕ್ಷ ರೂ. ಮೌಲ್ಯದ 163 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದೆ.

ಚಾಮರಾಜನಗರ ಜಿಲ್ಲೆ ಕುದೇರು ಗ್ರಾಮದ ಕುಟುಂಬವೊಂದರ ಸದಸ್ಯರು ದಸರಾ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆಂದು ಬಂದಿದ್ದರು. ಆ ವೇಳೆ ಸಮೀಪದ ಆದಾಯ ತೆರಿಗೆ ಕಚೇರಿ ಬಳಿ ಕಾರನ್ನು ಪಾರ್ಕ್ ಮಾಡಿದ್ದರು. ಫಲಪುಷ್ಪ ಪ್ರದರ್ಶನದಲ್ಲಿ ನೂಕುನುಗ್ಗಲು ಇರುತ್ತದೆ ಎಂಬ ಕಾರಣಕ್ಕೆ ಚಿನ್ನಾಭರಣವಿದ್ದ ವ್ಯಾನಿಟಿ ಬ್ಯಾಗ್ ಅನ್ನು ಕಾರಿನಲ್ಲೇ ಇಟ್ಟಿದ್ದರು. ಇದನ್ನು ಗಮನಿಸಿದ್ದ ಖದೀಮ, ಯಾವುದೋ ವಸ್ತುವಿನ ಸಹಾಯದಿಂದ ಕಾರಿನ ಗಾಜನ್ನು ಇಳಿಸಿ ಚಿನ್ನಾಭರಣವನ್ನು ಕದ್ದೊಯ್ದಿದ್ದ.



ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ನಜರ್‌ಬಾದ್ ಠಾಣೆ ಪೊಲೀಸರು, ಕಳ್ಳನಿಗಾಗಿ ಶೋಧ ನಡೆಸಿದ್ದರು. ಸದ್ಯ ಆರೋಪಿ ಸಿಕ್ಕಿಬಿದ್ದಿದ್ದು ಆತ ಕಳವು ಮಾಡಿದ್ದ ಚಿನ್ನಾಭರಣವನ್ನು ವಶಪಡಿಸಿಕೊಳ್ಳಲಾಗಿದೆ. ಡಿಸಿಪಿ ಗೀತ ಪ್ರಸನ್ನ ಮಾರ್ಗದರ್ಶನ, ದೇವರಾಜ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಕೆ.ಜೀವನ್, ಸಬ್ ಇನ್ಸ್‌ಪೆಕ್ಟರ್‌ಗಳಾದ ವೈಶಾಲಿ ಬಿರಾದರ್, ಕೆ.ರಘು ಹಾಗೂ ಸಿಬ್ಬಂದಿ ಎಸ್.ಸತೀಶ್ ಕುಮಾರ್, ಕಿರಣ್ ರಾಥೋಡ್, ಬಿ.ಡಿ. ಸಂತೋಷ್‌ಕುಮಾರ್, ಮಲ್ಲಿಕಾರ್ಜುನ, ಸವಿತಾ ಮಾನಪ್ಪವರ್ ಮತ್ತು ಸಿಡಿಆರ್ ಘಟಕದ ಪಿ.ಕುಮಾರ್ ಭಾಗವಹಿಸಿದ್ದರು.

ಮೈಸೂರು ವಿವಿ ಚಿನ್ನದ ಪದಕ ವಿದ್ಯಾರ್ಥಿನಿ ಈಗ ಕುಲಸಚಿವೆ

ಮೈಸೂರು, ನ.21– ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ಪಡೆದಿದ್ದ ವಿದ್ಯಾರ್ಥಿನಿ ಇದೀಗ ಇದೇ ವಿವಿಗೆ ಕುಲಸಚಿವೆಯಾಗಿ ನೇಮಕವಾಗಿದ್ದಾರೆ. ನೂತನ ಕುಲಸಚಿವೆ, ಕೆಎಎಸ್ ಅಧಿಕಾರಿ ವಿ.ಆರ್.ಶೈಲಜಾ ಅವರು ಮೈಸೂರು ವಿವಿಯ ವಿದ್ಯಾರ್ಥಿನಿ.



1998ರಲ್ಲಿ ಬಿಎ ಪದವಿ, 1999ರಲ್ಲಿ ಬಿ.ಎಡ್, 2001ರಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು ಆ ವೇಳೆ ನಾನಾ ವಿಭಾಗಗಳಲ್ಲಿ ಚಿನ್ನದ ಪದಕ ಹಾಗೂ ನಗದು ಬಹುಮಾನಕ್ಕೆ ಭಾಜನವಾಗಿದ್ದರು.

ಪದವಿಯಲ್ಲಿ 9 ಚಿನ್ನದ ಪದಕ ಹಾಗೂ 7 ನಗದು ಪುರಸ್ಕಾರಕ್ಕೆ ಭಾಜನರಾಗಿದ್ದ ಇವರು, ಬಿ.ಇಡಿ ಪದವಿಯಲ್ಲಿ ಪ್ರಥಮ ರ್‍ಯಾಂಕ್ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ್‍ಯಾಂಕ್‌ನೊಂದಿಗೆ 3 ಚಿನ್ನದ ಪದಕ ಹಾಗೂ ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದರು. ಓದಿನಲ್ಲಿ ಅತೀವ ಆಸಕ್ತಿಯಿದ್ದ ಶೈಲಜಾ ಅವರು ನಿರಂತರ ಅಧ್ಯಯನದಿಂದ ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದರು. 2006ರಲ್ಲಿ ಪ್ರೊಬೇಷನರಿ ಕೆಎಎಸ್ ಅಧಿಕಾರಿಯಾಗಿ ವೃತ್ತಿ ಆರಂಭಿಸಿದರು. ಮೈಸೂರು ಮಹಾನಗರ ಪಾಲಿಕೆಯ ವಲಯ ಆಯುಕ್ತರಾಗಿ, ರಾಮನಗರದಲ್ಲಿ ಡಿಯುಡಿಸಿ ವಿಭಾಗದ ಯೋಜನಾ ನಿರ್ದೇಶಕಿಯಾಗಿ, ಕಾವೇರಿ ನೀರಾವರಿ ನಿಗಮದ ಮುಖ್ಯ ಆಡಳಿತಾಧಿಕಾರಿಯಾಗಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಪಾಂಡವಪುರ ಉಪವಿಭಾಗದ ಹೆಚ್ಚುವರಿ ಆಯುಕ್ತರಾಗಿ, ನಂತರ ಮಂಡ್ಯ ಜಿಲ್ಲೆಯ ಎಡಿಸಿಯಾಗಿ ಕಾರ್ಯನಿರ್ವಹಿಸಿರುವ ಇವರು ಇದೀಗ ಪ್ರತಿಷ್ಠಿತ ಮೈಸೂರು ವಿವಿಯ ಕುಲಸಚಿವೆಯಾಗಿದ್ದಾರೆ. ಅದರಲ್ಲೂ ತಾವು ಶಿಕ್ಷಣ ಪಡೆದ ವಿವಿಯಲ್ಲೇ ಸೇವೆ ಸಲ್ಲಿಸುವ ಸಾರ್ಥಕತೆಯನ್ನೂ ಪಡೆದಿದ್ದಾರೆ.

ಮೈಸೂರು ವಿಮಾನ ನಿಲ್ದಾಣ ಉನ್ನತೀಕರಣಕ್ಕೆ 100 ಕೋಟಿ ರೂ. ಬಿಡುಗಡೆ





ಮೈಸೂರು,ನ.21(ಎಸ್‌ಬಿಡಿ)–ಮೈಸೂರು ವಿಮಾನ ನಿಲ್ದಾಣದ ಉನ್ನತೀಕರಣ ಹಾಗೂ ರನ್‌ವೇ ವಿಸ್ತರಣೆ ಯೋಜನೆಗೆ 2ನೇ ಹಂತದಲ್ಲಿ ಸರ್ಕಾರ 100 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ.

ಯೋಜನೆಗೆ ರಾಜ್ಯ ಸರ್ಕಾರ 319,13,90,625 ರೂ. ಮಂಜೂರು ಮಾಡಿದ್ದು, ಮೊದಲ ಹಂತದಲ್ಲಿ ಈಗಾಗಲೇ ಕೆಐಎಡಿಬಿಗೆ ಬಿಡುಗಡೆ ಮಾಡಿರುವ 50 ಕೋಟಿ ರೂ.ಗಳನ್ನು ಸಮರ್ಪಕವಾಗಿ ಬಳಕೆ ಮಾಡಲಾಗುತ್ತಿದೆ. ತ್ವರಿತವಾಗಿ ಕಾಮಗಾರಿ ಆರಂಭಿಸುವ ನಿಟ್ಟಿನಲ್ಲಿ ಹೆಚ್ಚಿನ ಅನುದಾನ ಬಿಡುಗಡೆಗೆ ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ 2ನೇ ಹಂತದಲ್ಲಿ 100 ಕೋಟಿ ರೂ. ಬಿಡುಗಡೆ ಮಾಡಿದ್ದು, ಕೆಐಎಡಿಬಿ ಮೂಲಕ ಭೂಸ್ವಾಧೀನ ಪ್ರಕ್ರಿಯೆಯನ್ನು ತುರ್ತಾಗಿ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಹಾಗೂ ಉನ್ನತೀಕರಣಗೊಳಿಸಲು ಅನುದಾನ ನೀಡುವಂತೆ ಸಂಸದ ಪ್ರತಾಪ್ ಸಿಂಹ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಮನವಿ ಮಾಡಿದ್ದರು. ಬಳಿಕ ಯೋಜನೆ ಪ್ರಸ್ತಾವನೆಯನ್ನು ಅನುಮೋದಿಸಿದ್ದ ಸರ್ಕಾರ ಅಗತ್ಯವಾದ 240 ಎಕರೆ ಭೂಸ್ವಾಧೀನಕ್ಕೆ ಅನುದಾನ ನೀಡಲು ಒಪ್ಪಿ, ಮೊದಲ ಹಂತದಲ್ಲಿ 50 ಕೋಟಿ ರೂ. ನೀಡಿತ್ತು. ಇದೀಗ 2ನೇ ಹಂತದಲ್ಲಿ 100 ಕೋಟಿ ರೂ.ಗಳನ್ನು ನ.19ರಂದು ಕೆಐಎಡಿಬಿಗೆ ಬಿಡುಗಡೆ ಮಾಡಲಾಗಿದೆ.

ಡಿಜಿಟಲ್ ಮಾರ್ಕೆಟಿಂಗ್ ಹುದ್ದೆಗೆ ನೇಮಕ

ಮೈಸೂರು,ನ.21–ಜಾಗತಿಕ ಡಿಜಿಟಲ್ ಮಾರ್ಕೆಟಿಂಗ್ ಉದ್ಯಮದಲ್ಲಿ 20 ವರ್ಷದ ಪ್ರವರ್ತಕರಾದ ಥಿಯರಮ್ ಇಂಡಿಯಾ, ಪದವೀಧರರು ಮತ್ತು ಡಿಪ್ಲೊಮಾ ಪದವೀಧರರನ್ನು (MCA & M.Tech ಹೊರತುಪಡಿಸಿ) ನೇಮಕ ಮಾಡಿಕೊಳ್ಳುತ್ತಿದೆ. ಕ್ಲೈಂಟ್ ಸರ್ವಿಸ್ ಅನಲಿಸ್ಟ್ ಹುದ್ದೆಗಾಗಿ ನಾವು ಸುಮಾರು 80 ಮುಕ್ತ ಸ್ಥಾನಗಳನ್ನು ಹೊಂದಿದ್ದೇವೆ. ಆಸಕ್ತ ಅಭ್ಯರ್ಥಿಗಳು ನ.23ರಂದು ಕ್ಯಾಂಪಸ್‌ಗೆ ಹಾಜರಾಗಬಹುದು. ನೋಂದಣಿ ಬೆಳಗ್ಗೆ 9ರಿಂದ 11ರವರೆಗೆ ಪ್ರಾರಂಭವಾಗುತ್ತದೆ. ಈ ಅವಕಾಶ ತಪ್ಪಿದ್ದಲ್ಲಿ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಮೈಸೂರು ಕ್ಯಾಂಪಸ್‌ಗೆ ಪ್ರತಿ ಬುಧವಾರದ ವಾಕ್–ಇನ್ ಡ್ರೈವ್‌ಗೆ ಹಾಜರಾಗಬಹುದು. ದೂ.919986592604 ಸಂಪರ್ಕಿಸಬಹುದು.

ನ.25ರಂದು ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘ ಅಸ್ತಿತ್ವಕ್ಕೆ

ಅಧ್ಯಕ್ಷರಾಗಿ ಪ್ರಕಾಶಕ ಡಿ.ಎನ್. ಲೋಕಪ್ಪ ಆಯ್ಕೆ

ಮೈಸೂರು, ನ. 21– ಗ್ರಂಥಗಳು ಮಾನವನ ಅನುಪಮ ಸೃಷ್ಟಿ. ಗ್ರಂಥಾಲಯಗಳು ಜ್ಞಾನದೇಗುಲಗಳು ಹಾಗೂ ಒಂದು ವಿಶ್ವವಿದ್ಯಾನಿಲಯವಿದ್ದಂತೆ. ಗ್ರಂಥಾಲಯದ ಮಹತ್ವವನ್ನು ಮನಗಂಡು ಕರ್ನಾಟಕ ಸರ್ಕಾರ ಸಾರ್ವಜನಿಕ ಗ್ರಂಥಾಲಯ ಇಲಾಖೆಯನ್ನು ತೆರೆದಿದೆ. ಅದು ಸುಸೂತ್ರವಾಗಿ ನಡೆಯಲು ಒಂದು ಕಾಯಿದೆಯನ್ನು ರೂಪಿಸಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸಿದೆ. ಆ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಲು 'ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘ'ವನ್ನು ಪ್ರಾರಂಭಿಸಲಾಗುತ್ತಿದೆ.

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಗೌರವಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಪ್ರಕಾಶಕ ಡಿ.ಎನ್.ಲೋಕಪ್ಪ, ಉಪಾಧ್ಯಕ್ಷರಾಗಿ ನಟರಾಜ ಚೌಧರಿ ಮತ್ತು ನೀ.ಗಿರಿಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಮಾನಸ, ಕಾರ್ಯದರ್ಶಿಯಾಗಿ ಯು.ಎಸ್. ಮಹೇಶ್, ಖಜಾಂಚಿಯಾಗಿ ಶಶಿಕುಮಾರ್, ಬಿ.ನಾಗೇಂದ್ರ ಅವರು ಜಂಟಿ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.



ಡಿ.ಎನ್.ಲೋಕಪ್ಪ

ಸದಸ್ಯರಾಗಿ ಶ್ರೀಮತಿ ಎಚ್.ಟಿ. ಶೈಲಜ, ಡಾ.ಎಚ್.ಎಸ್.ರುದ್ರೇಶ್, ಸ.ಚ.ಮಹದೇವನಾಯಕ, ಜೀನಹಳ್ಳಿ ಸಿದ್ಧಲಿಂಗಪ್ಪ, ಸಾತನೂರು ದೇವರಾಜ್, ಕೆ.ಸಿ. ಓಂಕಾರಪ್ಪ, ಎನ್.ಬೆಟ್ಟೇಗೌಡ, ಬಿ.ಎನ್.ಶ್ರೀನಿವಾಸ್ ಆಯ್ಕೆಯಾಗಿದ್ದಾರೆ. ಸಂಘದ ಉದ್ಘಾಟನೆ ಹಾಗೂ ರಾಜ್ಯೋತ್ಸವ ಸಮಾರಂಭವನ್ನು ನ.25ರ ಶುಕ್ರವಾರ ಸಂಜೆ 6 ಗಂಟೆಗೆ ರೋಟರಿ ಸ್ಕೂಲ್ (ಮುಡಾ ಮುಂಭಾಗ) ಜೆಎಲ್‌ಬಿ ರಸ್ತೆಯಲ್ಲಿರುವ ಎಫ್.ಕೆ. ಇರಾನಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಅಧ್ಯಕ್ಷತೆಯನ್ನು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ವಹಿಸಲಿದ್ದಾರೆ. ಉದ್ಘಾಟನೆಯನ್ನು ಮಹಾರಾಣಿ ಕಲಾ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಬಿ.ವಿ.ವಸಂತಕುಮಾರ್ ನೆರವೇರಿಸಲಿದ್ದಾರೆ.


ರಾಜ್ಯೋತ್ಸವ ಕುರಿತು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಎಡಿಸಿ ಡಾ.ಬಿ.ಎಸ್.ಮಂಜುನಾಥಸ್ವಾಮಿ ಆಗಮಿಸುವರು.

ಬೆಟ್‌ವೇ ಮೈಸೂರು ಚಳಿಗಾಲದ ರೇಸುಗಳು

ಮೈಸೂರು,ನ.21–ಮೈಸೂರು ರೇಸ್ ಕ್ಲಬ್‌ನಲ್ಲಿ 2022–23ನೇ ಸಾಲಿನ ಬೆಟ್‌ವೇ ಮೈಸೂರು ಚಳಿಗಾಲದ ರೇಸುಗಳು ನ.17ರಿಂದ ಫೆ 1, 2023ರವರೆಗೆ ನಡೆಯಲಿವೆ. ರೇಸುಗಳು ನ.26, 30, ಡಿಸೆಂಬರ್ 7, 14, 21, 28, ಜನವರಿ 4, 11, 18, 24 ಮತ್ತು ಫೆಬ್ರವರಿ 1ರಂದು ನಡೆಯಲಿವೆ. ಮಾಹಿತಿಗೆ ಮೊ. 98459 39904 ಸಂಪರ್ಕಿಸಬಹುದು.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.11.2022 ಮಂಗಳವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022 ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ : ಸ್ವಾತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಮೈಸೂರು ಜಿಲ್ಲಾ ಪೊಲೀಸ್** : ವಾರ್ಷಿಕ ಕ್ರೀಡಾಕೂಟ, ಉದ್ಘಾಟನೆ : ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಸ್ಥಳ: ಡಿಎಆರ್ ಕವಾಯತು ಮೈದಾನ, ಜ್ಯೋತಿನಗರ, ಬೆಳಗ್ಗೆ 8.30ಕ್ಕೆ.
- **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್** : 'ಗಿರಿಜಾ ಕಲ್ಯಾಣ', ಪ್ರಾತಃಕಾಲ ರುದ್ರಾಭಿಷೇಕ, ಸಂಜೆ ಪ್ರಾಕಾರೋತ್ಸವ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.
- **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ** : ಮಹಾ ಗಣಪತಿ ಹೋಮ, ಉಪ ಪೂಜೆ, ಪಾಂಚಗವ್ಯ, ಪಾಂಚಕಂ, ಕಳಸ ಪೂಜಾ, ಶವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ, ಕಳಸಾಭಿಷೇಕ, ಉದಯಾಸ್ಥಮಾನ ಪೂಜೆ, ದೀಪಾರಾಧನೆ, ಅತ್ತಾಳ ಪೂಜೆ, ಶ್ರೀ ಭೂತ ಬಲಿ ವಿಳಕ್ಕು, ಬೆಳಗ್ಗೆ–ಸಂಜೆ.
- **ಜೆಎಸ್‌ಎಸ್ ಮಹಾವಿದ್ಯಾಪೀಠ** : ಜೆಎಸ್‌ಎಸ್ ರಂಗೋತ್ಸವ–2022, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಉದ್ಘಾಟನೆ : ಚಲನಚಿತ್ರ ನಟ ಕಾರ್ತಿಕ ಮಹೇಶ್, ಜೆಎಸ್‌ಎಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳಿಂದ ಒಗ್ಗಟ್ಟಿನ ರಾಣಿ ನಾಟಕ ಪ್ರದರ್ಶನ, ರಚನೆ : ಕೆ. ರಾಮಯ್ಯ, ನಿರ್ದೇಶನ : ಶ್ರೀಮತಿ ಶಕುಂತಲಾ ಹೆಗಡೆ, ಸ್ಥಳ:ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10 ರಿಂದ.
- **ಶ್ರೀ ಕೃಷ್ಣ ತಾತ್ಪರ್ಯ ಯಕ್ಷವೃಂದ ಸಂಸ್ಥೆ** : ದಕ್ಷಿಣ ಕನ್ನಡ ಜಿಲ್ಲೆಯ ಅತಿಥಿ ಕಲಾವಿದರಾದ ಗಣೇಶ ಕೊಲೆಕಾಡಿ ವಿರಚಿತ 'ಭಕ್ತ ಸುಧಾಮ' ಮತ್ತು ವಿದ್ವಾನ್ ಕೃಷ್ಣಕುಮಾರ ವಿರಚಿತ 'ಗೋವರ್ಧನೋದ್ಧರಣ' ಭಕ್ತಿ ಪ್ರಧಾನ ಯಕ್ಷಗಾನ ಪ್ರಸಂಗ, ಸ್ಥಳ: ಕೃಷ್ಣಧಾಮದ ವಾಯು ಪ್ರಭವಸಭಾಂಗಣ, ಸರಸ್ವತಿಪುರಂ, ಸಂಜೆ 5ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 22 ಮಂಗಳವಾರ 2022

ಸಂಪುಟ: 43 | ಸಂಚಿಕೆ: 215 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ಶಾರೀಕ್‌ಗೆ ಅಂತಾರಾಷ್ಟ್ರೀಯ ಉಗ್ರ ಸಂಘಟನೆ ಸಂಪರ್ಕ

ಮಂಗಳೂರು, ನ. 21– ಮಂಗಳೂರಿನಲ್ಲಿ ಶನಿವಾರ ಆಟೋದಲ್ಲಿ ಕುಕ್ಕರ್ ಸ್ಫೋಟಗೊಂಡ ಪ್ರಕರಣದ ಶಂಕಿತ ಆರೋಪಿ ಅಂತರರಾಷ್ಟ್ರೀಯ ಉಗ್ರ ಸಂಘಟನೆಯ ಸಂಪರ್ಕ ಹೊಂದಿದ್ದ ಎಂದು ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದರು. ಮಂಗಳೂರಿನಲ್ಲಿ ಇಂದು ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕುಕ್ಕರ್ ಸ್ಫೋಟದ ಆರೋಪಿಯನ್ನು ತೀರ್ಥಹಳ್ಳಿಯ ಶಾರೀಕ್ ಎಂದು ಗುರುತಿಸಲಾಗಿದೆ ಎಂದು ಖಚಿತಪಡಿಸಿದರು. ಆತನ ಮಲತಾಯಿ ಶಬಾನ ಸೋದರಿಯರಾದ ಆತಿಯಾ, ಯಾಸ್ಮಿನ್ ಅವರುಗಳು ಆತನನ್ನು ಗುರುತಿಸಿದ್ದಾರೆ ಎಂದು ಅವರು ಹೇಳಿದರು. ಮೈಸೂರಿನಲ್ಲಿ ತಾನೇ ತಯಾರಿಸಿದ್ದ ಕುಕ್ಕರ್ ಬಾಂಬ್ ಸ್ಫೋಟಿಸಿ, ದುಷ್ಕೃತ್ಯವೆಸಗಲು ಆತ ತಾನು ಗುರುತಿಸಿದ್ದ ಜಾಗಕ್ಕೆ ಹೋಗುತ್ತಿದ್ದ. ಆದರೆ ಆತ ಗುರುತಿಸಿದ್ದ ಜಾಗ ಯಾವುದು ಎಂಬುದರ ▶ 8ನೇ ಪುಟಕ್ಕೆ

ಕಾನೂನು ಸುವ್ಯವಸ್ಥೆ ಎಡಿಜಿಪಿ ಅಲೋಕ್‌ಕುಮಾರ್



ತಾನೇ ತಯಾರಿಸಿದ ಕುಕ್ಕರ್ ಬಾಂಬ್‌ನೊಂದಿಗೆ ಫೋಟೋ ಕ್ಲಿಕ್ಕಿಸಿದ್ದ

ಐಸಿಸ್ ಉಗ್ರರೊಂದಿಗೆ ನಂಟು ಹೊಂದಿದ್ದ ಶಾರೀಕ್, ಎಕೆ–47 ಖರೀದಿಗೆ ಮುಂದಾಗಿದ್ದ

ಮೈಸೂರು, ನ.21(ಆರ್‌ಕೆ)– ಮೈಸೂರಿನಲ್ಲಿ ತಾನೇ ತಯಾರಿಸಿದ ಕುಕ್ಕರ್ ಬಾಂಬ್ ಹಿಡಿದು ಶಂಕಿತ ಉಗ್ರ ಮೊಹಮದ್ ಶಾರೀಕ್ ಮಂಗಳೂರಿನಲ್ಲಿ ಫೋಟೋ ಕ್ಲಿಕ್ಕಿಸಿಕೊಂಡಿದ್ದ ಎಂಬ ಮಾಹಿತಿ ಲಭ್ಯವಾಗಿದೆ.




ಮೈಸೂರಿನಿಂದ ಮಡಿಕೇರಿ, ಪುತ್ತೂರು ಮಾರ್ಗ ಮಂಗಳೂರಿಗೆ ತೆರಳಿದ್ದ ಆತ ಆಟೋದಲ್ಲಿ ಬಾಂಬ್ ಸ್ಫೋಟಗೊಳಿಸುವ ಮೊದಲು ಕುಕ್ಕರ್ ಬಾಂಬ್‌ನೊಂದಿಗೆ ಮೊಬೈಲ್‌ನಲ್ಲಿ ಫೋಟೋ ತೆಗೆದುಕೊಂಡಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ. ತಾನು ಎಕೆ–47 ಗನ್ ಅನ್ನು ಖರೀದಿಸಲೆತ್ನಿಸಿದ್ದ ಶಂಕಿತ ಶಾರೀಕ್, ಇಂಟರ್ ನೆಟ್‌ನಲ್ಲಿ ಅದರ ಬಳಕೆ ಬಗ್ಗೆಯೂ ತಿಳಿದುಕೊಂಡಿದ್ದ. ಐಸಿಸ್ ಉಗ್ರರು ಹಾಗೂ ▶ 8ನೇ ಪುಟಕ್ಕೆ

ಕಾಡಾನೆ ಹಾವಳಿ ತಡೆಗೆ ಮೈಸೂರು–ಕೊಡಗು ಸೇರಿ

ನಾಲ್ಕು ಜಿಲ್ಲೆಗಳಲ್ಲಿ ಟಾಸ್ಕ್‌ಫೋರ್ಸ್ ರಚನೆ

ಬೆಂಗಳೂರು, ನ.21(ಕೆಎಂಶಿ)– ಕಾಡಾನೆ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಆನೆ ಟಾಸ್ಕ್ ಫೋರ್ಸ್ ರಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಭೆಯಲ್ಲಿ ನಿರ್ಧರಿಸಿ, ಸರ್ಕಾರಿ ಆದೇಶ ಹೊರಬಿದ್ದಿದೆ.



ಹಾಸನ, ಚಿಕ್ಕಮಗಳೂರು, ಮೈಸೂರು, ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಡಾನೆ ಹಾವಳಿ ಹೆಚ್ಚಳವಾಗಿರುವುದರಿಂದ ಇದನ್ನು ತಡೆಗಟ್ಟಲು ಪ್ರತಿ ಜಿಲ್ಲೆಗೊಂದರಂತೆ ಉಪಅರಣ್ಯ ಸಂರಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಎಲಿಫೆಂಟ್ ಟಾಸ್ಕ್‌ಫೋರ್ಸ್ ರಚಿಸಲಾಗುವುದು. ಟಾಸ್ಕ್‌ಫೋರ್ಸ್‌ಗಳನ್ನು ತಕ್ಷಣದಿಂದಲೇ ರಚಿಸಿ ಕಾರ್ಯಪ್ರವೃತ್ತರಾಗಬೇಕಿದ್ದು, ಆಯಾ ಅರಣ್ಯ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಲ್ಲಿ ಈ ಕೆಳಕಂಡಂತೆ ಕಾರ್ಯನಿರ್ವಹಿಸಬೇಕಿದೆ ಎಂದು ಆದೇಶದಲ್ಲಿ ಸೂಚಿಸಲಾಗಿದೆ. ಕಾಡಾನೆ



ಹಾವಳಿ ಇರುವ ಪ್ರದೇಶಗಳಲ್ಲಿ ಗಸ್ತು ತಿರುಗುವುದು, ಜನವಸತಿ, ಕೃಷಿ ಪ್ರದೇಶ ಹಾಗೂ ಕಾಫಿ ಎಸ್ಟೇಟ್‌ಗಳಲ್ಲಿ ಆನೆಗಳ ಚಲನವಲನ ಗುರುತಿಸಿ ಅರಣ್ಯಕ್ಕೆ ಆನೆಗಳನ್ನು ಹಿಮ್ಮೆಟ್ಟಿಸುವುದು ಮುಂತಾದ ಕಾರ್ಯಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಲ್ಲಿ ಕೈಗೊಳ್ಳಬೇಕು.

ಕಾಡಾನೆ ಹಾವಳಿ ಕಂಡುಬರುವ ಸ್ಥಳಗಳಲ್ಲಿ ಆನೆಗಳ ಚಲನವಲನಗಳ ಬಗ್ಗೆ ಮಾಹಿತಿ ನೀಡುವುದು ಹಾಗೂ ಅರಣ್ಯ ಪ್ರದೇಶದೊಳಗೆ ಸಂಚರಿಸದಂತೆ ಸಾರ್ವಜನಿಕರಿಗೆ ಅರಿವು ಮೂಡಿಸುವುದು. ಪ್ರತಿ ಟಾಸ್ಕ್ ಫೋರ್ಸ್ ಕೇಂದ್ರಸ್ಥಾನದಲ್ಲಿ ನಿಯಂತ್ರಣ ಕೊಠಡಿ ಸ್ಥಾಪಿಸಿ ದೂರವಾಣಿ ಸಂಖ್ಯೆಯನ್ನು ಪ್ರಚುರಪಡಿಸುವುದು. ಆನೆಗಳನ್ನು ಹಿಮ್ಮೆಟ್ಟಿಸಲು ಅಗತ್ಯವಿರುವ ವಾಕಿಟಾಕಿ, ಬಂದೂಕು, ಪಟಾಕಿ ಇನ್ನಿತರೆ ಅವಶ್ಯಕ ಸಲಕರಣೆಗಳನ್ನು ಅರಣ್ಯ ಪಡೆ ಮುಖ್ಯಸ್ಥರು ಒದಗಿಸುವುದು. ಅರಣ್ಯ ಪಡೆ ಮುಖ್ಯಸ್ಥರು ಜಿಲ್ಲಾ ಟಾಸ್ಕ್ ಫೋರ್ಸ್‌ಗೆ ವಲಯ ಅರಣ್ಯಾಧಿಕಾರಿ, ಉಪವಲಯ ಅರಣ್ಯಾಧಿಕಾರಿ ಹಾಗೂ ಅರಣ್ಯ ರಕ್ಷಕರನ್ನು ಸ್ಥಳ ನಿಯುಕ್ತಿಗೊಳಿಸಿ ಕೂಡಲೇ ಆದೇಶ ಹೊರಡಿಸುವುದು. ಆನೆ ಹಾವಳಿ ಪ್ರದೇಶಗಳಿಗೆ ಕೂಡಲೇ ತಲುಪಲು ಅನುಕೂಲವಾಗುವಂತೆ ಪ್ರತಿ ಜಿಲ್ಲಾ ಟಾಸ್ಕ್‌ಫೋರ್ಸ್‌ಗೆ ಮೂರು ಬೊಲೆರೋ ಜೀಪ್‌ಗಳನ್ನು ಒದಗಿಸುವುದು ಹಾಗೂ ಕ್ಯಾಂಟರ್ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ನಿಯೋಜಿಸುವುದು. ಆನೆಗಳನ್ನು ಹಿಮ್ಮೆಟ್ಟಿಸುವ ಸಂದರ್ಭಗಳಲ್ಲಿ ಪೊಲೀಸ್ ಇಲಾಖೆ ಸಹಾಯ ಪಡೆಯುವುದು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ವಿಧಾನಸಭಾ ಚುನಾವಣೆಗೆ ಹೊಸ ನಾಯಕತ್ವ: ಬಿಜೆಪಿ ವರಿಷ್ಠರ ನಿರ್ಧಾರ

ಬೆಂಗಳೂರು, ನ.21(ಕೆಎಂಶಿ)– ಮುಂಬರುವ ವಿಧಾನಸಭೆ ಚುನಾವಣೆಯನ್ನು ಹೊಸ ನಾಯಕತ್ವದಲ್ಲಿ ಎದುರಿಸಲು ಬಿಜೆಪಿ ವರಿಷ್ಠರು ನಿರ್ಧರಿಸಿದ್ದಾರೆ.

ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ರಾಜ್ಯದ ಮುಂಚೂಣಿಯಲ್ಲಿರುವ ನಾಯಕರನ್ನು ಬದಿಗಿರಿಸಿ ಅಚ್ಚರಿ ಮುಖಕ್ಕೆ ಮಣೆ ಹಾಕಲಿದ್ದಾರೆ. ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿದ್ದರೂ ಅವರನ್ನು ಯಾವುದೇ ರೀತಿ ಮೂಲೆಗುಂಪು ಮಾಡದೇ ಚುನಾವಣೆಗೆ ಹೊಸ ಪ್ರತಿಭೆಯನ್ನು ಪಕ್ಷ ಬಿಂಬಿಸಲಿದೆ.

ಬೊಮ್ಮಾಯಿ ಸರ್ಕಾರದ ಬಗ್ಗೆ ಪದೇ ಪದೆ ಅಪಸ್ವರಗಳು ಕೇಳಿಬಂದು ಮತದಾರರಲ್ಲಿ ಗೊಂದಲ ನಿರ್ಮಾಣವಾಗಿದೆ. ಈ ಗೊಂದಲಕ್ಕೆ ತೆರೆ ಎಳೆಯುವುದಕ್ಕಾಗಿ ಪಕ್ಷ ಈ ನಿರ್ಧಾರಕ್ಕೆ ಬಂದಿದೆ.

ಉತ್ತರ ಪ್ರದೇಶ ಚುನಾವಣೆ ಹೊರತುಪಡಿಸಿ ವಿವಿಧ ರಾಜ್ಯಗಳ ಚುನಾವಣೆಯಲ್ಲೂ ಅನುಸರಿಸಿದ ತಂತ್ರಗಾರಿಕೆಯನ್ನು 2023ರ ರಾಜ್ಯದ ವಿಧಾನಸಭೆ ಚುನಾವಣೆಗೂ ಅನ್ವಯವಾಗುತ್ತದೆ.

ಹೊಸ ನಾಯಕತ್ವದ ಜತೆಗೆ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಣಕ್ಕಿಳಿದಿದ್ದ ನೂರಕ್ಕೂ ಹೆಚ್ಚು ಅಭ್ಯರ್ಥಿಗಳ ಬದಲಾವಣೆ ಆಗಲಿದೆ. ಇದರಲ್ಲಿ ಹಾಲಿ ಶಾಸಕರು ಮತ್ತು ಪರಾಭವಗೊಂಡವರು ಸೇರಿದ್ದಾರೆ.

ಕಳೆದ ಚುನಾವಣೆಯಲ್ಲಿ ಗೆದ್ದವರ ಪೈಕಿ ಎಪ್ಪತ್ತು ವರ್ಷ ಮೀರಿದವರು, ಜನಪ್ರಿಯತೆ ಕಳೆದುಕೊಂಡವರು, ಪಕ್ಷದ ವೈಚಾರಿಕತೆಯ ವಿಷಯದಲ್ಲಿ ಕೊರತೆ ಎದುರಿಸುತ್ತಿರುವವರಿಗೆ ಈ ಬಾರಿ ಟಿಕೆಟ್ ತಪ್ಪಲಿದೆ. ಕಳೆದ ನಾಲ್ಕು ಚುನಾವಣೆಗಳಲ್ಲಿ ರಾಜ್ಯದ 157 ಕ್ಷೇತ್ರಗಳಲ್ಲಿ ಬಿಜೆಪಿ ಒಂದಲ್ಲ, ಒಂದು ಬಾರಿ ಗೆದ್ದಿದ್ದು, ಆ ಕ್ಷೇತ್ರಗಳಿಗೆ ಮೊದಲ ಆದ್ಯತೆ ನೀಡಿ ಗೆಲ್ಲುವವರ ಅಂತಿಮ ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಗೆದ್ದೇ ಗೆಲ್ಲುವ, ಸ್ವಲ್ಪ ಪ್ರಯತ್ನಿಸಿದರೂ ಗೆಲ್ಲುವ, ಎದುರಾಳಿಯನ್ನು ಕಟ್ಟಿ ಹಾಕಲು ನೆರವು ನೀಡಿದರೆ ಗೆಲುವಿನ ದಡ ಸೇರುವವರು ಯಾರು ಎಂದು ಈ ಕ್ಷೇತ್ರಗಳಲ್ಲಿ ಹುಡುಕಾಟ ನಡೆಸಲಾಗಿದೆ. ಸೋಲುವ ಲಕ್ಷಣ ಕಂಡರೆ ಅಂತವರಿಗೆ ನಿರ್ದಾಕ್ಷಿಣ್ಯವಾಗಿ ಟಿಕೆಟ್ ತಪ್ಪಿಸಲು ವರಿಷ್ಠರು ಮುಂದಾಗಿದ್ದಾರೆ. ▶ 8ನೇ ಪುಟಕ್ಕೆ

ವಿಧಾನಸಭೆ ಚುನಾವಣೆ ಟಿಕೆಟ್‌ಗಾಗಿ ಕೊನೆಗೂ ಅರ್ಜಿ ಸಲ್ಲಿಸಿದ ಸಿದ್ದರಾಮಯ್ಯ

ಸ್ಪರ್ಧಿಸುವ ಕ್ಷೇತ್ರದ ಗುಟ್ಟು ಬಿಡದ ಸಿದ್ದು

ಬೆಂಗಳೂರು: 2023ರಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಲು ಇಂದು(ನವೆಂಬರ್ 21) ಕೊನೆ ದಿನವಾಗಿದ್ದು, ಅಂತಿಮವಾಗಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಟಿಕೆಟ್‌ಗಾಗಿ ತಮ್ಮ ಆಪ್ತ ಸಹಾಯಕ ರಿಂದ ಅರ್ಜಿ ಹಾಕಿಸಿದ್ದಾರೆ. ಈಗಾಗಲೇ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ಕನಕಪುರ ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿದ್ದರು. ಆದರೆ, ಸಿದ್ದರಾಮಯ್ಯ ಅವರು ಯಾವ ಕ್ಷೇತ್ರದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಲಿದ್ದಾರೆ ಎನ್ನುವ ತೀವ್ರ ಕುತೂಹಲ ಮೂಡಿಸಿತ್ತು. ಇದೀಗ ಸಿದ್ದರಾಮಯ್ಯವರು ಇಂದು (ಸೋಮವಾರ) ತಮ್ಮ ಆಪ್ತ ಸಹಾಯಕರಾದ ಪ್ರಭಾಕರ್, ▶ 8ನೇ ಪುಟಕ್ಕೆ



ಜ.1ರಿಂದ ಎಲ್ಲಾ ಹಂತದಲ್ಲೂ ಕನ್ನಡ ಕಡ್ಡಾಯ

ಬೆಂಗಳೂರು, ನ.21(ಕೆಎಂಶಿ)– ಹೊಸವರ್ಷ ಜನವರಿ ಒಂದರಿಂದ ಎಲ್ಲಾ ಹಂತಗಳಲ್ಲಿ ಕನ್ನಡ ಕಡ್ಡಾಯಗೊಳಿಸಿ ಜಾರಿಗೊಳಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿಯಲ್ಲಿ ನಡೆಯುವ ಚಳಿಗಾಲದ ಅಧಿವೇಶನದಲ್ಲಿ ಈ ಸಂಬಂಧ ವಿಸ್ತೃತ ಚರ್ಚೆ ನಡೆಸಿ ಕನ್ನಡ ಕಡ್ಡಾಯ ಮಸೂದೆಗೆ ಅನುಮೋದನೆ ಪಡೆದುಕೊಳ್ಳಲಾಗುವುದು.



ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ, ನ್ಯಾಯಾಲಯದಲ್ಲಿ ಕನ್ನಡದ ಬಳಕೆ ಮತ್ತು ಸರ್ಕಾರದ ಎಲ್ಲಾ ಹಂತಗಳಲ್ಲಿ ಕನ್ನಡ ಬಳಕೆ ಕಡ್ಡಾಯ ಮಾಡಲಾಗುವುದು.



ಕರ್ನಾಟಕದಲ್ಲಿ ಇನ್ನು ಮುಂದೆ ಹೊಸ ಕೈಗಾರಿಕೆಗಳು ಸ್ಥಾಪನೆಯಾದರೆ, ಇಂತಿಷ್ಟು ಪ್ರಮಾಣದಲ್ಲಿ ಕನ್ನಡಿಗರಿಗೆ ಉದ್ಯೋಗ ಕಲ್ಪಿಸಬೇಕು. ಒಂದು ವೇಳೆ ನಮ್ಮವರಿಗೆ ಉದ್ಯೋಗ ನೀಡದಿದ್ದರೆ, ಆ ಕಂಪನಿ ಅಥವಾ ಸಂಸ್ಥೆಗೆ ನೀಡುವ ಎಲ್ಲಾ ಸೌಲಭ್ಯ ಕಡಿತಗೊಳಿಸಲಾಗುವುದು. ಸವಲತ್ತು ಪಡೆದು ಅನುಷ್ಠಾನಗೊಳಿಸದಿದ್ದರೆ, ದಂಡ ಸೇರಿದಂತೆ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ. ಕನ್ನಡ ಕಡ್ಡಾಯ ಕೇವಲ ಕೈಗಾರಿಕಾ ಉದ್ದಿಮೆಗಷ್ಟೇ ಅಲ್ಲದೆ, ಮಾಹಿತಿ ತಂತ್ರಜ್ಞಾನ ವಿಭಾಗಕ್ಕೂ ವಿಸ್ತರಣೆ ಆಗಲಿದೆ ಎಂದರು. ರಾಜ್ಯಾದ್ಯಂತ ಕನ್ನಡ ತಾಯಿ ಭುವನೇಶ್ವರಿಯ ಏಕರೂಪದ ಭಾವಚಿತ್ರವನ್ನು ಬಳಸಲು ಸರ್ಕಾರಿ ಆದೇಶ ಹೊರಡಿಸಲಿದೆ.

ರಾಜ್ಯದಲ್ಲಿ ಕನ್ನಡ ತಾಯಿ ಭುವನೇಶ್ವರಿಯ ಭಾವಚಿತ್ರವನ್ನು ಬಳಸುವಾಗ ದುರ್ಗಾದೇವಿ, ಸರಸ್ವತಿ ಸೇರಿದಂತೆ ಹಲವು ಚಿತ್ರಗಳನ್ನು ಬಳಸುವುದನ್ನು ತಪ್ಪಿಸಲು ಏಕರೂಪದ ಕನ್ನಡ ತಾಯಿ ಭುವನೇಶ್ವರಿಯ ಚಿತ್ರವನ್ನು ಸರ್ಕಾರವೇ ಬಿಡುಗಡೆ ಮಾಡಲಿದೆ. ಈ ಸಂಬಂಧ ರಚಿಸಲಾದ ಡಿ.ಮಹೇಂದ್ರ ನೇತೃತ್ವದ ಸಮಿತಿ ನಾಡಗೀತೆಯಿಂದ ಹಿಡಿದು ಕರ್ನಾಟಕದ ಸಕಲ ವೈಶಿಷ್ಟ್ಯಗಳನ್ನು ಗಮನಿಸಿ ಕಲಾವಿದ ಸೋಮಶೇಖರ್ ಅವರ ಮೂಲಕ ಭುವನೇಶ್ವರಿಯ ಚಿತ್ರವೊಂದನ್ನು ತಯಾರಿಸಿ ▶ 8ನೇ ಪುಟಕ್ಕೆ

ಪ.ಮಲ್ಲೇಶ್ ಹೇಳಿಕೆ ವಿರೋಧಿಸಿ, ಕಾನೂನು ಕ್ರಮಕ್ಕೆ ಆಗ್ರಹಿಸಿ

ಮೈಸೂರಲ್ಲಿ ಬ್ರಾಹ್ಮಣ ಸಮುದಾಯದ ಬೃಹತ್ ಪ್ರತಿಭಟನಾ ರ್‍ಯಾಲಿ

ಮೈಸೂರು, ನ.21(ಆರ್‌ಕೆಬಿ)– ಬ್ರಾಹ್ಮಣ ಸಮುದಾಯದ ಬಗ್ಗೆ ನಿಂದಿಸಿ ಮಾತನಾಡಿದರೆಂದು ಆರೋಪಿಸಿ ವಿಚಾರವಾದಿ ಪ.ಮಲ್ಲೇಶ್ ವಿರುದ್ಧ ಮೈಸೂರಿನಲ್ಲಿ ಬ್ರಾಹ್ಮಣ ಸಮುದಾಯ ಸಿಡಿದೆದ್ದಿದ್ದು, ಸೋಮವಾರ ಬೃಹತ್ ರ್‍ಯಾಲಿ ನಡೆಸಿದರು. ಮಲ್ಲೇಶ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ವಿಪ್ರ ಪ್ರೊಫೆಷನಲ್ ಫೋರಂ, ಅಖಿಲ ಕರ್ನಾಟಕ ಬ್ರಾಹ್ಮಣ ಸಮುದಾಯ, ವಿಪ್ರ ಮಹಿಳಾ ಸಂಘಗಳು, ಬ್ರಾಹ್ಮಣ ಯುವ ಸಂಘಟನೆಗಳ, ಸಾವಿರಾರು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಉತ್ತರಾದಿ ಮಠ ರಸ್ತೆಯಲ್ಲಿರುವ ಶಂಕರ ಸಮುದಾಯ ಭವನದ ಆವರಣದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ, ಮಲ್ಲೇಶ್ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಮಾತಿಗೆ ಮಿತಿ ಇರಲಿ–ಸಮಾಜಕ್ಕೆ ಇದು ಹಿತ, ದೇಶಪ್ರೇಮಿಗಳೇ ದುಷ್ಟರನ್ನ ದೂರವಿಡಿ, ಬ್ರಾಹ್ಮಣ್ಯ ಉಳಿಯಲಿ–ಬ್ರಾಹ್ಮಣ ವಿರೋಧಿ ಅಳಿಯಲಿ, ಬ್ರಾಹ್ಮಣ ನಿಂದನೆ ತೊಲಗಲಿ– ಶಾಂತಿ ಸಾಮರಸ್ಯ ಮೂಡಲಿ ಇತ್ಯಾದಿ ಘೋಷಣಾ ಫಲಕಗಳನ್ನು ಪ್ರತಿಭಟನಾಕಾರರು ಪ್ರದರ್ಶಿಸಿದರು. ಶಾಸಕ ಎಸ್.ಎ.ರಾಮದಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಎಂಎಲ್‌ಸಿ





ಗೋ.ಮಧುಸೂದನ್ ಇನ್ನಿತರರ ನೇತೃತ್ವ ವಹಿಸಿದ್ದರು. ಶಂಕರ ಸಮುದಾಯ ಭವನದ ಆವರಣದಿಂದ ಆರಂಭವಾದ ಮೆರವಣಿಗೆ ಗನ್‌ಹೌಸ್ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ನಡೆಯಿತು. ಅಲ್ಲಿ ಬ್ರಾಹ್ಮಣ ಮುಖಂಡರು ಇನ್ನಿತರರು ಮಾತನಾಡಿದರು. ಬ್ರಾಹ್ಮಣರನ್ನು ನಿಂದಿಸಿರುವ ಪ.ಮಲ್ಲೇಶ್ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೆ.ಆರ್. ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ತಮ್ಮ ಸಮ್ಮುಖದಲ್ಲಿಯೇ ಬ್ರಾಹ್ಮಣರನ್ನು ನಿಂದಿಸಿದ ಪ.ಮಲ್ಲೇಶ್ ಅವರಿಗೆ ಬ್ರಾಹ್ಮಣರ ಬಗ್ಗೆ ಮಾತನಾಡಬೇಡಿ ಎಂದು ಸಿದ್ದರಾಮಯ್ಯ ವೇದಿಕೆಯಲ್ಲೇ ಬುದ್ಧಿ ಹೇಳಬಹುದಿತ್ತು. ಆದರೆ ಮಲ್ಲೇಶ್ ಬ್ರಾಹ್ಮಣರನ್ನು ನಿಂದಿಸುತ್ತಿದ್ದರೆ ಅವರು ಮೌನವಾಗಿರುವುದು ನೋಡಿದರೆ, ಸಿದ್ದರಾಮಯ್ಯ ಅವರ ಭಾವನೆ ಏನು? ಉದ್ದೇಶವೇನು? ಬೇರೆ ಪ್ರಮುಖ ಸಮಾಜದ ಬಗ್ಗೆ ಮಾತನಾಡಿದರೆ ಆ ಸಮಾಜ ತಿರುಗಿ ಬೀಳುತ್ತದೆಂಬ ಭಯ ಇರುತ್ತದೆ. ಆದರೆ ಬ್ರಾಹ್ಮಣರು ಹಾಗೆ ಮಾಡುವುದಿಲ್ಲ ಎಂದು ಬಹಳ ಜನ ಬ್ರಾಹ್ಮಣರ ಬಗ್ಗೆ ಮಾತನಾಡುತ್ತಾರೆ. ಹಾಗಾಗಿ ಅಂಥವರಿಗೆ ಈ ಪ್ರತಿಭಟನೆ ಮೂಲಕ ಎಚ್ಚರಿಕೆ ನೀಡುತ್ತಿದ್ದೇವೆ. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಪರಂಪರೆ, ಧರ್ಮ, ಭಾಷೆ, ಸಂಗೀತ, ಕ್ರೀಡೆ ಇವೆಲ್ಲವನ್ನು ಬೆಳೆಸುತ್ತಾ, ತಮ್ಮ ಪಾಡಿಗೆ ▶ 8ನೇ ಪುಟಕ್ಕೆ

“ಬ್ರಾಹ್ಮಣರ ಬಗ್ಗೆ ಸಿದ್ದರಾಮಯ್ಯರ ಆಪ್ತ ಅವಹೇಳನಕರವಾಗಿ ಮಾತನಾಡಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಬ್ರಾಹ್ಮಣರ ಬಗ್ಗೆ ಮಾತನಾಡುವ ಕನಿಷ್ಠ ನೈತಿಕತೆ, ಹಕ್ಕು ಅವರಿಗಿಲ್ಲ. ಮದುವೆ, ಮುಂಜಿ, ತಿಥಿ, ಹೋಮ, ಹವನಾದಿಗಳಿಗೆ ಬ್ರಾಹ್ಮಣರು ಬೇಕು. ಸಮಸ್ಯೆ ಬಂದರೆ ಬ್ರಾಹ್ಮಣ ಜೋತಿಷಿಗಳು ಬೇಕು. ಎಲ್ಲದಕ್ಕೂ ಬ್ರಾಹ್ಮಣರು ಬೇಕು. ಬೈಯ್ಯಲು ಕೂಡ ಬ್ರಾಹ್ಮಣರೆ ಬೇಕೇ? ಮೈಸೂರಿನ ಮಠಗಳು ಕೂಡಲೇ ಇಂಥವನ್ನು ತಮ್ಮ ಮಠಗಳಿಗೆ ಸೇರಿಸಬಾರದು. ಎಸ್.ಎಲ್. ಭೈರಪ್ಪನವರ ಕಾಲಿನ ಕಸಕ್ಕೂ ಇಲ್ಲದವರು ಅವರ ಬಗ್ಗೆ ಮಾತನಾಡುತ್ತಾರೆ. ರಂಗಾಯಣದಲ್ಲಿ ಒಳ್ಳೆಯ ಕೆಲಸ ಮಾಡುತ್ತಿರುವ ಅಡ್ಡಂಡ ಕಾರ್ಯಪ್ಪ ಬಗ್ಗೆ ಮಾತನಾಡುತ್ತಾರೆ. ಆ ವ್ಯಕ್ತಿಗೆ ಪಾಠ ಕಲಿಸುವ ಕೆಲಸ ಮಾಡಬೇಕಿದೆ. ಅವರ ಬಾಯಲ್ಲಿ ಬಂದಿರುವ ಮಾತುಗಳು ಸಿದ್ದರಾಮಯ್ಯರ ಅಂತರಾಳದಿಂದ ಬಂದಿರುವುದು. ಸಿದ್ದರಾಮಯ್ಯನವರೇ, ಯದ್ವಾತದ್ವಾ ಮಾತನಾಡುವವರನ್ನು ಜೊತೆಯಲ್ಲಿಟ್ಟುಕೊಂಡು ಸಮಾಜಕ್ಕೆ ಏನು ಸಂದೇಶ ಕೊಡುತ್ತೀರಿ? ಧರ್ಮ ಒಡೆಯುವ ಇಂತಹ ವ್ಯಕ್ತಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕಾಗುತ್ತದೆ.

–ಪ್ರತಾಪ್‌ಸಿಂಹ, ಮೈಸೂರು–ಕೊಡಗು ಸಂಸದ

ಶಾಸಕ ರಾಮದಾಸ್ ಕಾಲಿಗೆ ನಮಸ್ಕರಿಸಿದ ಪ್ರತಾಪ್‌ಸಿಂಹ

ಮೈಸೂರು, ನ.21(ಆರ್‌ಕೆಬಿ)– ಬಿಜೆಪಿಯ ಹಿರಿಯ ಶಾಸಕ ಎಸ್.ಎ.ರಾಮದಾಸ್ ಅವರ ಕಾಲಿಗೆ ನಮಸ್ಕರಿಸುವ ಮೂಲಕ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ತಮ್ಮ ಮತ್ತು ರಾಮದಾಸ್ ನಡುವೆ ಯಾವುದೇ ಗೊಂದಲ ಇಲ್ಲ ಎಂದು ತೋರಿಸಿದ್ದಾರೆ. ಸೋಮವಾರ ಮೈಸೂರಿನಲ್ಲಿ ಬ್ರಾಹ್ಮಣ ಸಮುದಾಯದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಪ್ರತಾಪ್‌ಸಿಂಹ ಏಕಾಏಕಿ ಶಾಸಕ ರಾಮದಾಸ್ ಕಾಲಿಗೆ ನಮಸ್ಕರಿಸುವ ಮೂಲಕ ಎಲ್ಲರಲ್ಲೂ ಆಶ್ಚರ್ಯ ಮೂಡಿಸಿದರು. ಇತ್ತೀಚೆಗೆ ಊಟಿ ರಸ್ತೆಯಲ್ಲಿ ಗುಂಬಜ್ ಮಾದರಿಯ ಬಸ್ ಶೆಲ್ಟರ್ ನಿರ್ಮಾಣ ಮಾಡಲಾಗಿದೆ. ಅದನ್ನು ನಾನೇ ಕೆಡವುತ್ತೇನೆಂದು ಪ್ರತಾಪ್‌ಸಿಂಹ ಹೇಳಿಕೆ ನೀಡಿದ್ದರು. ಅದಕ್ಕೆ ಪ್ರತಿಯಾಗಿ ಶಾಸಕ ರಾಮದಾಸ್ ಅವರು ಇದು ಅರಮನೆ ಮಾದರಿಯಲ್ಲಿ ನಿರ್ಮಿಸಲಾಗಿದೆ. ನನಗೆ ಕಿರುಕುಳ ನೀಡಲಾಗುತ್ತಿದೆ ಎಂದು ಪ್ರತಿಕ್ರಿಯಿಸಿದ್ದರು. ಈ ಇಬ್ಬರು ನಾಯಕರ ವಾಕ್ಸಮರ ತೀವ್ರ ಚರ್ಚೆಗೂ ಕಾರಣವಾಗಿತ್ತು. ಈ ಇಬ್ಬರ ನಡೆಯನ್ನು ವಿಪಕ್ಷಗಳು ಟೀಕಿಸಿದ್ದವು. ಇಬ್ಬರು ನಾಯಕರ ವಾಕ್ಸಮರದಿಂದ ಪಕ್ಷಕ್ಕೆ ಮುಜುಗರ ಉಂಟು ಮಾಡುತ್ತಿದೆ ಎಂದು ಪಕ್ಷದ ಮುಖಂಡರು, ಕಾರ್ಯಕರ್ತರ ದೂರಿನ ಮೇರೆಗೆ ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ಇಬ್ಬರಿಗೂ ತಿಳಿಹೇಳಿದ್ದರು ಎನ್ನಲಾಗಿದೆ. ಇದೀಗ ರಾಮದಾಸ್ ಕಾಲಿಗೆರ ನಮಸ್ಕರಿಸಿದ ಪ್ರತಾಪ್‌ಸಿಂಹ ನಡೆಯ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಇಬ್ಬರ ವಾಕ್ಸಮರ ಅಂತ್ಯಗೊಂಡಿದೆ ಎಂದು ನೆಟ್ಟಿಗರು ಸಮಾಧಾನ ವ್ಯಕ್ತಪಡಿಸಿದ್ದಾರೆ.



ನಕ್ಕರೆ ಅದೇ ಸ್ವರ್ಗ

ಅಧಿಕಾರಿ : ನಮಗೆ ಒಬ್ಬ ಜವಾಬ್ದಾರಿಯುತ ನೌಕರ ಬೇಕಾಗಿದ್ದಾನೆ.
ಅಭ್ಯರ್ಥಿ : ಹಾಗಿದ್ರೆ, ಅದಕ್ಕೆ ನಾನೇ ಯೋಗ್ಯ ಸಾರ್, ನನ್ನ ಹಿಂದಿನ ಆಫೀಸಿನಲ್ಲಿ ಎಲ್ಲಾ ತಪ್ಪಿಗೂ ನೀನೇ 'ಜವಾಬ್ದಾರಿ' ಅಂತಿದ್ರು!


ಮೈಸೂರು ಮಿತ್ರ
ಮಂಗಳವಾರ, 22 ನವೆಂಬರ್ 2022
ಸತ್ಯೇನೋತ್ತಭಿತಾ ಭೂಮಿ!! ನಹಿ ಸತ್ಯಾತ್ಪರೋ ಧರ್ಮ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ನಮ್ಮ ನಿಜವಾದ ಮಿತ್ರನೆಂದರೆ ಉಳಿತಾಯದಲ್ಲಿರುವ ಹಣದಂತೆ ಆಪತ್ಕಾಲದಲ್ಲಿ ನಮಗೆ ಕೂಡಲೇ ಸಹಾಯಕವಾಗುವಂತಹವನು
– ಬೆಂಜಮಿನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು
{ಕೃತಿಯಿಲ್ಲದ ಮಾತು
{ಕಸ ಬೆಳೆದ ತೋಟದಂತೆ

ಸಂವಿಧಾನವೇ ಸಾರ್ವಭೌಮ

"ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ವ್ಯವಸ್ಥೆಗೊಳಿಸಲು ಮತ್ತು ಅದರ ಎಲ್ಲಾ ಪೌರರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ ಮತ್ತು ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನಾ ಸ್ವಾತಂತ್ರ್ಯ, ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆಯು ದೊರೆಯುವಂತೆ ಮಾಡುವುದಕ್ಕೆ, ವ್ಯಕ್ತಿ ಗೌರವವನ್ನು ಮತ್ತು ರಾಷ್ಟ್ರದ ಐಕ್ಯತೆ ಹಾಗೂ ಸಮಗ್ರತೆಯನ್ನು ರಕ್ಷಿಸಿ, ಭ್ರಾತೃ ಭಾವನೆಯನ್ನು ಎಲ್ಲರಲ್ಲೂ ವೃದ್ಧಿಗೊಳಿಸುವುದಕ್ಕಾಗಿ, ದೃಢ ಸಂಕಲ್ಪ ಮಾಡಿ, ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ನವೆಂಬರ್ 26, 1949 ರಂದು ಈ ಸಂವಿಧಾನವನ್ನು ಅಂಗೀಕರಿಸಿ, ಕಾನೂನು ರೂಪದಲ್ಲಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ".



ಪ್ರತಿ ವರ್ಷ ನವೆಂಬರ್ 26 ರಂದು ದೇಶಾದ್ಯಂತ ಸಂವಿಧಾನದ ದಿನವನ್ನು ಆಚರಿಸಲಾಗುತ್ತದೆ. ಇದನ್ನು ಕಾನೂನು ದಿನವೆಂದು ಕೂಡ ಕರೆಯಲಾಗುತ್ತದೆ. ದೇಶದ ಕಾನೂನು ವಿದ್ಯಾರ್ಥಿಗಳು, ವಕೀಲರು, ನ್ಯಾಯಾಧೀಶರು ಹಾಗೂ ಕಾನೂನು ಕ್ಷೇತ್ರಕ್ಕೆ ಸಂಬಂಧಪಟ್ಟವರೆಲ್ಲಾ ಕಾನೂನು ದಿನವನ್ನು ಸಡಗರ ಮತ್ತು ಸಂಭ್ರಮದಿಂದ ಆಚರಿಸುತ್ತಾರೆ. ದೇಶದ ಕಾನೂನು ಪ್ರತಿಯೊಬ್ಬರಿಗೂ ಅನ್ವಯವಾಗುವುದರಿಂದ "ಕಾನೂನು ದಿನವನ್ನು" ದೇಶದ ಪ್ರತಿಯೊಬ್ಬರೂ ಕೂಡ ಆಚರಿಸಬಹುದಾಗಿದೆ. 2015 ಇಸವಿಯ ನವೆಂಬರ್ 19 ರಂದು ಕೇಂದ್ರ ಸರ್ಕಾರ ಗೆಜೆಟ್ ಪ್ರಕಟಣೆ ಹೊರಡಿಸಿ ಭಾರತದ ಸಂವಿಧಾನದ ಪಿತಾಮಹ ಡಾ.ಬಿ.ಆರ್.ಅಂಬೇಡ್ಕರ್ ಅವರ 125ನೇ ಜನ್ಮ ದಿನಾಚರಣೆಯ ಕುರುಹಾಗಿ ಪ್ರತಿವರ್ಷದ ನವೆಂಬರ್ 26 ಅನ್ನು "ಸಂವಿಧಾನದ ದಿನ"ವನ್ನಾಗಿ ಆಚರಿಸುವಂತೆ ಕರೆ ನೀಡಲಾಯಿತು. ಭಾರತದ ಸಂವಿಧಾನ ರಚನಾ ಸಮಿತಿಯ ಗೌರವಾನ್ವಿತ ಸದಸ್ಯರ ನೆನಪಿಗಾಗಿಯೂ ಸಂವಿಧಾನ ದಿನವನ್ನು ಆಚರಿಸಲಾಗುತ್ತದೆ. ಭಾರತ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಕಾರ್ಯನಿರ್ವಹಿಸಿದ್ದರೆ, ಡಾ.ರಾಜೇಂದ್ರ ಪ್ರಸಾದ್ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು. ಡಾ.ಬಿ.ಆರ್. ಅಂಬೇಡ್ಕರ್, ಡಾ.ಎಸ್.ರಾಧಾಕೃಷ್ಣನ್, ಪಂಡಿತ್ ಜವಹರಲಾಲ್ ನೆಹರು, ಆಚಾರ್ಯ ಜೆ.ಬಿ.ಕೃಪಲಾನಿ, ಎನ್.ಜಿ.ರಂಗ, ಮೌಲಾನ ಅಬ್ದುಲ್ ಕಲಾಮ್ ಅಜಾದ್, ಎನ್. ಗೋಪಾಲಸ್ವಾಮಿ ಐಯ್ಯಂಗಾರ್, ಸರ್ದಾರ್ ವಲ್ಲಭಭಾಯಿ ಪಟೇಲ್, ಸಿ.ರಾಜಗೋಪಾಲಚಾರಿ ಸೇರಿದಂತೆ 284ಕ್ಕೂ ಹೆಚ್ಚು ಮುತ್ಸದ್ಧಿಗಳು ಸಂವಿಧಾನ ರಚನಾ ಸಮಿತಿಯ ಸದಸ್ಯರಾಗಿ ಕರ್ತವ್ಯ ನಿರ್ವಹಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಅದೇ ರೀತಿ ಖ್ಯಾತ ಸಂವಿಧಾನ ತಜ್ಞ ಬಿ.ಎನ್.ರಾವ್‌ರವರು "ಸಂವಿಧಾನದ ಸಲಹೆಗಾರರಾಗಿ" ಕಾರ್ಯನಿರ್ವಹಿಸಿದರು.

26.11.1949ರಂದು ಸಂವಿಧಾನ ರಚನಾ ಸಮಿತಿಯು ಸಭೆ ಸೇರಿ ಭಾರತದ ಸಂವಿಧಾನವನ್ನು ಅಂಗೀಕರಿಸಿತು. 1950ರ ನವೆಂಬರ್ 26ರಂದು ಅಧಿಕೃತವಾಗಿ ಭಾರತ ಸಂವಿಧಾನ ಅಸ್ತಿತ್ವಕ್ಕೆ ಬಂದಿದೆ. ವಿಶ್ವದ ಶ್ರೇಷ್ಠ ಸಂವಿಧಾನಗಳಲ್ಲಿ ಒಂದು ಎಂದು ಹೇಳಬಹುದಾದ ಭಾರತೀಯ ಸಂವಿಧಾನ, ಮೂಲಭೂತ ಹಕ್ಕುಗಳು, ಮೂಲಭೂತ ಕರ್ತವ್ಯಗಳು, ರಾಜ್ಯ ನಿರ್ದೇಶಕ ತತ್ವಗಳು, ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳು, ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗ ಮುಂತಾದವುಗಳ ಕಾರ್ಯನಿರ್ವಹಣೆ ಸೇರಿದಂತೆ ಹಲವಾರು ಪ್ರಮುಖ ಅಂಶಗಳನ್ನು ಒಳಗೊಂಡಿದೆ. ಸಂವಿಧಾನದ ಪ್ರಸ್ತಾವನೆಯನ್ನು ಸಂವಿಧಾನದ ಹೃದಯ ಭಾಗವೆಂದು ಕರೆಯಲಾಗುತ್ತದೆ. ಅದು ಈ ಕೆಳಕಂಡಂತಿದೆ

ಪ್ರಸ್ತಾವನೆ (Preamble)

"ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ವ್ಯವಸ್ಥೆಗೊಳಿಸಲು ಮತ್ತು ಅದರ ಎಲ್ಲಾ ಪೌರರಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ, ವಿಚಾರ ಮತ್ತು ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನಾ ಸ್ವಾತಂತ್ರ್ಯ, ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆಯು ದೊರೆಯುವಂತೆ ಮಾಡುವುದಕ್ಕೆ, ವ್ಯಕ್ತಿ ಗೌರವವನ್ನು ಮತ್ತು ರಾಷ್ಟ್ರದ ಐಕ್ಯತೆ ಹಾಗೂ ಸಮಗ್ರತೆಯನ್ನು ರಕ್ಷಿಸಿ, ಭ್ರಾತೃ ಭಾವನೆಯನ್ನು ಎಲ್ಲರಲ್ಲೂ ವೃದ್ಧಿಗೊಳಿಸುವುದಕ್ಕಾಗಿ, ದೃಢ ಸಂಕಲ್ಪ ಮಾಡಿ, ನಮ್ಮ ಸಂವಿಧಾನ ರಚನಾ ಸಭೆಯಲ್ಲಿ ನವೆಂಬರ್ 26, 1949 ರಂದು ಈ ಸಂವಿಧಾನವನ್ನು ಅಂಗೀಕರಿಸಿ, ಕಾನೂನು ರೂಪದಲ್ಲಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ".

ನಮ್ಮ ಸಂವಿಧಾನದ ಪ್ರಸ್ತಾವನೆಯನ್ನು ಸಂವಿಧಾನದ ಹೃದಯ ಭಾಗವೆಂದು ಕರೆಯಲಾಗುತ್ತದೆ. ಪಂಡಿತ್ ಠಾಕೂರ್ ದಾಸ್ ರವರ ಪ್ರಕಾರ, ಪ್ರಸ್ತಾವನೆಯು ಸಂವಿಧಾನದ ಸತ್ವ, ಸಂವಿಧಾನದ ಯೋಗ್ಯತೆಯನ್ನು ಅಳೆಯಲು ಇರುವ ಒಂದು ಅಳತೆ ಗೋಲು" ಸಂವಿಧಾನ ರಚನೆಯ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ ರಚನೆಯ ಸಂದರ್ಭದಲ್ಲಿ ಗ್ರೇಟ್ ಬ್ರಿಟನ್, ಅಮೇರಿಕ ಸಂಯುಕ್ತ ಸಂಸ್ಥಾನ, ಜಪಾನ್, ಇಟಲಿ, ಜರ್ಮನಿ ಮುಂತಾದ ದೇಶಗಳ ಸಂವಿಧಾನಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ್ದರು. ವಿಶ್ವದ ಅತಿದೊಡ್ಡ ಲಿಖಿತ ಸಂವಿಧಾನ ಹೊಂದಿರುವ ದೇಶವೂ ನಮ್ಮದಾಗಿದೆ. ಭಾರತ ಸಂವಿಧಾನದಲ್ಲಿ ಪ್ರಸ್ತುತ 448 ವಿಧಿಗಳು ಹಾಗೂ 12 ಅನುಸೂಚಿಗಳಿದ್ದು, 25 ಭಾಗಗಳಾಗಿ ವಿಂಗಡಿಸಲಾಗಿದೆ. ಮೂಲ ಸಂವಿಧಾನದಲ್ಲಿ ಅಂದರೆ ಜನವರಿ 26, 1950ರಂದು ಸಂವಿಧಾನದಲ್ಲಿ 395 ವಿಧಿಗಳಿದ್ದವು. ಆದರೆ ನಂತರದ ವರ್ಷಗಳಲ್ಲಿ ಸಂವಿಧಾನಕ್ಕೆ ಮಾಡಲಾದ ತಿದ್ದುಪಡಿಯ ಪ್ರಕಾರ ವಿಧಿಗಳ ಸಂಖ್ಯೆ 448 ಆಗಿದೆ. ಭಾರತದ ಸಂವಿಧಾನದ ಕೆಲವು ವಿಧಿಗಳನ್ನು ಸುಲಭವಾಗಿ ಮತ್ತೇ ಕೆಲವು ವಿಧಿಗಳನ್ನು ಕೆಲವು ಕಠಿಣ ಕ್ರಮಗಳನ್ನು ಅನುಸರಿಸಿ, ರಾಜ್ಯ ಶಾಸನ ಸಭೆಗಳ ಒಪ್ಪಿಗೆ ಪಡೆದು ತಿದ್ದುಪಡಿ ಮಾಡಬಹುದು. ಇದುವರೆಗೂ ಸಂವಿಧಾನಕ್ಕೆ 105 ತಿದ್ದುಪಡಿಗಳಾಗಿವೆ. ಮೊದಲನೆಯ ತಿದ್ದುಪಡಿಯನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣಕ್ಕಾಗಿ 10.5.1951ರಂದು ಮಾಡಲಾಯಿತು. ಆಗಸ್ಟ್ 2021 ರಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ ಕಡೆಯ ತಿದ್ದುಪಡಿ ಮಾಡಲಾಗಿದೆ. ಇಡೀ ವಿಶ್ವದಲ್ಲೇ ಅತಿ ಉದ್ದದ ಸಂವಿಧಾನ ಎಂಬ ಕೀರ್ತಿಗೆ ನಮ್ಮ ಸಂವಿಧಾನ ಪಾತ್ರವಾಗಿದೆ. ಅದೇ ರೀತಿ ಇಂಡೋನೇಷ್ಯಾದ ಸಂವಿಧಾನ (1945) ವಿಶ್ವದ ಅತ್ಯಂತ ಕಿರಿಯ ಸಂವಿಧಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೆಲವು ವಿದ್ವಾಂಸರ ಪ್ರಕಾರ, ಅಮೇರಿಕ ಸಂವಿಧಾನ ವಿಶ್ವದ ಅತ್ಯಂತ ಕಿರಿಯದಾದ ಸಂವಿಧಾನವಾಗಿದೆ. ಬ್ರಿಟನ್ ದೇಶ ಅಲಿಖಿತ ಸಂವಿಧಾನ ಹೊಂದಿರುವ ದೇಶವಾಗಿದ್ದು, ರೂಢಿ, ಸಂಪ್ರದಾಯಗಳು, ಪಾರ್ಲಿಮೆಂಟ್ ಕಾಯ್ದೆಗಳು, ಸಾಮಾನ್ಯ ಕಾಯ್ದೆಗಳು, ನ್ಯಾಯಾಲಯಗಳ ತೀರ್ಪುಗಳು ಮುಂತಾದವುಗಳು ದೇಶದ ಸಂವಿಧಾನದ ರೀತಿಯಲ್ಲಿ ಕೆಲಸ ಮಾಡುತ್ತವೆ. ಅದೇ ರೀತಿ ಲಿಖಿತ ಸಂವಿಧಾನ ಹೊಂದಿರದ ಇಸ್ರೇಲ್‌ನಲ್ಲಿ ಮೂಲಭೂತ ಕಾಯ್ದೆಗಳು, ಮತ್ತು ಹಕ್ಕುಗಳು ಸಂವಿಧಾನದ ರೀತಿಯಲ್ಲಿ ಕೆಲಸ ಮಾಡುತ್ತದೆ. ನ್ಯೂಜಿಲೆಂಡ್, ಲಿಬಿಯಾ, ಓಮನ್, ಕೆನಡಾ, ಸೌದಿ ಅರೇಬಿಯಾ ದೇಶಗಳಲ್ಲಿ ಲಿಖಿತ ಸಂವಿಧಾನ ಇಲ್ಲದಿದ್ದರೂ ರೂಢಿ ಸಂಪ್ರದಾಯಗಳು, ಪಾರ್ಲಿಮೆಂಟ್ ಕಾಯ್ದೆ, ಸಾಮಾನ್ಯ ಕಾನೂನು ಸಂವಿಧಾನದ ರೀತಿ ಕೆಲಸ ಮಾಡುತ್ತದೆ.

ಭಾರತದ ಸಂವಿಧಾನವು ಹಲವು ದೇಶಗಳ ಸಂವಿಧಾನಗಳ ರಸ ಮಿಶ್ರಣವಾಗಿರುವುದರಿಂದ, ನಮ್ಮ ಸಂವಿಧಾನ ಇಡೀ ವಿಶ್ವದಲ್ಲೇ ಒಂದು ಉತ್ತಮವಾದ ಸಂವಿಧಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇವಿಷ್ಟು ಭಾರತ ಸಂವಿಧಾನದ ಕೆಲವು ಪ್ರಮುಖ ಅಂಶಗಳಾಗಿವೆ. ಇನ್ನು ಕಾನೂನು ದಿನದ ಬಗ್ಗೆ ಸ್ವಲ್ಪ ವಿಚಾರ ಮಾಡೋಣ. ಯಾವುದೇ ದೇಶದ ಅಸ್ತಿತ್ವಕ್ಕೆ "ಕಾನೂನು" ತೀರಾ ಅವಶ್ಯಕವಾಗಿ ಬೇಕಾಗುತ್ತದೆ. ಕಾನೂನು ಆಯಾ ದೇಶಗಳ ಆಡಳಿತದ ರೂಪುರೇಷೆಗಳನ್ನು ನಿರ್ಧರಿಸುತ್ತದೆ ಹಾಗೂ ನಿಯಂತ್ರಕನಾಗಿ ಕೂಡ ಕಾರ್ಯ ನಿರ್ವಹಿಸುತ್ತದೆ. ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗಗಳು ಪ್ರಜಾಪ್ರಭುತ್ವದ ಮೂರು ಪ್ರಮುಖ ಅಂಗಗಳೆಂದು ಪರಿಗಣಿಸಲಾಗಿದೆ. ಇವುಗಳ ಪೈಕಿ ನ್ಯಾಯಾಂಗಕ್ಕೆ ಅತಿ ಹೆಚ್ಚಿನ ಮಹತ್ವವಿದೆ. ಕಾರ್ಯಾಂಗ ಹಳಿ ತಪ್ಪಿದಾಗಲೆಲ್ಲಾ ನ್ಯಾಯಾಂಗ ತನ್ನ ಚಾಟಿ ಬೀಸುತ್ತದೆ. ಶಾಸಕಾಂಗ ಅಂಗೀಕರಿಸುವ ಕಾನೂನು ಸಂವಿಧಾನ ವಿರೋಧಿಯಾಗಿದ್ದರೆ, ಅವುಗಳನ್ನು ರದ್ದುಗೊಳಿಸುವ ಅಧಿಕಾರವೂ ನ್ಯಾಯಾಂಗಕ್ಕಿದೆ. ನಮ್ಮ ಸಂವಿಧಾನದಲ್ಲಿ ನ್ಯಾಯಾಂಗ, ಕಾರ್ಯಾಂಗ ಹಾಗೂ ಶಾಸಕಾಂಗಗಳ ಇತಿಮಿತಿಗಳನ್ನು ವಿಶದಪಡಿಸಿ ಲಕ್ಷ್ಮಣರೇಖೆ ಹಾಕಲಾಗಿದೆ. ಆದರೂ ಸಹ ಸಂದರ್ಭ ಒದಗಿ ಬಂದಾಗಲೆಲ್ಲಾ ನ್ಯಾಯಾಂಗ ಮಧ್ಯೆ ಪ್ರವೇಶಿಸಿ ದೇಶದ ಕಾನೂನನ್ನು ರಕ್ಷಿಸುತ್ತಿದೆ. ಹೀಗಾಗಿಯೇ ನ್ಯಾಯಾಂಗಕ್ಕೆ ಇನ್ನಿಲ್ಲದ ಮಹತ್ವ ದೊರೆತಿದೆ. ನ್ಯಾಯಾಂಗವನ್ನು ಸಂವಿಧಾನದ ಸಂರಕ್ಷಕ ಎಂದು ಕೂಡ ಕರೆಯಬಹುದು. ಈ ನಿಟ್ಟಿನಲ್ಲಿ ಕಾನೂನಿನ ಮಹತ್ವ ದಿನೇ ದಿನೆ ಹೆಚ್ಚುತ್ತಲಿದೆ. ಸಂವಿಧಾನದ ಮೂಲಭೂತ ರಚನೆಗಳನ್ನು (Basic Structures) ಬದಲಾಯಿಸಲು ಅಥವಾ ತಿದ್ದುಪಡಿಗೊಳಿಸುವ ಅಧಿಕಾರ ಶಾಸಕಾಂಗ ಅಥವಾ ಪಾರ್ಲಿಮೆಂಟ್‌ಗೆ ಇಲ್ಲ ಎಂಬ ಅತ್ಯಂತ ಮಹತ್ವದ ಹಾಗೂ ಚಾರಿತ್ರಿಕ ತೀರ್ಪನ್ನು "ಕೇಶವಾನಂದ ಭಾರತಿ" ಪ್ರಕರಣದಲ್ಲಿ (1973) ಸರ್ವೋಚ್ಚ ನ್ಯಾಯಾಲಯ ನೀಡುವ ಮೂಲಕ, ಸಂವಿಧಾನದ ಹಿರಿಮೆಯನ್ನು ಎತ್ತಿ ಹಿಡಿದಿದೆ. ಅದಕ್ಕಿಂತ ಮುಂಚಿತವಾಗಿ, ಗೋಲಕನಾಥ ಪ್ರಕರಣದಲ್ಲಿ (1967) ಸಂವಿಧಾನದಲ್ಲಿ ದತ್ತವಾಗಿರುವ ಮೂಲಭೂತ ಹಕ್ಕುಗಳನ್ನು ರದ್ದುಗೊಳಿಸುವ ಅಧಿಕಾರ ಪಾರ್ಲಿಮೆಂಟ್‌ಗೆ ಇಲ್ಲ ಎಂದು ಹೇಳಿತು. ಈ ರೀತಿ ಸಂದರ್ಭ ಒದಗಿ ಬಂದಾಗಲೆಲ್ಲಾ, ಸರ್ವೋಚ್ಚ ನ್ಯಾಯಾಲಯ, ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುತ್ತಾ ಬರುತ್ತಿದೆ.

ಯಾವುದೇ ದೇಶದಲ್ಲಿ ಸದೃಢವಾದ ನ್ಯಾಯಾಂಗ ವ್ಯವಸ್ಥೆ ಇಲ್ಲವಾದಲ್ಲಿ ಅಲ್ಲಿ ಅರಾಜಕತೆ ತಲೆದೋರುತ್ತದೆ. ಪ್ರಜೆಗಳ ಹಕ್ಕುಗಳನ್ನು ಕೇಳುವವರೇ ಇಲ್ಲವಾಗುತ್ತಾರೆ. ಆದ್ದರಿಂದ ಕಾನೂನು ಯಾವುದೇ ದೇಶದ ರಕ್ಷಾಕವಚವೆಂದು ಖಂಡಿತವಾಗಿ ಹೇಳಬಹುದು. ದೇಶಿಯ ಕಾನೂನು ದೇಶದ ಜನರ ಮತ್ತು ಸರ್ಕಾರಗಳ ನಡುವಿನ ವಿವಾದಗಳನ್ನು ಬಗೆಹರಿಸಿದರೆ, ಅಂತರ್‌ರಾಷ್ಟ್ರೀಯ ಕಾನೂನು ದೇಶ ದೇಶಗಳ ನಡುವಿನ ವ್ಯಾಜ್ಯಗಳನ್ನು ಬಗೆಹರಿಸುತ್ತದೆ.

ಭಾರತೀಯ ದಂಡ ಸಂಹಿತೆ, ಭಾರತೀಯ ಅಂಚೆ ಕಾಯ್ದೆ ಸೇರಿದಂತೆ ಹಲವಾರು ಭಾರತೀಯ ಕಾನೂನುಗಳಿಗೆ ಶತಮಾನಗಳ ಇತಿಹಾಸವೇ ಇದೆ. ಬ್ರಿಟಿಷ್ ಕಾಲದಲ್ಲಿ ಇದ್ದ ಹಲವಾರು ಕಾನೂನುಗಳು ಈಗಲೂ ಅಸ್ತಿತ್ವದಲ್ಲಿವೆ. ಕೆಲವು ಕಾನೂನುಗಳಿಗೆ ಹಲವಾರು ಬಾರಿ ತಿದ್ದುಪಡಿ ಮಾಡಲಾಗುತ್ತಿದೆ. ಕೆಲವು ಅನುಪಯುಕ್ತ ಕಾನೂನುಗಳನ್ನು ರದ್ದುಗೊಳಿಸಲಾಗುತ್ತಿದೆ. ಹೀಗಾಗಿ ಕಾನೂನು ನಿಂತ ನೀರಾಗದೇ ವರ್ತಮಾನಕ್ಕೆ ಸ್ಪಂದಿಸುವ ಶಕ್ತಿಯನ್ನು ಹೊಂದಿದೆ. 2012ರಲ್ಲಿ ನಿರ್ಭಯಾಳ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ನಂತರ ಅತ್ಯಾಚಾರಕ್ಕೆ ಸಂಬಂಧಿಸಿದ ಕೆಲವು ಕಾನೂನುಗಳಿಗೆ ಮಹತ್ವದ ತಿದ್ದುಪಡಿ ತಂದಿರುವುದನ್ನು ಇಲ್ಲಿ ಸ್ಮರಿಸಬಹುದು. ಅದೇ ರೀತಿ ಕಂಪನಿ ಕಾಯ್ದೆ, ಕೈಗಾರಿಕಾ ವಿವಾದಗಳ ಕಾಯ್ದೆ ಸೇರಿದಂತೆ ಹಲವಾರು ಪ್ರಮುಖ ಕಾಯ್ದೆಗಳಿಗೆ ತಿದ್ದುಪಡಿ ತರಲಾಗಿದೆ. ಆದ್ದರಿಂದ ದೇಶದ ಕಾನೂನು, ಜಡ ವಸ್ತುವಾಗದೇ, ಜನತೆಯ ಆಶೋತ್ತರಗಳಿಗೆ ನಿರಂತರವಾಗಿ ಸ್ಪಂದಿಸುತ್ತದೆ ಎಂದು ಹೇಳಬಹುದು. ಬಹುಜನರ ಇಷ್ಟಕ್ಕೆ ವಿರುದ್ಧವಾದ ಕಾನೂನುಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ ಎಂಬುದು ಕೇಂದ್ರ ಸರ್ಕಾರ ಜಾರಿಗೊಳಿಸಲು ಹೊರಟಿದ್ದ ಕೃಷಿ ಕಾಯ್ದೆಗಳ ವಿರುದ್ಧ ದೇಶಾದ್ಯಂತ ನಡೆದ ರೈತರ ಪ್ರತಿಭಟನೆ ಸಾಬೀತುಗೊಳಿಸಿದೆ.

ದೇಶದ ಪ್ರಜೆಗಳೆಲ್ಲರೂ ದೇಶದ ಕಾನೂನುಗಳನ್ನು ಗೌರವಿಸಬೇಕು. ಕಾನೂನುಗಳನ್ನು ದೇಶದ ಜನರ ಒಳಿತಿಗಾಗಿ ರಚಿಸಲಾಗಿದೆ. ಒಂದು ಸದೃಢ ಆಡಳಿತ ವ್ಯವಸ್ಥೆಯ ಪೂರಕ ಅಂಗವಾಗಿ ರಚಿಸಲ್ಪಟ್ಟಿವೆ. ಇಂತಹ ಕಾನೂನುಗಳನ್ನು ರಕ್ಷಿಸಿ ಕಾಪಾಡುವ ಹೊಣೆಗಾರಿಕೆ ನಮ್ಮದಾಗಲಿ.



–ಕೆ.ವಿ.ವಾಸು,
ವಕೀಲರು, ಮೈಸೂರು
ಮೊ: 9341731661

ನಿಮ್ಮ ಪತ್ರಗಳು

ಮಕ್ಕಳ ಬಗ್ಗೆ ಕಾಳಜಿಯೇ ಇಲ್ಲದ ಸರ್ಕಾರ

ಮಾನ್ಯರೆ,




ಮೈಸೂರಿನ ಸಿಕೆಸಿ ಶಾಲೆಗೆ ಹೊಂದಿಕೊಂಡಿರುವ ಜೆಎಲ್‌ಬಿ ರಸ್ತೆಯು ತುಂಬಾ ಹದಗೆಟ್ಟಿದ್ದು, ಹಳ್ಳ-ಕೊಳ್ಳಗಳಿಂದ ಕೂಡಿದೆ. ಈ ರಸ್ತೆಯಲ್ಲಿ ಶಾಲೆಗಳು, ಕಾಲೇಜುಗಳು, ಆಡಳಿತ ಕಚೇರಿಗಳು ಇದ್ದು, ವಾಹನಗಳ ದಟ್ಟಣೆ ತೀವ್ರವಾಗಿದೆ. ಅಲ್ಲದೆ ಬೆಳಗ್ಗೆ ಮತ್ತು ಸಂಜೆ ವೇಳೆ ಶಾಲಾ ಕಾಲೇಜು ವಿದ್ಯಾರ್ಥಿಗಳು ಈ ರಸ್ತೆಯಲ್ಲಿ ಓಡಾಡುವುದೇ ತುಂಬಾ ಕಷ್ಟವಾಗಿದೆ. ಇದರ ಬಗ್ಗೆ ಸರ್ಕಾರವಾಗಲಿ, ಜನಪ್ರತಿನಿಧಿಗಳಾಗಲೀ ಯಾವ್ರದೇ ಕಾಳಜಿ ಇಲ್ಲದಂತಿದೆ. ಅಲ್ಲದೆ ವಾಹನ ಸವಾರರು ವೇಗವಾಗಿ ಚಲಿಸುವುದರಿಂದ ಅಪಘಾತಗಳು ಸಂಭವಿಸುವುದುಂಟು. ಆದ್ದರಿಂದ ಕೂಡಲೇ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳು ಇತ್ತ ಗಮನಹರಿಸಿ ರಸ್ತೆ ಸರಿಪಡಿಸುವಂತೆ ಈ ಮೂಲಕ ಮನವಿ.

– ಸಿ. ಶಿವಣ್ಣ, ಪತ್ರಿಕಾ ವಿತರಕ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ, ಮೈಸೂರು.

ಗುಂಬಜ್ ಗುದ್ದಾಟ ಬಿಟ್ಟು ರಸ್ತೆ ರಿಪೇರಿ ಮಾಡಿಸಿ

ಮಾನ್ಯರೆ,



ಕಳೆದ ಕೆಲವು ದಿನಗಳಿಂದ ಮೈಸೂರಿನಲ್ಲಿ ಗುಂಬಜ್ ಮಾದರಿಯ ಬಸ್ ನಿಲ್ದಾಣವೊಂದರ ಬಗ್ಗೆ ಬಿಸಿ ಬಿಸಿ ಚರ್ಚೆ ನಡೆಯುತ್ತಿದ್ದು ಇದು ಬಿ.ಜೆ.ಪಿ ಸಂಸದರು ಹಾಗೂ ಶಾಸಕರ ನಡುವಿನ ಮುಸುಕಿನ ಗುದ್ದಾಟಕ್ಕೆ ಕಾರಣವಾಗಿದೆ. ಮುಖ್ಯಮಂತ್ರಿಗಳ ತನಕ ಈ ವಿಷಯ ಹೋಗಿದೆ.

ಇದು ಕೇವಲ ಶಾಸಕ-ಸಂಸದರ ನಡುವಿನ ಪ್ರತಿಷ್ಠೆಯ ವಿಷಯವೇ ಹೊರತು ಸಾರ್ವಜನಿಕರಿಗೆ ಇದರಿಂದ ಯಾವ ಲಾಭ-ನಷ್ಟ ಇಲ್ಲವೆಂಬುದನ್ನು ಇಲ್ಲಿ ಮನಗಾಣಬೇಕಿದೆ. ಮೈಸೂರಿನ ಜನತೆಗೆ ಇದೀಗ ತುರ್ತು ಬೇಕಾಗಿರುವುದು ಹದಗೆಟ್ಟ ರಸ್ತೆಗಳ ಸುಧಾರಣೆ.

ಕಳೆದ ಕೆಲವು ತಿಂಗಳುಗಳಿಂದ ಮೈಸೂರು ನಗರದ ರಸ್ತೆ ಪರಿಸ್ಥಿತಿ ಯಾವ ಮಟ್ಟಕ್ಕೆ ತಲುಪಿದೆ ಎಂದರೆ ನರಕಯಾತನೆಯ ಪ್ರತಿರೂಪವೇ ಕಾಣಸಿಗುತ್ತಿದೆ. ಜನಪ್ರತಿನಿಧಿಗಳ ಜಡ್ಡುಗಟ್ಟಿದ ಧೋರಣೆ, ನಗರ ಪಾಲಿಕೆಯ ನಿರ್ಲಕ್ಷ್ಯತೆ, ನಗರ ಪಾಲಿಕೆ ಸದಸ್ಯರ ಅನಾದರಣೆ, ಶಾಸಕ-ಸಂಸದರ ಹೊಂದಾಣಿಕೆ ಕೊರತೆಯಿಂದಾಗಿ ಮೈಸೂರು ನಗರದ ರಸ್ತೆಗಳ ಪರಿಸ್ಥಿತಿ ಅಯೋಮಯವಾಗಿದೆ.

ಸುಂದರವಾಗಿದ್ದ ವಿಶ್ವಮಾನವ ಜೋಡಿ ರಸ್ತೆಯನ್ನು (ಎಸ್.ಬಿ.ಐ) ಹತ್ತಿರ ಹಾಳುಗೆಡವಲಾಗಿದೆ. ಕುವೆಂಪುನಗರ, ವಿವೇಕಾನಂದ ನಗರ ಸೇರಿದಂತೆ ಹಲವಾರು ಪ್ರತಿಷ್ಠಿತ ಬಡಾವಣೆಗಳ ರಸ್ತೆಗಳು ಗುಂಡಿಮಯವಾಗಿವೆ. ಇಂತಹ ಗಂಭೀರ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕಾದ ಜನಪ್ರತಿನಿಧಿಗಳು ಯಾವುದೋ ಕ್ಷುಲ್ಲಕ ವಿಚಾರದ ಬಗ್ಗೆ ಕಿತ್ತಾಡುತ್ತಿರುವುದು ಹಾಸ್ಯಾಸ್ಪದವೇ ಸರಿ.

ಅತ್ತ ರಾಜಧಾನಿ ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳಿಂದ ದಿನಕ್ಕೊಂದು ಜೀವ ಬಲಿಯಾಗುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿನ ಮಾನ ಹರಾಜು ಆಗುತ್ತಿದ್ದರೂ ನಮ್ಮ ಮುಖ್ಯಮಂತ್ರಿಗಳು ಸಂಕಲ್ಪ ಯಾತ್ರೆಯಲ್ಲಿ ಕಾರ್ಯ ಮಗ್ನರಾಗಿದ್ದಾರೆ. ಇದು ಬಿ.ಜೆ.ಪಿ ಸರ್ಕಾರದ ಕಾರ್ಯವೈಖರಿ – ಜನರಿಗೆ ಓಡಾಡಲು ಒಳ್ಳೆಯ ರಸ್ತೆ ನೀಡಿ, ನಿಮ್ಮ ಆಶ್ವಾಸನೆ ಕೈ ಬಿಡಿ.

– ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು.

ಉಚಿತ ಉಚಿತ ಉಚಿತ

ಮಾನ್ಯರೆ,

ರಾಜಕೀಯ ವ್ಯಕ್ತಿಗಳು ಈ ರೀತಿ ಆಶ್ವಾಸನೆ ಕೊಟ್ಟು ತಾವು ಅಧಿಕಾರಕ್ಕೆ ಬಂದು ಉಚಿತವಾಗಿ ವಿದ್ಯುತ್, ನೀರು, ಸಿಲಿಂಡರ್, ಸಾಲ ಮನ್ನಾ, ಉಚಿತ ಬಸ್, ಟಿವಿ, ಕಂಪ್ಯೂಟರ್ ಈ ಉಚಿತ ಕೊಡುಗೆ ಕೊಡುವ ಮುನ್ನ ಇದು ಜನ ಸಾಮಾನ್ಯರ ತೆರಿಗೆ ಹಣ ಅನ್ನುವುದನ್ನು ಅರ್ಥ ಮಾಡಿಕೊಳ್ಳಲಿ. ಇದೇ ರೀತಿ ಮುಂದುವರಿದರೆ ದೇಶಕ್ಕೆ ದೇಶವೇ ದಿವಾಳಿಯಾಗಿ ದಂಗೆ ಏಳುವ ಸ್ಥಿತಿಗೆ ಬರುತ್ತದೆ. ಇದರ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳದಿದ್ದರೆ ನಮಗೂ ಕೂಡ ಚೀನಾ, ಬಾಂಗ್ಲಾ, ಅಮೇರಿಕಾ ರೀತಿಯಲ್ಲಿ ಅನ್ನಕ್ಕೆ ಹಾಹಾಕಾರ ಬರುವುದರಲ್ಲಿ ಸಂಶಯವಿಲ್ಲ.

–ಬಿ. ಮಹದೇವಸ್ವಾಮಿ, ಜೆ.ಪಿ.ನಗರ.

ಕೆಸರು ಗದ್ದೆಯಂತಿರುವ ರಮಾಬಾಯಿನಗರದ ರಸ್ತೆ



ಮಾನ್ಯರೆ,

ಮೈಸೂರಿನ ರಮಾಬಾಯಿನಗರದಿಂದ ರೈಲ್ವೆ ಲೇಔಟ್‌ಗೆ ಹೋಗುವ ದಾರಿಯಲ್ಲಿ ರಸ್ತೆ ದುಸ್ಥಿತಿಗೀಡಾಗಿದ್ದು, ಜನಸಾಮಾನ್ಯರು ಓಡಾಡಲು ತುಂಬಾ ಕಷ್ಟಕರವಾಗಿದೆ. ಇಲ್ಲಿ ದಿನನಿತ್ಯ ಶಾಲೆ ವಾಹನಗಳು, ಕೆಲಸಕ್ಕೆ ಹೋಗುವ ಜನಸಾಮಾನ್ಯರು ಈ ರಸ್ತೆಯಲ್ಲಿ ಸಂಚರಿಸಲು ತುಂಬಾ ತೊಂದರೆಯಾಗಿದೆ. ಇಲ್ಲಿ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ತಿ ಮಾಡದೆ ಅರ್ಧಕ್ಕೆ ನಿಲ್ಲಿಸಿದ್ದಾರೆ. ಹಾಗಾಗಿ ಮಳೆ ಬಂದ ಸಮಯದಲ್ಲಿ ಇಲ್ಲಿ ರಸ್ತೆ ಗುಂಡಿ ಬಿದ್ದು ಅಪಘಾತಕ್ಕೆ ಕಾರಣವಾಗಿದೆ. ಇಲ್ಲಿ ಸರ್ಕಾರಿ ವಾಹನಗಳು ಬರದೆ ಶಾಲಾ ಕಾಲೇಜು ವಿದ್ಯಾರ್ಥಿಗಳು ಕೆಲಸಕ್ಕೆ ಹೋಗುವವರು ಸುಮಾರು ದೂರ ಶ್ರಮಿಸಿ ಹೋಗಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ರಸ್ತೆ ದುರಸ್ತಿಪಡಿಸಬೇಕೆಂದು ಈ ಮೂಲಕ ಮನವಿ.

–ಕೀರ್ತಿ ಆರ್, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು

ವಯಸ್ಸು ಮೀರುತ್ತಿದೆ, ವಧು ಹುಡುಕಿಕೊಡಿ...

- ಮಾಜಿ ಸಿಎಂ ಕುಮಾರಸ್ವಾಮಿಗೆ ಯುವಕನ ವಿಚಿತ್ರ ಬೇಡಿಕೆ
- ನಮ್ಮ ಜಿಲ್ಲೆ ವಧು ಬೇರೆ ಜಿಲ್ಲೆ ವರನ ಮದುವೆಯಾಗುವುದನ್ನು ನಿಷೇಧಿಸಿ

ಕೋಲಾರ: ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮುಂದೆ ಸಾಕಷ್ಟು ಜನರು ತಮ್ಮ ಕಷ್ಟಗಳನ್ನು ನಿವಾರಿಸುವಂತೆ ಅಹವಾಲು ತೆಗೆದುಕೊಂಡು ಬರುತ್ತಾರೆ. ವಾಸಕ್ಕೆ ಮನೆ ಮಾಡಿಕೊಡಿ, ಕೆಲಸ ಕೊಡಿಸಿ, ಚಿಕಿತ್ಸೆಗೆ ಸಹಾಯ ಮಾಡಿ ಅಂತೆಲ್ಲಾ ಕಷ್ಟಗಳನ್ನು ಹೇಳಿಕೊಂಡು ಬರುತ್ತಾರೆ. ಆದರೆ, ಇಲ್ಲೋರ್ವ ಯುವಕ ಮದುವೆಗೆ ವಧು ಕೊರತೆ ಬಗ್ಗೆ ಕುಮಾರಸ್ವಾಮಿ ಗಮನಕ್ಕೆ ತಂದಿದ್ದಾನೆ. ಅಲ್ಲದೇ ಈ ಕೊರತೆಯನ್ನು ನೀಗಿಸುವಂತೆ ಅವಲತ್ತುಕೊಂಡಿದ್ದಾನೆ.

ಕೋಲಾರ ಜಿಲ್ಲೆಯಲ್ಲಿ ಪಂಚರತ್ನ ಯಾತ್ರೆ ವೇಳೆ ಕುಮಾರಸ್ವಾಮಿ ಗ್ರಾಮಸ್ಥರು ಮತ್ತು ರೈತರ ಕಷ್ಟಗಳನ್ನು ಆಲಿಸುವ ಸಂದರ್ಭದಲ್ಲಿ ಮುದುವತ್ತಿ ಗ್ರಾಮದ ಯುವಕ ಧನಂಜಯ ಎಂಬ ಯುವಕ, ಒಕ್ಕಲಿಗ ರೈತ ಯುವಕರಿಗೆ ಮದುವೆಗೆ ವಧುಗಳ ಕೊರತೆ ಬಗ್ಗೆ ಪ್ರಸ್ತಾಪಿಸಿದ್ದಾನೆ. ಒಕ್ಕಲಿಗ ರೈತ ಯುವಕರಿಗೆ ಮದುವೆ ವಯಸ್ಸು ಮೀರುತ್ತಿದ್ದರೂ ವಧು ದೊರೆಯುತ್ತಿಲ್ಲ ಈ ಹಿನ್ನೆಲೆಯಲ್ಲಿ ಒಕ್ಕಲಿಗ ಯುವಕರಿಗೆ ವಧುಗಳ ಕೊರತೆ ನೀಗಿಸಲು ಕ್ರಮ ಕೈಗೊಳ್ಳುವಂತೆ ಪತ್ರದ ಮೂಲಕ ಕುಮಾರಸ್ವಾಮಿಗೆ ಮನವಿ ಮಾಡಿದ್ದಾನೆ. ಕೋಲಾರದಲ್ಲಿ ಒಕ್ಕಲಿಗ ರೈತ ಯುವಕರಿಗೆ ವಧುಗಳ ಕೊರತೆ ಎದುರಾಗಿದೆ. ನೀವು ಮುಖ್ಯಮಂತ್ರಿ ಆದ ಕೂಡಲೇ ನಮ್ಮ ಜಿಲ್ಲೆಯ ವಧುಗಳು ಬೇರೆ ಜಿಲ್ಲೆಯ ವರಗಳನ್ನು ಮದುವೆಯಾಗುವುದನ್ನು ನಿಷೇಧಿಸಿ ನಿಯಮ ಜಾರಿಗೆ ತರಬೇಕು. ನಮಗೆ ನೀವೇ ವಧುಗಳನ್ನು ಹುಡುಕಿಕೊಡಬೇಕು ಎಂದು ಕುಮಾರಸ್ವಾಮಿಗೆ ಧನಂಜಯ ಅವಲತ್ತುಕೊಂಡಿದ್ದಾನೆ

ಕುಮಾರಸ್ವಾಮಿ ಸಿಎಂ ಆಗುವುದು ಖಚಿತವಾಗಿದ್ದು, ಜೆಡಿಎಸ್ ಸರ್ಕಾರದಲ್ಲಿ ನಿಯಮ ಜಾರಿಗೆ ತರಲು ಕ್ರಮ ಕೈಗೊಳ್ಳುವಂತೆ ಧನಂಜಯ ಮನವಿ ಮಾಡಿದ್ದಾರೆ. ಮದುವೆ ವಯಸ್ಸು ಮೀರುತ್ತಿದ್ದರೂ ವಧು ದೊರೆಯದಿರುವ ಜಟಿಲ ಸಮಸ್ಯೆಯಾಗಿದೆ. ವಿಚಿತ್ರ ಆದರೂ ಸಾಮಾಜಿಕ ಸಮಸ್ಯೆ ಬಗ್ಗೆ ಧನಂಜಯ ಪತ್ರ ಬೆಳಕು ಚೆಲ್ಲಿದೆ.

ವರದಕ್ಷಿಣೆ ಕಿರುಕುಳ: ಮಗುವಿನೊಂದಿಗೆ ನಾಲೆಗೆ ಹಾರಿ ತಾಯಿ ಆತ್ಮಹತ್ಯೆ

ಹಾಸನ: ಮಗುವಿನೊಂದಿಗೆ ತಾಯಿ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ದೊಡ್ಡಕುಂಚೇವುಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಭವ್ಯ (23), ವೇದಾಂತ್ (3) ಮೃತರು. ನ.19 ರಂದು ಭವ್ಯ, ಮಗನ ಜೊತೆ ಪತಿಯ ಮನೆಯಿಂದ ತೆರಳಿದ್ದು ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಂದು ಚನ್ನರಾಯಪಟ್ಟಣ ತಾಲೂಕಿನ ಗೆಜ್ಜಗಾರನಹಳ್ಳಿ ಬಳಿಯ ನಾಲೆಯಲ್ಲಿ ಮಗುವಿನ ಶವ ದೊರೆತರೆ, ಭವ್ಯ ಶವ ದೊಡ್ಡಕುಂಚೇವು ಗ್ರಾಮದ ಬಳಿಯ ಕೆರೆಯಲ್ಲಿ ಸಿಕ್ಕಿದೆ. ಪತಿ ಶ್ರೀನಿವಾಸ್ ಹಾಗೂ ಅತ್ತೆ ಅಕ್ಕಯಮ್ಮನ ವಿರುದ್ಧ ಮೃತರ ಕುಟುಂಬಸ್ಥರು ಪೊಲೀಸರಿಗೆ ದೂರು ನೀಡಿದ್ದಾರೆ.

ಕಳೆದ ನಾಲ್ಕು ವರ್ಷಗಳ ಹಿಂದೆ ಗೆಜ್ಜಗಾರನಹಳ್ಳಿ ಗ್ರಾಮದ ಭವ್ಯಾಳನ್ನು ದೊಡ್ಡಕುಂಚೇವುಕೊಪ್ಪಲು ಗ್ರಾಮದ ಶ್ರೀನಿವಾಸ್ ಅವರಿಗೆ ಮದುವೆ ಮಾಡಿಕೊಡಲಾಗಿತ್ತು. ಭವ್ಯ ಚೆನ್ನಾಗಿದ್ದ ಕಾರಣ ಶ್ರೀನಿವಾಸ್ ಮನೆಯವರು ವರದಕ್ಷಿಣೆ ಬೇಡ ಎಂದಿದ್ದರು. ಶ್ರೀನಿವಾಸ್ ಟ್ರ್ಯಾಕ್ಟರ್ ಶೋ ರೂಂನಲ್ಲಿ ಕೆಲಸ ಮಾಡುತ್ತಿದ್ದ. ಮದುವೆಯಾದ ಆರಂಭದಲ್ಲಿ ಗಂಡ, ಹೆಂಡತಿ ಅನ್ಯೋನ್ಯವಾಗಿದ್ದರು. ದಂಪತಿಗೆ ಒಂದು ಗಂಡು ಮಗುವಿತ್ತು. ಹೀಗಿರುವಾಗ ಶ್ರೀನಿವಾಸ್ ಹಾಗೂ ಆತನ ತಾಯಿ ಅಕ್ಕಯಮ್ಮ ವರದಕ್ಷಿಣೆ ಹಣ ತರುವಂತೆ ಭವ್ಯಳಿಗೆ ಕಿರುಕುಳ ಕೊಡಲು ಆರಂಭಿಸಿದರು.

ಗಂಡನ ಮನೆಯಲ್ಲಿ ಕಿರುಕುಳ ನೀಡುತ್ತಿರುವ ಬಗ್ಗೆ ಭವ್ಯ ತನ್ನ ತಾಯಿ ಬಳಿ ಹೇಳಿಕೊಂಡಿದ್ದಳು. ಗ್ರಾಮದ ಹಿರಿಯರು, ಸಂಬಂಧಿಕರು ಸೇರಿ ಹತ್ತಕ್ಕೂ ಹೆಚ್ಚು ಬಾರಿ ಪಂಚಾಯ್ತಿ ಮಾಡಿ ರಾಜಿ ಸಂಧಾನ ಮಾಡಿಸಿದ್ದರು.

ಕಳೆದ ಒಂದು ವಾರದ ಹಿಂದೆ ಶ್ರೀನಿವಾಸ್ ಹಾಗೂ ಅಕ್ಕಯಮ್ಮ ಸಂಬಂಧಿಕರ ಮನೆಗೆ ತೆರಳಿದ್ದರು. ಈ ವೇಳೆ ಮೂರು ದಿನಗಳ ಕಾಲ ಭವ್ಯ ಹಾಗೂ ಮಗುವನ್ನು ಮನೆಯಲ್ಲಿ ಕೂಡಿ ಹಾಕಿದ್ದರು. ತಿನ್ನಲು ಊಟವಿಲ್ಲದೇ ಭವ್ಯ ಹಾಗೂ ಮಗು ನರಳಾಡಿದ್ದರು. ಕೊನೆಗೆ ಕಿಟಕಿಯಲ್ಲಿ ಗ್ರಾಮದ ಯುವಕನ ಬಳಿ ಬಿಸ್ಕೆಟ್ ತರಿಸಿಕೊಂಡು ಮಗುವಿಗೆ ತಿನ್ನಿಸಿದ್ದಳು. ನ.19 ರಂದು ತಾಯಿಗೆ ಕರೆ ಮಾಡಿ ಅಳಲು ತೋಡಿಕೊಂಡಿದ್ದಳು. ನಂತರ ಮಗುವಿನೊಂದಿಗೆ ದೊಡ್ಡಕುಂಚೇವುಕೊಪ್ಪಲು ಬಳಿ ಹರಿಯುತ್ತಿದ್ದ ನಾಲೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಹೊಳೆನರಸೀಪುರ ನಗರಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಒಬ್ಬಳೇ ಮಗಳನ್ನು ಕಳೆದುಕೊಂಡ ಭವ್ಯ ತಾಯಿ ಆಕ್ರಂದನ ಮುಗಿಲು ಮುಟ್ಟಿದೆ.

ಪಾಕ್ ಪರ ಘೋಷಣೆ ಕೂಗಿದವರಿಗೆ ಬೆಂಬಲ

ನಟ ಚೇತನ್ ವಿರುದ್ಧ 'ಪೇ ಚೇತನ್' ಅಭಿಯಾನ



ಮೈಸೂರು, ನ.21- ಪಾಕ್ ಪರ ಘೋಷಣೆ ಕೂಗಿದ ವಿದ್ಯಾರ್ಥಿಗಳನ್ನು ನಟ ಚೇತನ್ ಬೆಂಬಲಿಸುತ್ತಿದ್ದಾರೆ ಎಂದು ಆರೋಪಿಸಿ ರಾಷ್ಟ್ರೀಯ ಹಿಂದು ಸಮಿತಿಯು ನಗರದ ಅಗ್ರಹಾರದ ಬಳಿ ಸಾರ್ವಜನಿಕರಿಂದ ಒಂದು ರೂಪಾಯಿ ದೇಣಿಗೆ ಮೂಲಕ 'ಪೇ ಚೇತನ್' ಅಭಿಯಾನ ನಡೆಸಿದರು.

ನಂತರ ಮಾತನಾಡಿದ ಪ್ರತಿಭಟನಾಕಾರರು, ನಟ ಚೇತನ್ ದುರ್ವರ್ತನೆ ಮುಂದುವರೆದಿದ್ದು, ಪದೇ ಪದೇ ಭಾರತೀಯ ಸಂಸ್ಕೃತಿ-ಪರಂಪರೆಯನ್ನು ನಿಂದಿಸುತ್ತಿದ್ದಾರೆ. ಇದು ಭಾರತೀಯ ನೆಲದಿಂದ ಪಾಕಿಸ್ತಾನದ ಪರ ಜೈಕಾರ ಕೂಗಿದವರಿಗೆ ಬೆಂಬಲ ನೀಡುವಲ್ಲಿಗೆ ಬಂದು ನಿಂತಿದೆ. ಬೇರೆ ದೇಶದ ಪ್ರಜೆಯೊಬ್ಬ ಈ ರೀತಿ ಶತ್ರು ದೇಶದ ಪರವಾಗಿ ನಿಲ್ಲುತ್ತಾನೆಂದರೆ ಆತ ನಮ್ಮ ದೇಶದಲ್ಲಿರಲು ಅರ್ಹನಲ್ಲ, ಹಾಗಾಗಿ ಚೇತನ್ ಮೇಲೆ ಇದುವರೆಗೂ ದಾಖಲಾಗಿರುವ ದೂರುಗಳ ಆಧಾರದ ಮೇಲೆ ಆತನನ್ನು ದೇಶದಿಂದ ಗಡಿಪಾರು ಮಾಡಬೇಕೆಂದು ಆಗ್ರಹಿಸಿದರು.

ನಟ ಚೇತನ್ ಪಾಕಿಸ್ತಾನಕ್ಕೆ ತೆರಳಿ ಅಲ್ಲಿ ಮೂಲಭೂತ ಸಮಸ್ಯೆಗಳು, ಜಾತ್ಯಾತೀತತೆ ಹಾಗೂ ಮಾನವತಾವಾದವನ್ನು ಬೋಧಿಸಲಿ. ಇದಕ್ಕಾಗಿ ನಾವೇ ಟಿಕೆಟ್ ಹಣ ನೀಡುತ್ತೇವೆ. ಅದಕ್ಕಾಗಿ ಇಂದು ಸಾಂಕೇತಿಕವಾಗಿ ಜನರಿಂದ ಒಂದೊಂದು ರೂಪಾಯಿ ದೇಣಿಗೆ ಪಡೆಯುತ್ತಿದ್ದೇವೆ ಎಂದರು.

ಈ ವೇಳೆ ಸಮಿತಿಯ ಅಧ್ಯಕ್ಷ ವಿಕಾಸ್ ಶಾಸ್ತ್ರಿ, ತೇಜಸ್, ವೀರ ಸಾವರ್ಕರ್ ಯುವ ಬಳಗದ ರಾಕೇಶ್ ಭಟ್, ವಿಕ್ರಮ್ ಅಯ್ಯಂಗಾರ್, ಜಯಸಿಂಹ, ಸಾಮಾಜಿಕ ಕಾರ್ಯಕರ್ತ ಲೋಹಿತ್ ಸೇರಿದಂತೆ ಮತ್ತಿತರರಿದ್ದರು.

ಬಿಜೆಪಿಯ ಬಣಕಾರ್, ಜೆಡಿಎಸ್‌ನ ಶ್ರೀನಿವಾಸ್, ನಿಂಗಪ್ಪ, ಮಲ್ಲಿಕಾರ್ಜುನ ಕಾಂಗ್ರೆಸ್‌ಗೆ ಸೇರ್ಪಡೆ

ಬೆಂಗಳೂರು, ನ. 21- ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗೆ ಹಲವು ತಿಂಗಳು ಬಾಕಿ ಉಳಿದಿರುವಂತೆಯೇ ರಾಜ್ಯದಲ್ಲಿ ಪಕ್ಷಾಂತರ ಪರ್ವ ಬಿರುಸುಗೊಂಡಿದ್ದು, ಬಿಜೆಪಿಯ ಓರ್ವ ಹಾಗೂ ಜೆಡಿಎಸ್‌ನ ಮೂವರು ನಾಯಕರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಹಿರೇಕೇರೂರು ಬಿಜೆಪಿ ಮಾಜಿ ಶಾಸಕ ಯು ಬಿ ಬಣಕಾರ್, ತುಮಕೂರು ಗ್ರಾಮಾಂತರ ಜೆಡಿಎಸ್ ಮಾಜಿ ಶಾಸಕ ಎಚ್ ನಿಂಗಪ್ಪ, ಬಿಜಾಪುರದ ಮಲ್ಲಿಕಾರ್ಜುನ ರೋಣಿ ಹಾಗೂ ಕೂಡ್ಲಗಿಯ ಜೆಡಿಎಸ್ ಮುಖಂಡ ಡಾ. ಎನ್.ಟಿ. ಶ್ರೀನಿವಾಸ್ ತಮ್ಮ ಅಪಾರ ಬೆಂಬಲಿಗರೊಂದಿಗೆ ಇಂದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಬೆಂಗಳೂರಿನ ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್, ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ ಪಾಟೀಲ್, ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್ ಹಾಗೂ ಇತರ ನಾಯಕರು ಪಕ್ಷದ ಬಾವುಟ ನೀಡಿ ಸ್ವಾಗತಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಂಗಳೂರಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರತಿಧ್ವನಿ

ಮೈಸೂರಲ್ಲಿ ಎನ್ಐಎ ಅಧಿಕಾರಿಗಳಿಂದ ತನಿಖೆ ತೀವ್ರ

ಗುಪ್ತಚರ ವಿಭಾಗದ ಪೊಲೀಸರ ಕಾರ್ಯ ಚುರುಕು



ಶಂಕಿತ ಉಗ್ರ ವಾಸಿಸುತ್ತಿದ್ದ ಮೈಸೂರಿನ ಲೋಕನಾಯಕನಗರದ ಮನೆಯ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿರುವುದು.

ಮೈಸೂರು, ನ. 21(ಆರ್‌ಕೆ)– ಮಂಗಳೂರಿನಲ್ಲಿ ಶನಿವಾರ ಸಂಜೆ ಸಂಭವಿಸಿದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಹಿನ್ನೆಲೆಯಲ್ಲಿ ಐವರು ಸದಸ್ಯರನ್ನೊಳಗೊಂಡ ಎನ್ಐಎ (ನ್ಯಾಷನಲ್ ಇನ್ವೆಸ್ಟಿಗೇಷನ್ ಏಜೆನ್ಸಿ) ತಂಡವು, ಮೈಸೂರಿನಲ್ಲಿ ಇಂದು ತೀವ್ರಗತಿಯಲ್ಲಿ ತನಿಖೆ ನಡೆಸಿತು.

ಶಂಕಿತ ಉಗ್ರ ಮೊಹಮದ್ ಶಾರಿಕ್ ವಾಸವಿದ್ದ ಮನೆಯ ಕೊಠಡಿಯಲ್ಲೇ ರಸಾಯನಿಕ ಬಳಸಿ ಕುಕ್ಕರ್ ಬಾಂಬ್ ತಯಾರಿಸುತ್ತಿದ್ದ ಎಂಬ ವಿಷಯ ತಿಳಿಯುತ್ತಿದ್ದಂತೆಯೇ ಇಂದು ಬೆಳಗ್ಗೆ ಮೈಸೂರಿಗೆ ಆಗಮಿಸಿರುವ ಎನ್ಐಎ ತಂಡದ ಅಧಿಕಾರಿಗಳು, ಸ್ಥಳೀಯ ಪೊಲೀಸರ ನೆರವಿನಿಂದ ಮೇಟಗಳ್ಳಿಯ ಲೋಕನಾಯಕ ನಗರದಲ್ಲಿ ರೂಂನಿಂದ ಮಹತ್ವದ ಮಾಹಿತಿ ಕಲೆ ಹಾಕಿದ್ದಾರೆ ಎನ್ನಲಾಗಿದೆ. ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಲೋಕನಾಯಕನಗರದ 2ನೇ ಮುಖ್ಯ ರಸ್ತೆ, 10ನೇ ಕ್ರಾಸ್‌ನಲ್ಲಿರುವ ಮಂಗಳಮ್ಮ ಎಂಬುವರ ಮನೆ ಕೊಠಡಿಯಲ್ಲಿ ವಾಸವಾಗಿದ್ದ ಶಂಕಿತ, ಕುಕ್ಕರ್ ಬಾಂಬ್ ತಯಾರಿಸುತ್ತಿದ್ದು, ಅದಕ್ಕೆ ಬಳಸುತ್ತಿದ್ದ ಪರಿಕರಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದರು. ಸೋಮವಾರ ಎನ್ಐಎ ಅಧಿಕಾರಿಗಳು, ಆತ ವಾಸಿಸುತ್ತಿದ್ದ ಕೊಠಡಿ ಹಾಗೂ ಪೊಲೀಸರು ವಶಪಡಿಸಿಕೊಂಡಿರುವ ವಸ್ತುಗಳನ್ನು ಪರಿಶೀಲಿಸಿದರು. ಅದೇ ರೀತಿ ಮೊಬೈಲ್ ರಿಪೇರಿ ತರಬೇತಿ ಪಡೆದು ಸಿಮ್ ಕಾರ್ಡ್ ಖರೀದಿಸಿದ್ದನೆನ್ನಲಾದ ಅಗ್ರಹಾರದ ಮೊಬೈಲ್ ಶಾಪ್‌ಗೂ ಮಧ್ಯಾಹ್ನ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು. ಸ್ನೇಹಿತ ಸೈಯದ್ ಅಹಮದ್‌ನೊಂದಿಗೆ ಮೊಬೈಲ್ ರಿಪೇರಿ ತರಬೇತಿ ಪಡೆದಿದ್ದು, ಶಂಕಿತ ಉಗ್ರನೊಂದಿಗೆ ಇನ್ನೂ ಮೂವರು ನಿರಂತರ ಸಂಪರ್ಕದಲ್ಲಿದ್ದರು ಎಂದು ತಿಳಿದುಬಂದಿದೆ.

2020ರಿಂದೀಚೆಗೆ ಕರ್ನಾಟಕದ ಎರಡು ಕಡೆ ನಡೆದಿದ್ದ 2 ಕಾನೂನುಬಾಹಿರ ಚಟುವಟಿಕೆ ಪ್ರಕರಣದಲ್ಲಿ ಶಾರಿಕ್ ಭಾಗಿಯಾಗಿದ್ದ. 2022ರ ಸೆಪ್ಟೆಂಬರ್‌ನಲ್ಲಿ ಶಿವಮೊಗ್ಗದಲ್ಲಿ ನಡೆದಿದ್ದ ಭಯೋತ್ಪಾದನಾ ಕೃತ್ಯದಲ್ಲೂ ಆತ ಪೊಲೀಸರಿಗೆ ಬೇಕಾಗಿದ್ದನಲ್ಲದೆ ಐಸಿಸ್ ಸಂಘಟನೆಯೊಂದಿಗೂ ನಂಟು ಹೊಂದಿದ್ದನೆಂಬುದು ಆರಂಭಿಕ ತನಿಖೆಯಲ್ಲಿ ತಿಳಿದುಬಂದಿದೆ.

ಮಂಗಳೂರಲ್ಲಿ ಕುಕ್ಕರ್ ಬಾಂಬ್ ಸ್ಫೋಟವಾಗಿ, ಅದರ ರೂವಾರಿ ಮೈಸೂರಲ್ಲೇ ಬಾಂಬ್ ಸಿದ್ಧಪಡಿಸುತ್ತಿದ್ದ ಎಂಬ ಸ್ಫೋಟಕ ಮಾಹಿತಿ ತಿಳಿಯುತ್ತಿದ್ದಂತೆಯೇ ಎಚ್ಚೆತ್ತ ರಾಜ್ಯ ಗುಪ್ತಚರ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ, ತಮ್ಮ ಕಾರ್ಯಾಚರಣೆಯನ್ನು ಚುರುಕುಗೊಳಿಸಿದ್ದು, ಮೈಸೂರು ನಗರದಾದ್ಯಂತ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೂ ಅನುಮಾನಾಸ್ಪದ ವ್ಯಕ್ತಿಗಳು, ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಮೈಸೂರು ನಗರದ ಸಾರ್ವಜನಿಕ ಸ್ಥಳಗಳು, ಪ್ರಮುಖ ರಸ್ತೆ, ಸರ್ಕಲ್‌ಗಳು, ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳು ಕಾರ್ಯನಿರ್ವಹಿಸುವಂತೆ ಎಚ್ಚರ ವಹಿಸುತ್ತಿರುವ ಪೊಲೀಸರು, ದೃಶ್ಯಾವಳಿ ಮೇಲೆ ನಿರಂತರ ನಿಗಾ ವಹಿಸಿ ಅನುಮಾನಾಸ್ಪದ ವ್ಯಕ್ತಿಗಳ ಚಲನವಲನಗಳನ್ನು ವೀಕ್ಷಿಸುತ್ತಿದ್ದಾರೆ.

ಮೈಸೂರಿನ ಚೆಕ್‌ಪೋಸ್ಟ್‌ಗಳಲ್ಲಿ ವಾಹನಗಳ ತಪಾಸಣೆ

ನಂಬರ್ ಪ್ಲೇಟ್ ಇಲ್ಲದ, ದೋಷಪೂರಿತ ಪ್ಲೇಟ್, ಅನುಮಾನಾಸ್ಪದ ವಾಹನಗಳ ವಶ



ಮೈಸೂರು,ನ.21(ಆರ್‌ಕೆ)– ಮಂಗಳೂರಲ್ಲಿ ಕುಕ್ಕರ್ ಬಾಂಬ್ ಸ್ಫೋಟಗೊಂಡ ಪ್ರಕರಣದಲ್ಲಿ ಶಂಕಿತ ಉಗ್ರ ಮೈಸೂರಿನಲ್ಲೇ ಬಾಂಬ್ ತಯಾರಿಸುತ್ತಿದ್ದ ಎಂಬುದು ತಿಳಿದ ಹಿನ್ನೆಲೆಯಲ್ಲಿ ಎಚ್ಚೆತ್ತ ಪೊಲೀಸರು, ತೀವ್ರ ಕಟ್ಟೆಚ್ಚರ ವಹಿಸುತ್ತಿದ್ದಾರೆ.

ಭಾನುವಾರ ಮಧ್ಯರಾತ್ರಿಯಿಂದಲೇ ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಮೈಸೂರು–ಬೆಂಗಳೂರು ರಸ್ತೆ, ಕೆಆರ್‌ಎಸ್ ರಸ್ತೆ, ಹುಣಸೂರು ರಸ್ತೆ, ಬೋಗಾದಿ ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ನಂಜನಗೂಡು ರಸ್ತೆ, ತಿ.ನರಸೀಪುರ ರಸ್ತೆಯ ಚೆಕ್‌ಪೋಸ್ಟ್‌ಗಳಲ್ಲಿ ದಿನದ 24 ಗಂಟೆಯೂ ಬಂದು ಹೋಗುವ ವಾಹನಗಳನ್ನು ಪೊಲೀಸರು ತೀವ್ರ ತಪಾಸಣೆ ನಡೆಸುತ್ತಿದ್ದಾರೆ.

ಹೊರ ಜಿಲ್ಲೆ, ಹೊರ ರಾಜ್ಯಗಳ ನೋಂದಣಿ ಸಂಖ್ಯೆಯ ವಾಹನಗಳು, ದೋಷಪೂರಿತ ಹಾಗೂ ನಂಬರ್ ಪ್ಲೇಟ್ ಇಲ್ಲದ ವಾಹನಗಳನ್ನು ತಪಾಸಣೆ ನಡೆಸುತ್ತಿರುವ ಪೊಲೀಸರು, ಸಂಶಯಾಸ್ಪದ ವಾಹನಗಳು, ವ್ಯಕ್ತಿಗಳನ್ನು ವಶಕ್ಕೆ ಪಡೆಯುತ್ತಿದ್ದಾರೆ. ಮೈಸೂರಿಗೆ ಬರುವ ಹಾಗೂ ಹೋಗುವ ಎಲ್ಲಾ ವಾಹನಗಳನ್ನು ತಡೆದು ನಿಲ್ಲಿಸಿ, ತಪಾಸಣೆ ನಡೆಸಲಾಗುತ್ತಿದೆ.

ಮೂರೂ ಪಾಳಿಯಲ್ಲಿ ಸಬ್‌ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಅಧಿಕಾರಿಗಳೊಂದಿಗೆ ವಾಹನ ತಪಾಸಣೆಗೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿದ್ದು, ಪ್ರತೀ ಚೆಕ್‌ಪೋಸ್ಟ್‌ಗಳಲ್ಲಿ ಸಿಸಿ ಕ್ಯಾಮರಾದಲ್ಲಿ ಸೆರೆಯಾಗುತ್ತಿರುವ ದೃಶ್ಯಗಳನ್ನು ವೀಕ್ಷಿಸಿ ವಾಹನಗಳ ಚಲನ–ವಲನಗಳ ಮೇಲೆ ತೀವ್ರ ನಿಗಾ ಇರಿಸಿದ್ದಾರೆ.

ಅದೇ ರೀತಿ ಮೈಸೂರಿನ ರೈಲು ನಿಲ್ದಾಣ, ಬಸ್ ನಿಲ್ದಾಣ, ವಿಮಾನ ನಿಲ್ದಾಣಗಳಲ್ಲೂ ಪ್ರಯಾಣಿಕರ ಬಗ್ಗೆ ನಿಗಾ ಇರಿಸಿ ಕಟ್ಟೆಚ್ಚರ ವಹಿಸಲಾಗುತ್ತಿದ್ದು, ಹೋಟೆಲು, ವಸತಿ ಗೃಹಗಳಲ್ಲಿ ವಾಸ್ತವ್ಯ ಹೂಡುವವರ ಸಂಪೂರ್ಣ ಮಾಹಿತಿಯನ್ನೂ ಸಂಗ್ರಹಿಸಲಾಗುತ್ತಿದೆ. ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಆಯಾ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್‌ಗಳು ಗಸ್ತು ಕಾರ್ಯಾಚರಣೆ ನಡೆಸುತ್ತಿದ್ದು, ಸಂಶಯಾಸ್ಪದ ಹಾಗೂ ಅಪರಿಚಿತ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಶಂಕಿತ ಉಗ್ರ ಶಾರೀಕ್ ಕೊಠಡಿ ಬಾಡಿಗೆ ಪಡೆದು ಭಯೋತ್ಪಾದನಾ ಕೃತ್ಯಕ್ಕೆ ಬಾಂಬ್ ತಯಾರಿಸುತ್ತಿದ್ದ ಮೈಸೂರಿನ ಲೋಕನಾಯಕ ನಗರದಲ್ಲಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಬಂದೋಬಸ್ತ್ ಮಾಡಲಾಗಿದೆ. ಪಿಜಿಗಳು, ಹೊರಭಾಗದ ವಸತಿ ನಿಲಯ, ಲಾಡ್ಜ್‌ಗಳು, ಫಾರಂ ಹೌಸ್‌ಗಳ ಮೇಲೂ ನಿಗಾ ವಹಿಸುತ್ತಿರುವ ಪೊಲೀಸರು, ರಿಂಗ್ ರಸ್ತೆ ಜಂಕ್ಷನ್‌ಗಳಲ್ಲಿ ಸಂಚಾರ ಪೊಲೀಸರು ಕಟ್ಟೆಚ್ಚರ ವಹಿಸಿ ಅನುಮಾನಾಸ್ಪದ ವಾಹನಗಳು ಕಂಡಲ್ಲಿ ವಶಕ್ಕೆ ಪಡೆದು ಪರಿಶೀಲಿಸುವಂತೆ ಉನ್ನತಾಧಿಕಾರಿಗಳು ನಿರ್ದೇಶನ ನೀಡಿದ್ದಾರೆ.

ಎಫ್‌ಎಸ್‌ಎಲ್ ತಂಡದಿಂದಲೂ ಸ್ಫೋಟಕ ತಲಾಶ್

ಮೈಸೂರು,ನ.21(ಆರ್‌ಕೆ)– ಶಂಕಿತ ಉಗ್ರ ವಾಸವಿದ್ದ ಮೈಸೂರಿನ ಮನೆಯ ಕೊಠಡಿಯಲ್ಲಿ ಪತ್ತೆಯಾಗಿರುವ ಸ್ಫೋಟಕ ವಸ್ತುಗಳನ್ನು ಎಫ್‌ಎಸ್‌ಎಲ್ ತಂಡದ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಮೇಟಗಳ್ಳಿ ಠಾಣೆ ಪೊಲೀಸರು ವಶಪಡಿಸಿಕೊಂಡಿರುವ ಸರ್ಕ್ಯೂಟ್ ಬೋರ್ಡ್, ವಯರ್‌ಗಳು, ಸಣ್ಣಸಣ್ಣ ನಟ್–ಬೋಲ್ಟ್‌ಗಳು, ಬ್ಯಾಟರಿ, ಮೊಬೈಲ್, ರಸಾಯನಿಕ ಪೌಡರ್‌ಗಳು, ಅಲ್ಯೂಮಿನಿಯಂ ಮಲ್ಟಿ ಮೀಟರ್‌ಗಳು, ಮಿಕ್ಸರ್ ಜಾರ್‌ಗಳು, ಪ್ರೆಷರ್ ಕುಕ್ಕರ್‌ಗಳನ್ನು ಪರಿಶೀಲಿಸಿದರು.

ಕುಕ್ಕರ್ ಬಾಂಬ್ ಸಿದ್ಧಪಡಿಸಲು ಬಳಸುತ್ತಿದ್ದ ಎಲ್ಲಾ ಪರಿಕರಗಳನ್ನು ತಮ್ಮ ವಶಕ್ಕೆ ಪಡೆದಿರುವ ಅಧಿಕಾರಿಗಳು, ಪ್ರಯೋಗಾಲಯದಲ್ಲಿ ಪರೀಕ್ಷಿಸಲು ಕೊಂಡೊಯ್ದಿದ್ದಾರೆ. ಅದೇ ರೀತಿ ಸ್ಥಳದಲ್ಲಿ ದೊರೆತಿರುವ ಮೊಬೈಲ್, 2 ನಕಲಿ ಆಧಾರ್ ಕಾರ್ಡ್, 1 ನಕಲಿ ಪ್ಯಾನ್ ಕಾರ್ಡ್, 1 ಫಿನೋ ಡೆಬಿಟ್ ಕಾರ್ಡ್ ನಕಲಿ ಮಾಡಿದ್ದೇಗೆ, ಸಹಕರಿಸಿದವರ್‍ಯಾರು ಎಂಬಿತ್ಯಾದಿ ಮಾಹಿತಿ ಸಂಗ್ರಹಿಸಲು ಠಾಣೆ ಪೊಲೀಸರು ಕಾರ್ಯೋನ್ಮುಖರಾಗಿದ್ದಾರೆ.

ಗೆಜ್ಜಿಗನಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



> ಅಸ್ತಿತ್ವ ಫೌಂಡೇಷನ್‌ನವರು ನಮ್ಮ ಗ್ರಾಮಕ್ಕೆ ನುರಿತ ವೈದ್ಯರ ಸಮೇತ ಬಂದು ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಿ ಕೊಟ್ಟಿದ್ದಾರೆ. ಇದರಿಂದ ಗ್ರಾಮಸ್ಥರಿಗೆ ಅನುಕೂಲವಾಗಿದೆ. ಇಂತಹ ಕಾರ್ಯಕ್ರಮಗಳು ಮತ್ತಷ್ಟು ನಡೆದರೆ ಗ್ರಾಮೀಣ ಭಾಗದ ಜನರ ಆರೋಗ್ಯ ಸುಧಾರಿಸುತ್ತದೆ.
> **– ಜಿ.ಪಿ.ಮಹದೇವಪ್ರಸಾದ್, ಗ್ರಾಪಂ ಸದಸ್ಯ, ಗೆಜ್ಜಿಗನಹಳ್ಳಿ**

ಮೈಸೂರು,ನ.21–ನಂಜನಗೂಡು ತಾಲೂಕಿನ ಗೆಜ್ಜಿಗನಹಳ್ಳಿಯಲ್ಲಿ ಜೆಎಸ್‌ಎಸ್ ಆಸ್ಪತ್ರೆ ಸಹಯೋಗದೊಂದಿಗೆ ಅಸ್ತಿತ್ವ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ 'ಉಚಿತ ಆರೋಗ್ಯ ತಪಾಸಣೆ' ಶಿಬಿರ ಯಶಸ್ವಿಯಾಗಿ ನಡೆಯಿತು.

ಹೃದ್ರೋಗ, ನರರೋಗ, ಸ್ತ್ರೀರೋಗ, ಕೀಲು–ಮೂಳೆ, ಕಣ್ಣು ಸಾಮಾನ್ಯ ಚಿಕಿತ್ಸೆ, ಪ್ರಸೂತಿ, ಸಕ್ಕರೆ ಕಾಯಿಲೆ (ಡಯಾಬಿಟಿಸ್) ಸೇರಿದಂತೆ ಐದು ಪ್ರತ್ಯೇಕ ವಿಭಾಗಗಳಲ್ಲಿ ತಜ್ಞ ವೈದ್ಯರಿಂದ ನಡೆದ ಶಿಬಿರದಲ್ಲಿ 300ಕ್ಕೂ ಹೆಚ್ಚು ಮಂದಿ ಭಾಗವಹಿಸಿ, ಶಿಬಿರದ ಸದುಪಯೋಗ ಪಡೆದುಕೊಂಡರು.

ಶಿಬಿರದಲ್ಲಿ ವಯೋಸಹಜ ಸಮಸ್ಯೆಗಳಿಂದ ಬಳಲುವ ವೃದ್ಧರ ಸಂಖ್ಯೆ ಹೆಚ್ಚಾಗಿತ್ತು. ಕೀಲು–ಮೂಳೆ ಸಮಸ್ಯೆ, ಸಕ್ಕರೆ ಖಾಯಿಲೆ, ಅಧಿಕ ರಕ್ತದೊತ್ತಡ(ಬಿಪಿ)ವೆಂದು ತಪಾಸಣೆಗೆ ಒಳಗಾದವರಿಗೆ ಪರೀಕ್ಷೆ ನಡೆಸಿ, ಅಗತ್ಯವಿದ್ದವರಿಗೆ ಉಚಿತವಾಗಿ ಔಷಧಿ–ಮಾತ್ರೆಗಳನ್ನು ನೀಡಲಾಯಿತು. ಅಲ್ಲದೆ ಖಾಯಿಲೆ ನಿಯಂತ್ರಣಕ್ಕೆ ಅನುಸರಿಸಬೇಕಾದ ಸೂಚನೆಗಳ ಬಗ್ಗೆ ಮಾಹಿತಿ ನೀಡಲಾಯಿತು.

ಜೆಎಸ್‌ಎಸ್ ಆಸ್ಪತ್ರೆಯ ಸುಮಾರು 12 ಮಂದಿ ವೈದ್ಯರು, ಮೂವರು ಫಾರ್ಮಸಿಸ್ಟ್ ಸಿಬ್ಬಂದಿ ಶಿಬಿರಕ್ಕೆ ಬಂದ ರೋಗಿಗಳನ್ನು ಆತ್ಮೀಯತೆಯಿಂದ ಕಂಡು ಚಿಕಿತ್ಸೆ ನೀಡಿದರಲ್ಲದೆ ಶಿಬಿರದ ಯಶಸ್ಸಿಗೆ ಶ್ರಮಿಸಿದರು. ಅಸ್ತಿತ್ವ ಫೌಂಡೇಷನ್ ಟ್ರಸ್ಟಿ ಮಹದೇವಪ್ರಸಾದ್, ರಂಗನಾಥ್, ಗಿರೀಶ್ ಭಾಗ, ಹೃದ್ರೋಗ ತಜ್ಞೆ ಡಾ. ಪೂರ್ಣಿಮಾ, ಡಾ. ಅನುಜೋಶ್, ಡಾ. ಶ್ರೇಯಸ್, ಡಾ. ಅನೂಪ್, ಡಾ. ಕೀರ್ತನಾ ತಪಾಸಣೆ ನಡೆಸಿದರು.

ನಂತರ ಅಸ್ತಿತ್ವ ಫೌಂಡೇಷನ್ ಅಧ್ಯಕ್ಷೆ ಎಂ.ಜಿ.ಪ್ರಗತಿ ಮಾತನಾಡಿ, ಗ್ರಾಮೀಣ ಜನತೆಯ ಆರೋಗ್ಯದ ದೃಷ್ಟಿಯಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರ ಯಶಸ್ವಿಯಾಗಿದೆ. 300ಕ್ಕೂ ಹೆಚ್ಚು ಮಂದಿ ಶಿಬಿರದ ಸದುಪಯೋಗ ಪಡೆದುಕೊಂಡಿದ್ದಾರೆ. ಗ್ರಾಮೀಣ ಜನತೆಯ ಶಿಕ್ಷಣ ಮತ್ತು ಆರೋಗ್ಯದ ಕಾಳಜಿ ಅಸ್ತಿತ್ವ ಫೌಂಡೇಷನ್ ಉದ್ದೇಶವಾಗಿದೆ ಎಂದರು.

ಸಂತಸ: ನಾನು ಒಬ್ಬನೆ ಇದ್ದೇನೆ. ಚಿಕಿತ್ಸೆಗೆ ಹಣ ಖರ್ಚು ಮಾಡುವಷ್ಟು ಸ್ಥಿತಿವಂತನಲ್ಲ. ನನಗೆ ವಯೋಸಹಜವಾದ ಮಂಡಿ ನೋವು ಮತ್ತು ಬಿಪಿ, ಶುಗರ್ ಖಾಯಿಲೆಗಳ ಬಗ್ಗೆ ಆತಂಕವಿರುವ ಕಾರಣ ತಪಾಸಣೆ ಮಾಡಿಕೊಂಡಿದ್ದೇನೆ. ಇಂತಹ ಶಿಬಿರಗಳು ನಡೆದಾಗ ನಮ್ಮಂತಹವರಿಗೆ ನೆರವಾಗುತ್ತದೆ ಎಂದು ಗೆಜ್ಜಿಗನಹಳ್ಳಿ ಗ್ರಾಮಸ್ಥ ಮರೀಗೌಡ ಸಂತಸ ವ್ಯಕ್ತಪಡಿಸಿದರೆ, ನನಗೆ ಮಂಡಿ ಮತ್ತು ರಟ್ಟೆ(ಕೈ) ನೋವು ಕಾಣಿಸಿಕೊಳ್ಳುತ್ತಿತ್ತು. ಚಿಕಿತ್ಸೆ ಪಡೆಯಲು ಶಿಬಿರಕ್ಕೆ ಬಂದಿದ್ದೇನೆ. ಮಾತ್ರೆ ಮತ್ತು ಔಷಧಿಗಳು ದೊರೆತು ಗುಣಮುಖವಾದರೆ ಸಾಕು ಎಂದು ಗೆಜ್ಜಗಳ್ಳಿ ಗ್ರಾಮದ ಮಹದೇವಮ್ಮ ತಿಳಿಸಿದರು.



ಮೈಸೂರಿನ ಸಿದ್ದಲಿಂಗೇಶ್ವರ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಶಾಸಕ ಜಿ.ಟಿ.ದೇವೇಗೌಡರು, ನಗರಪಾಲಿಕೆ ಸದಸ್ಯೆ ಸವಿತಾ ಸುರೇಶ್ ಹಾಗೂ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪುಣೆ–ಬೆಂಗಳೂರು ಹೆದ್ದಾರಿಯಲ್ಲಿ ಭೀಕರ ಅಪಘಾತ: ಒಟ್ಟಿಗೆ 48 ವಾಹನಗಳು ಜಖಂ

ಮುಂಬೈ: ಪುಣೆಯಲ್ಲಿರುವ ಬೆಂಗಳೂರು ಹೆದ್ದಾರಿಯ ನವಲೆ ಸೇತುವೆಯಲ್ಲಿ ಭೀಕರ ಅಪಘಾತ ಸಂಭವಿಸಿದ್ದು, ಒಟ್ಟಿಗೆ 48 ವಾಹನಗಳು ಜಖಂಗೊಂಡಿವೆ. ಟ್ಯಾಂಕರ್‌ವೊಂದರ ಬ್ರೇಕ್ ವೈಫಲ್ಯದಿಂದಾಗಿ ಕನಿಷ್ಠ 48 ವಾಹನಗಳು ಅಪಘಾತಕ್ಕೀಡಾಗಿವೆ. ರಾತ್ರಿ 8:30ರ ಸುಮಾರಿಗೆ ಘಟನೆ ನಡೆದಿದ್ದು, ಹಲವರು ಗಾಯಗೊಂಡಿರುವ ಶಂಕೆ ವ್ಯಕ್ತವಾಗಿದೆ. ಸದ್ಯ ಪುಣೆ ಅಗ್ನಿಶಾಮಕ ದಳ ಮತ್ತು ಪುಣೆ ಮೆಟ್ರೋಪಾಲಿಟನ್ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಕ್ಷಣಾ ತಂಡಗಳು ಸ್ಥಳಕ್ಕೆ ಭೇಟಿ ನೀಡಿ ಕಾರ್ಯಾಚರಣೆ ನಡೆಸುತ್ತಿವೆ. ಸಾರ್ವಜನಿಕರ ಸುರಕ್ಷತೆಗಾಗಿ ಆಂಬುಲೆನ್ಸ್‌ಗಳ ವ್ಯವಸ್ಥೆಯನ್ನು ನಿಯೋಜಿಸಲಾಗಿದೆ.



ಪಿಎಂಆರ್‌ಡಿಎ ಅಗ್ನಿಶಾಮಕ ದಳದ ಅಧಿಕಾರಿ ಸುಜಿತ್ ಪಾಟೀಲ್ ಮಾತನಾಡಿ, ಪ್ರಾಥಮಿಕ ಮಾಹಿತಿಯ ಪ್ರಕಾರ ಟ್ಯಾಂಕರ್ ಬ್ರೇಕ್ ವೈಫಲ್ಯದ ನಂತರ ಕನಿಷ್ಠ 48 ವಾಹನಗಳು ಅಪಘಾತಕ್ಕೀಡಾಗಿವೆ. ಹಾನಿಗೊಳಗಾದ ವಾಹನಗಳಿಂದ ಗಾಯಗೊಂಡ ಕೆಲ ನಾಗರಿಕರನ್ನ ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ. ಸದ್ಯಕ್ಕೆ ಗಾಯಗೊಂಡವರ ಸಂಖ್ಯೆ ಮತ್ತು ಅವರ ಗಾಯಗಳ ಸ್ವರೂಪದ ನಮಗೆ ತಿಳಿದಿಲ್ಲ. ಅಗ್ನಿಶಾಮಕ ದಳದ ರಕ್ಷಣಾ ತಂಡಗಳು ಕಾರ್ಯಾಚರಣೆ ನಡೆಸುತ್ತಿವೆ ಎಂದು ಹೇಳಿದ್ದಾರೆ.

ಅಭ್ಯರ್ಥಿಗಳನ್ನು ಘೋಷಣೆ ಮಾಡುವ ಹಕ್ಕು ಸಿದ್ದರಾಮಯ್ಯಗೆ ಇಲ್ಲ



ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಗೆ ರಾಜಕೀಯ ಪಕ್ಷಗಳ ಸಿದ್ಧತೆ ಆರಂಭವಾಗಿರುವಂತೆಯೇ ಇತ್ತ ಅಭ್ಯರ್ಥಿಗಳನ್ನು ಘೋಷಣೆ ಮಾಡುವ ಹಕ್ಕು ಸಿದ್ದರಾಮಯ್ಯಗೆ ಇಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಕೊಪ್ಪಳದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಸಿದ್ದರಾಮಯ್ಯ ಅವರು ಘೋಷಣೆ ಮಾಡಿದ್ದಾರೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್, ಚುನಾವಣೆಗೆ ಪಕ್ಷದ ಅಭ್ಯರ್ಥಿಗಳನ್ನು ಘೋಷಣೆ ಮಾಡುವ ಹಕ್ಕು ಸಿದ್ದರಾಮಯ್ಯ ಅವರಿಗೆ ಇಲ್ಲ ಎಂದು ಹೇಳಿದ್ದಾರೆ.

ಅಭ್ಯರ್ಥಿಗಳನ್ನು ಘೋಷಣೆ ಮಾಡುವ ಹಕ್ಕು ಸಿದ್ದರಾಮಯ್ಯ ಅವರಿಗೂ ಇಲ್ಲ, ನನಗೂ ಇಲ್ಲ. ಆ ಅಧಿಕಾರ ಏನಿದ್ದರೂ ಎಐಸಿಸಿಗೆ ಇದೆ. ಪಕ್ಷದ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಅಭ್ಯರ್ಥಿಗಳನ್ನು ಘೋಷಣೆ ಮಾಡಲಿದ್ದಾರೆ. ಯಾವ ವಿಚಾರದಲ್ಲಿ ಸಿದ್ದರಾಮಯ್ಯ ಅವರು ಹಾಗೆ ಹೇಳಿದ್ದಾರೋ ಗೊತ್ತಿಲ್ಲ. ಅಲ್ಲಿರುವವರಿಗೆ ಉತ್ತೇಜನ ನೀಡಲು ಹೇಳಿರಬಹುದು. ಆದರೆ ಮಲ್ಲಿಕಾರ್ಜುನ ಖರ್ಗೆ ಅವರಿಗೆ, ಹೈಕಮಾಂಡ್‌ಗೆ ಮಾತ್ರ ಅಭ್ಯರ್ಥಿಗಳನ್ನು ತೀರ್ಮಾನಿಸುವ ಅಧಿಕಾರ ಇದೆ ಎಂದರು.



ಮೈಸೂರಿನ ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸಿ.ಮಂಜುನಾಥ್ ಅವರನ್ನು ಸದಸ್ಯರು ಅಭಿನಂದಿಸಿದರು. ಉಪಾಧ್ಯಕ್ಷೆ ನಾಗಮ್ಮ, ನಿಕಟ ಪೂರ್ವ ಅಧ್ಯಕ್ಷ ಕೆ.ಭರತ್, ರವಿ, ಸುಜಾತಾ, ಶಿವರಾಂ ನಾಯಕ್, ಚನ್ನಪ್ಪ, ಕೃಷ್ಣ, ಕೇಬಲ್ ಕುಮಾರ್, ಸುಬ್ರಹ್ಮಣ್ಯ, ಸೋಮಣ್ಣ ಚಿತ್ರದಲ್ಲಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ನ.21– 2022–23ನೇ ಸಾಲಿನ ಪರಿಶಿಷ್ಟ ವರ್ಗಗಳ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರಾತಿಗೆ ಅರ್ಜಿ ಆಹ್ವಾನಿಸಿದ್ದು, ಆಸಕ್ತರು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಯೊಂದಿಗೆ ಜೋಡಿಸಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ ದೂಸಂ. 0821–2543076ಗೆ ಸಂಪರ್ಕಿಸಬಹುದು.

ಕೋಮು ಸಂಘರ್ಷ ಹೇಳಿಕೆಗಳೇ ಸ್ಫೋಟಕ್ಕೆ ಉತ್ತೇಜನ: ಎಚ್‌ಡಿಕೆ

ಕೋಲಾರ: ಜವಾಬ್ದಾರಿಯುತ ಸ್ಥಾನದಲ್ಲಿರುವ ಕೆಲ ವ್ಯಕ್ತಿಗಳ ಕೋಮು ಸಂಘರ್ಷಕ್ಕೆ ಕಾರಣವಾಗುವ ಹೇಳಿಕೆಗಳು ಹಾಗೂ ಪರಸ್ಪರ ದ್ವೇಷ ಮನೋಭಾವ ಬೆಳೆಸುವ ಚಟುವಟಿಕೆಗಳು ಸ್ಫೋಟದಂಥ ಪ್ರಕರಣಗಳಿಗೆ ಉತ್ತೇಜನ ನೀಡುತ್ತಿವೆ ಎಂದು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.



ಜೆಡಿಎಸ್ ಪಂಚರತ್ನ ರಥಯಾತ್ರೆ ವೇಳೆ ತಾಲೂಕಿನ ಕೋರಗಂಡಹಳ್ಳಿಯಲ್ಲಿ ಅವರು ಮಾತನಾಡಿ, ಎರಡೂ ರಾಷ್ಟ್ರೀಯ ಪಕ್ಷಗಳು ಕರಾವಳಿ ಪ್ರದೇಶದಲ್ಲಿ ಕೋಮು ಗಲಭೆ ವಾತಾವರಣ ನಿರ್ಮಿಸಿವೆ. ಈಗ ಅಲ್ಲಿ ಸ್ಫೋಟ ಸಂಭವಿಸಿದ್ದು, ಆರ್ಥಿಕ ವಹಿವಾಟಿಗೆ ತೊಂದರೆ ಆಗುತ್ತದೆ. ಜನರೂ ಆತಂಕಕ್ಕೆ ಒಳಗಾಗುತ್ತಾರೆ ಎಂದರು.

ಸ್ಫೋಟ ಪ್ರಕರಣವನ್ನು ನಾನು ಖಂಡಿಸುತ್ತೇನೆ. ಪ್ರಕರಣದ ಹಿಂದೆ ಸಮಾಜಘಾತುಕ ಶಕ್ತಿಗಳಿದ್ದು, ಕಠಿಣ ಕ್ರಮ ವಹಿಸಬೇಕು. ಪೊಲೀಸರಿಗೆ ಮುಕ್ತ ಅವಕಾಶ ನೀಡಿ ಯಾವುದೇ ಸಂಘಟನೆ ಇದ್ದರೂ ಪತ್ತೆ ಹಚ್ಚಬೇಕು. ಈಗಿನ ಪ್ರಕರಣದಲ್ಲಿ ದೇವರೇ ಆ ಭಾಗದ ಜನರನ್ನು ಕಾಪಾಡಿದ್ದಾನೆ ಎಂದು ಹೇಳಿದರು.

ಯಾವುದೇ ಪಕ್ಷ, ಸಮುದಾಯಗಳಿರಲಿ ನಮ್ಮ ಜವಾಬ್ದಾರಿ ನಾಡಿನ ಜನತೆಗೆ ಸಂಪೂರ್ಣ ರಕ್ಷಣೆ ನೀಡುವುದು, ಸಮಾಜದಲ್ಲಿ ಶಾಂತಿಯುತ ವಾತಾವರಣ ನಿರ್ಮಿಸುವುದು ಆಗಬೇಕು. ಪಕ್ಷಗಳ ಅಂಗ ಪಕ್ಷಗಳು, ಸಂಘಟನೆಗಳು, ಬೇರೆ ಸಮುದಾಯದ ಸಂಘಟನೆಗಳು ಮತ್ತು ಅಲ್ಲಿನ ಧಾರ್ಮಿಕ ಗುರುಗಳು ಇಂಥ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಬಾರದು ಎಂದು ಮನವಿ ಮಾಡಿದರು.

ಗೃಹ ಇಲಾಖೆ ವೈಫಲ್ಯ ಎಂದು ಹೇಳುವುದಿಲ್ಲ. ಗುಪ್ತಚರ ಇಲಾಖೆ ಕೆಲಸ ಮಾಡುತ್ತಿದ್ದರೂ ಪುಲ್ವಾಮದಲ್ಲಿ 40 ಯೋಧರ ಹತ್ಯೆ ನಡೆಯಲಿಲ್ಲವೇ ಸರ್ಕಾರ, ರಾಜಕಾರಣಿಗಳು, ಸಂಘಟನೆಗಳು ದ್ವೇಷದ ವಾತಾವರಣ ನಿರ್ಮಾಣ ಮಾಡಬಾರದು. ಅನಾಹುತ ನಡೆದರೆ ಅಮಾಯಕರು ಸಮಸ್ಯೆಗೆ ಒಳಗಾಗುತ್ತಾರೆ ಎಂದರು.

ಮಾ.31ರ ವೇಳೆಗೆ ಆಧಾರ್‌ಗೆ ಜೋಡಣೆ ಆಗದೇ ಇದ್ದಲ್ಲಿ ಪ್ಯಾನ್ ಕಾರ್ಡ್ ನಿಷ್ಕ್ರಿಯ

ನವದೆಹಲಿ: 2023ರ ಮಾ.31ರ ಒಳಗೆ ಪ್ಯಾನ್ ಕಾರ್ಡ್ ಅನ್ನು ಆಧಾರ್ ಜೊತೆಗೆ ಜೋಡಿಸದೇ ಇದ್ದಲ್ಲಿ ಪ್ಯಾನ್ ಕಾರ್ಡ್ ನಿಷ್ಕ್ರಿಯವಾಗಲಿದೆ.

ಪ್ಯಾನ್ ಕಾರ್ಡ್ ಆಧಾರ್ ಜೊತೆಗೆ ಜೋಡಣೆಯಾಗದೇ ಇದ್ದಲ್ಲಿ, ಪ್ಯಾನ್ ನಿಷ್ಕ್ರಿಯಗೊಳ್ಳುವುದರ ಜೊತೆಗೆ 1,000 ರೂಪಾಯಿಗಳ ದಂಡವನ್ನೂ ವಿಧಿಸಲಾಗುತ್ತದೆ. ಈ ಹಿಂದೆ ದಂಡದ ಮೊತ್ತ 500 ರೂ.ಗಳಷ್ಟಿತ್ತು ಒಂದು ವೇಳೆ ನಿಮ್ಮ ಪ್ಯಾನ್ ಕಾರ್ಡ್ ಮಾನ್ಯವಾಗಿದ್ದರೂ ಆಧಾರ್ ಜೊತೆಗೆ ಜೋಡಿಸದೇ ಇದ್ದಲ್ಲಿ ಅದು ಅಮಾನ್ಯವಾಗಲಿದೆ. ಷೇರುಗಳಲ್ಲಿನ ಹೂಡಿಕೆ, ಮ್ಯೂಚುಯಲ್ ಫಂಡ್ಸ್, ಸಾಲ ಮತ್ತಿತರ ಪ್ರಕ್ರಿಯೆಗಳಿಗೆ ಪ್ಯಾನ್ ಕಾರ್ಡ್ ಕಡ್ಡಾಯವಾಗಿದೆ.

ಡಿಸೆಂಬರ್ ಮೊದಲ ವಾರ ಗುಂಡಿ ಬಿದ್ದ ರಸ್ತೆಗಳ ಡಾಂಬರೀಕರಣ

• ನಗರಸಭಾಧ್ಯಕ್ಷ ಹೆಚ್.ಎಸ್.ಮಂಜುನಾಥ್ ಭರವಸೆ • ನಗರಸಭೆಗೆ ಎಂಎಲ್‌ಸಿ ದಿನೇಶ್ ಗೂಳಿಗೌಡ, ಮಧು ಮಾದೇಗೌಡ ನಿಯೋಗ ಭೇಟಿ



ಮಂಡ್ಯ, ನ.21– ನಗರದ ಗುಂಡಿ ಬಿದ್ದಿರುವ ರಸ್ತೆಗಳನ್ನು ಡಿಸೆಂಬರ್ ಮೊದಲ ವಾರ ಡಾಂಬರೀಕರಣ ಮಾಡಲಾಗುವುದು. ಈ ಸಂಬಂಧ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡು ಟೆಂಡರ್ ಆಹ್ವಾನಿಸಲಾಗಿದೆ ಎಂದು ನಗರಸಭಾಧ್ಯಕ್ಷ ಹೆಚ್.ಎಸ್. ಮಂಜುನಾಥ್ ತಿಳಿಸಿದರು.

ನಗರಸಭೆಯ ತಮ್ಮ ಕಚೇರಿಯಲ್ಲಿ ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಹಾಗೂ ಮಧು ಜಿ.ಮಾದೇಗೌಡ ನೇತೃತ್ವದ ನಿಯೋಗದೊಂದಿಗೆ ರಸ್ತೆ ಗುಂಡಿ ಮುಚ್ಚಿಸುವ ಸಲುವಾಗಿ ಸಭೆ ನಡೆಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಡ್ಯ ನಗರಾಭಿವೃದ್ಧಿಗೆ ಮಾಜಿ ಸಿಎಂ ಕುಮಾರಸ್ವಾಮಿ ಕಾಲದಲ್ಲಿ ಬಿಡುಗಡೆಯಾಗಿದ್ದ ಹಣ ವಾಪಸ್ ಹೋಯಿತು. ಆ ಹಣ ಇದ್ದಿದ್ದರೆ, ರಸ್ತೆಗಳ ಸಮಸ್ಯೆ ಇರುತ್ತಿರಲಿಲ್ಲ. ಪಿಡಬ್ಲ್ಯೂಡಿ ಇಲಾಖೆ ಸಹ ಸಮರ್ಪಕವಾಗಿ ಹಣ ಬಿಡುಗಡೆ ಮಾಡದ ಕಾರಣ ನಗರಸಭೆ ನಿಧಿಯಿಂದ ನಾವೇ ಇದೀಗ ರಸ್ತೆಗಳನ್ನು ಮುಚ್ಚಿಸುವ ಕೆಲಸಕ್ಕೆ ಮುಂದಾಗಿದ್ದೇವೆ ಎಂದರು.

ಮಳೆಯಿಂದ ನಗರದ ಹಲವು ರಸ್ತೆಗಳು ಹಾಳಾಗಿದ್ದು, ರಸ್ತೆ ಗುಂಡಿಗೆ ನಿವೃತ್ತ ಯೋಧ ಸಾವನ್ನಪ್ಪಿದ ಬಗ್ಗೆ ಬೇಸರವಿದೆ. ಲೋಕೋಪಯೋಗಿ ಇಲಾಖೆಯಿಂದ ರಾಜ್ಯ ಹೆದ್ದಾರಿಯಾಗಿರುವ ಗುತ್ತಲು ರಸ್ತೆಯ ಫ್ಯಾಕ್ಟರಿ ವೃತ್ತದಿಂದ ಜಯಲಕ್ಷ್ಮಿ ಚಿತ್ರಮಂದಿರದವರೆಗೆ ಸಂಪೂರ್ಣ ಹಾಳಾಗಿದ್ದ ರಸ್ತೆ ದುರಸ್ತಿ ಸಿದ್ಧಪಡಿಸಲಾಗಿದೆ ಇದೇ ಮಾದರಿ ಉಳಿದ ರಸ್ತೆಗಳ ಡಾಂಬರೀಕರಣ ಕಾಮಗಾರಿ ಶೀಘ್ರ ಆರಂಭವಾಗಲಿದೆ. ನಗರದ ಎಲ್ಲಾ ರಸ್ತೆಗಳ ದುರಸ್ತಿ ಕಾಮಗಾರಿ ಡಿಸೆಂಬರ್ ಮೊದಲ ವಾರ ಶುರುವಾಗಲಿದೆ ಎಂದರು.

ಇನ್ನೆರಡು ತಿಂಗಳಲ್ಲಿ ನಗರದಲ್ಲಿ ಒಂದೇ ಒಂದು ಗುಂಡಿಬಿದ್ದ ರಸ್ತೆಗಳು ಇರಬಾರದೆಂದು ಪಣತೊಟ್ಟಿದ್ದು, ಇದಕ್ಕಾಗಿ ಕೋಟ್ಯಾಂತರ ರೂ. ವ್ಯಯಿಸಲಾಗುತ್ತಿದೆ. ವಿ.ವಿ.ರಸ್ತೆ, ಎಪಿಎಂಸಿ ರಸ್ತೆ ದುರಸ್ತಿ ಕಾಮಗಾರಿಗೆ 48 ಲಕ್ಷ, ನೂರಡಿ ರಸ್ತೆ, ಪೇಟೆ ಬೀದಿ, ಬೆಸಗರಹಳ್ಳಿ ರಾಮಣ್ಣ ವೃತ್ತದ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಗುಂಡಿ ಬಿದ್ದ ರಸ್ತೆಗಳನ್ನು ದುರಸ್ತಿಗೊಳಿಸಲು ತಲಾ 48 ರಿಂದ 80 ಲಕ್ಷದವರೆಗೆ ಹಣ ಮೀಸಲಿಟ್ಟಿದ್ದು, ಈಗಾಗಲೇ ಟೆಂಡರ್ ಕರೆದಿದ್ದೇವೆ. ಶೀಘ್ರ ಕಾಮಗಾರಿ ಆರಂಭಗೊಳ್ಳಲಿದೆ ಎಂದರು.

ಹೊಸ ರಸ್ತೆಗಳು ನಿರ್ಮಾಣವಾಗಲಿದೆ ಎಂದ ಅವರು, ಪ್ರಸ್ತುತ ಕೆಲವರು ಹೆಸರು ಮಾಡಲು ವೆಟ್ ಮಿಕ್ಸ್, ಕಲ್ಲು, ಮರಳನ್ನು ಹಾಕಿ ರಸ್ತೆ ಗುಂಡಿ ಮುಚ್ಚಿಸಿದ್ದೇವೆ ಎನ್ನುತ್ತಿದ್ದು, ಇದರಿಂದ ಅಪಾಯವೇ ಹೆಚ್ಚು. ಬುಲ್ಡೋಜರ್ ಮೂಲಕ ಸಮತಟ್ಟು ಮಾಡದ ಪರಿಣಾಮ ಕಲ್ಲುಗಳು ರಸ್ತೆ ಮೇಲೆ ಇರುತ್ತವೆ. ಅಲ್ಲದೇ ಧೂಳು ಕಣ್ಣಿಗೆ ಬೀಳುವ ಸಾಧ್ಯತೆ ಇರುತ್ತದೆ ಇದರಿಂದ ಅಪಾಯವೇ ಹೆಚ್ಚು ಹೀಗಾಗಿ ಅವೈಜ್ಞಾನಿಕವಾಗಿ ರಸ್ತೆಗುಂಡಿ ಮುಚ್ಚಿಸಲು ಯಾರೇ ಮುಂದಾದರೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುವುದಾಗಿ ಎಚ್ಚರಿಸಿದರು.

ಈ ವೇಳೆ ಜೆಡಿಎಸ್ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ ಗುಂಡಿಗಳನ್ನು ಮುಚ್ಚಿಸುವ ಕೆಲಸಕ್ಕೆ ಮುಂದಾಗಿದ್ದು, ಕೂಡಲೇ ಅವೈಜ್ಞಾನಿಕ ಕಾಮಗಾರಿ ನಿಲ್ಲಿಸದಿದ್ದರೆ ದೂರು ಕೊಡುವ ಎಚ್ಚರಿಕೆ ಕೊಟ್ಟು ಸ್ವಪಕ್ಷೀಯ ಮುಖಂಡನ ಮೇಲೆ ಹರಿಯಾಯ್ದ ಮಂಜು, ಈ ಬಗ್ಗೆ ಜೆಡಿಎಸ್ ಜಿಲ್ಲಾಧ್ಯಕ್ಷರಿಗೆ ದೂರು ನೀಡಿದ್ದೇನೆ ಎಂದರು. ಈ ವೇಳೆ ನಗರಸಭೆ ಉಪಾಧ್ಯಕ್ಷೆ ಇಶ್ರತ್ ಫಾತೀಮಾ, ಆಯುಕ್ತ ಮಂಜುನಾಥ್ ಉಪಸ್ಥಿತರಿದ್ದರು.

50 ಕೋಟಿ ರೂ. ವಾಪಸ್ ತರಲು ನಿರ್ಧಾರ

ಮಂಡ್ಯ, ನ.21– ಮಂಡ್ಯ ನಗರಾಭಿವೃದ್ಧಿಗೆ ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ವೇಳೆ ಮಂಜೂರಾಗಿ, ಬಿಜೆಪಿ ಸರ್ಕಾರದಲ್ಲಿ ವಾಪಸ್ ಹೋದ 50 ಕೋಟಿ ರೂ. ಹಣವನ್ನು ಸರ್ಕಾರದ ಮೇಲೆ ಒತ್ತಡ ತಂದು ಮತ್ತೆ ವಾಪಸ್ ತರಲು ವಿಧಾನಪರಿಷತ್ ಸದಸ್ಯರಾದ ಮಧು ಜಿ.ಮಾದೇಗೌಡ ಹಾಗೂ ದಿನೇಶ್ ಗೂಳಿಗೌಡ ನೇತೃತ್ವದಲ್ಲಿ ತೀರ್ಮಾನಿಸಲಾಯಿತು.

ನಗರಸಭೆಯಲ್ಲಿ ನಡೆದ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಾತನಾಡಿ, ಸರ್ಕಾರ 50 ಕೋಟಿ ಹಣ ಬಿಡುಗಡೆ ಮಾಡಿತ್ತು. ಅಧಿಕಾರಿಗಳು ಹಣ ಬಳಕೆ ಮಾಡಿಕೊಳ್ಳದ ಪರಿಣಾಮ ನೆರೆ ಹಾವಳಿಯಿಂದ ಹಣ ವಾಪಸ್ ಹೋಯಿತು. ಮುಂದೆ ಆ ಹಣ ಮತ್ತೆ ತರಲು ನಾನು, ಮಧು ಮಾದೇಗೌಡರು, ನಗರಸಭೆ ಅಧ್ಯಕ್ಷ ಮಂಜು ಸೇರಿದಂತೆ ಎಲ್ಲಾ ಪುರಪಿತೃಗಳು ಮುಂದಾಗೋಣ ಎಂದರು. ಇದಕ್ಕೆ ಎಲ್ಲಾ ಸದಸ್ಯರು ಪಕ್ಷಾತೀತವಾಗಿ ಸಮ್ಮತಿಸಿದರು.

ಆ ಹಣ ಇದ್ದಿದ್ದರೆ ರಸ್ತೆಗಳ ಗುಂಡಿ ಮುಚ್ಚಿಸುವ ಜೊತೆಗೆ ಹೊಸ ರಸ್ತೆ ನಿರ್ಮಿಸಬಹುದಿತ್ತು. ಪ್ರಸ್ತುತ ಹಣವಿಲ್ಲದೇ ನಗರಸಭೆ ರಸ್ತೆ ಗುಂಡಿ ಮುಚ್ಚಿಸಲು ನಗರಸಭೆ ನಿಧಿ ಬಳಸುವಂತಾಗಿದೆ. ರಸ್ತೆಗಳು ಹಾಳಾಗಿ ಹಲವು ದಿನ ಕಳೆದರೂ ಇದೀಗ ರಸ್ತೆ ರಿಪೇರಿ ಕಾಮಗಾರಿ ಆರಂಭಿಸಲು ಮುಂದಾಗಿರುವ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಆಯುಕ್ತ ಮಂಜುನಾಥ್, ಕ್ರಿಯಾ ಯೋಜನೆ ಆಗಿರಲಿಲ್ಲ. ಸಭೆ ನಡೆಸಿ, ಈ ಬಗ್ಗೆ ಅನುಮೋದನೆ ಪಡೆಯಲು ಜಿಲ್ಲಾ ಉಸ್ತುವಾರಿ ಸಚಿವರು ಸಭೆ ನಡೆಸಲು ದಿನಾಂಕ ನಿಗದಿ ಮಾಡಿರಲಿಲ್ಲ ಎಂದು ಉತ್ತರ ನೀಡಲು ಮುಂದಾದಾಗ, ಮಧ್ಯೆ ಪ್ರವೇಶಿಸಿದ ಶಾಸಕ ಮಧು ಮಾದೇಗೌಡ, ಈಗ ಹಳೆಯ ಸಮಸ್ಯೆ ಕೆದಕದೇ ಸಮರ್ಪಕ ಟೆಂಡರ್‌ದಾರರಿಗೆ ಕೆಲಸ ಕೊಟ್ಟು ಶೀಘ್ರವೇ ರಸ್ತೆ ಕಾಮಗಾರಿ ಮುಕ್ತಾಯಗೊಳ್ಳುವಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ಇನ್ನು ಮುಂದೆ ಸರ್ಕಾರ ಅಥವಾ ಯಾವುದೇ ಇಲಾಖೆ ಸಚಿವರಿಂದಾಗಲೀ ಕೆಲಸವಾಗಬೇಕೆಂದರೆ ನನ್ನ ಅಥವಾ ಮಧು ಅವರನ್ನು ಸಂಪರ್ಕಿಸಿ ಎಂದು ನಗರಸಭೆ ಅಧಿಕಾರಿಗಳಿಗೆ ಸೂಚಿಸಿದ ಶಾಸಕ ದಿನೇಶ್, ನಾವು ಬೆಂಗಳೂರಿನಲ್ಲಿ ಸಚಿವರು ಅಥವಾ ಅಧಿಕಾರಿಗಳ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸಲು ಮುಂದಾಗುತ್ತೇವೆ ಎಂದರು.

ಸಭೆಯಲ್ಲಿ ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು, ಉಪಾಧ್ಯಕ್ಷೆ ಇಶ್ರತ್ ಫಾತೀಮಾ, ಸದಸ್ಯರಾದ ನಹೀಂ, ಪೂರ್ಣಿಮಾ, ರವಿ, ಶ್ರೀಧರ್, ಜಾಕೀರ್ ಪಾಷಾ, ಮಾಜಿ ನಗರಸಭೆ ಸದಸ್ಯ ಬಿ.ಪಿ.ಪ್ರಕಾಶ್, ಕಾಂಗ್ರೆಸ್ ಮುಖಂಡರಾದ ಡಾ.ಕೃಷ್ಣ, ರುದ್ರಪ್ಪ ಇತರರಿದ್ದರು.

ಚಾಮನಹಳ್ಳಿಯಲ್ಲಿ ಜನಸಂಪರ್ಕ ಸಭೆ



ಮದ್ದೂರು, ನ.21– ಕ್ಷೇತ್ರದ ಅಭಿವೃದ್ಧಿ ವಿಷಯದಲ್ಲಿ ಆತ್ಮ, ಪರಮಾತ್ಮ ಮೆಚ್ಚುವ ಹಾಗೆ ಕೆಲಸ ಮಾಡಿದ್ದೇನೆ ಎಂದು ಶಾಸಕ ಡಿ.ಸಿ.ತಮ್ಮಣ್ಣ ತಿಳಿಸಿದರು.

ತಾಲೂಕಿನ ಚಾಮನಹಳ್ಳಿಯಲ್ಲಿ ನಡೆದ ಜನಸಂಪರ್ಕ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ರಸ್ತೆ ಅಭಿವೃದ್ಧಿ, ಕುಡಿಯುವ ನೀರು, ಶಾಲಾ ಕಾಲೇಜು ನಿರ್ಮಾಣ ಸೇರಿದಂತೆ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದರು.

ಜೆಡಿಎಸ್ ವರಿಷ್ಠ ದೇವೇಗೌಡರು ಮುಖ್ಯಮಂತ್ರಿ ಹಾಗೂ ಪ್ರಧಾನಿಯಾಗಿದ್ದಾಗ ರಾಜ್ಯದ ನೀರಾವರಿ ಯೋಜನೆ ಹಾಗೂ ರೈತರ ಅಭಿವೃದ್ಧಿಗೆ ಕೊಟ್ಟಿರುವ ಕೊಡುಗೆಯನ್ನು ರಾಜ್ಯದ ಜನ ಮರೆಯಲು ಸಾಧ್ಯವಿಲ್ಲ. ಮಾಜಿ ಸಿಎಂ ಕುಮಾರಸ್ವಾಮಿ ಅವರಿಗೆ ರೈತರ ಸಾವಿರಾರು ಕೋಟಿ ಸಾಲ ಮನ್ನಾ ಮಾಡಿದ ಕೀರ್ತಿ ಸಲ್ಲುತ್ತದೆ. ಪಂಚರತ್ನ ಯೋಜನೆಗಳ ಮೂಲಕ ರೈತರು, ಜನಸಾಮಾನ್ಯರು ಸೇರಿದಂತೆ ಮಹಿಳೆಯರ ಅಭಿವೃದ್ಧಿಗೆ, ಶಿಕ್ಷಣಕ್ಕೆ ಪ್ರಾಧಾನ್ಯತೆ ನೀಡುವ ಉದ್ದೇಶವನ್ನು ಕುಮಾರಸ್ವಾಮಿ ಹೊಂದಿದ್ದಾರೆ. ಹೀಗಾಗಿ ಮತ್ತೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಜನತೆ ಜೆಡಿಎಸ್ ಬೆಂಬಲಿಸಬೇಕು ಎಂದರು.

ಸಭೆಯಲ್ಲಿ ಗ್ರಾಪಂ ಅಧ್ಯಕ್ಷೆ ಸೌಮ್ಯ, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಸಿ.ಕೆ.ಸ್ವಾಮಿಗೌಡ, ಬಿಳಿಯಪ್ಪ, ತಾಲೂಕು ಜೆಡಿಎಸ್ ಅಧ್ಯಕ್ಷ ಚಿಕ್ಕತಿಮ್ಮೆಗೌಡ, ಉಪಾಧ್ಯಕ್ಷ ವೆಂಕಟೇಶ್, ಮುಖಂಡರಾದ ರಾಕೇಶ್, ಮಲ್ಲರಾಜು, ಮಂಜು, ಮಾಜಿ ಪುರಸಭಾಧ್ಯಕ್ಷ ಪ್ರವೀಣ್, ಮಾಜಿ ಗ್ರಾಪಂ ಅಧ್ಯಕ್ಷ ಸಂದೀಪ್, ಕೃಷ್ಣ ಇದ್ದರು.

ರಾಜ್ಯಮಟ್ಟದ ಚುಂಚಾದ್ರಿ ಕಲೋತ್ಸವಕ್ಕೆ ಚಾಲನೆ



ನಾಗಮಂಗಲ, ನ.21– ತಾಲೂಕಿನ ಶ್ರೀಆದಿಚುಂಚನಗಿರಿಯಲ್ಲಿ ಆಯೋಜಿಸಿರುವ 2 ದಿನಗಳ ರಾಜ್ಯ ಮಟ್ಟದ ಚುಂಚಾದ್ರಿ ಕಲೋತ್ಸವ ರಜತ ಮಹೋತ್ಸವಕ್ಕೆ ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಕಲ್ಪವೃಕ್ಷ ಫಲ ಪಡೆಯುವವರು ಮರದ ಕೆಳಗಿರಬೇಕು. ಹಾಗೆಯೇ ಗುರು ಕರುಣೆ ಸಿದ್ಧಿಸಲು ಪ್ರಣಿಪಾತ ಸೇವೆಯಿಂದ ಮಾತ್ರ ಸಾಧ್ಯ ಎಂದರು.

ಉಪಯೋಗಿಸದ ಯಾವುದೂ ಬೆಳೆಯುವುದಿಲ್ಲ. ಜ್ಞಾನವು ಹಾಗೆಯೇ. ಬೇರೆಯದೇ ಆದ ನೆನಪು, ಕಾವ್ಯ, ವಿಜ್ಞಾನ ತರ್ಕ ಎಲ್ಲವನ್ನೂ ಧ್ಯಾನಿಸಿ ಪಡೆಯುವುದು ನಿಮ್ಮೆಲ್ಲರ ಮೊದಲ ಕರ್ತವ್ಯವಾಗಲಿ ಎಂದರು.

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಂ.ಎ.ಶೇಖರ್ ಮಾತನಾಡಿ, ಸಂಗೀತ, ನೃತ್ಯಗಳು ಆದಿ ಮಾನವರ ಕಾಲದಿಂದಲೂ ಇದೆ. ಆದರೆ ಮಾನವ ಅದಕ್ಕೆ ಲಲಿತ ಕಲೆಯಾಗಿ ಸ್ಥಾಪಿಸಿ ವೈಜ್ಞಾನಿಕ ಸ್ಪರ್ಶ ನೀಡಿದ್ದಾನೆ ಎಂದು ಬಣ್ಣಿಸಿದರು. ಹಿರಿತೆರೆ ಮತ್ತು ಕಿರುತೆರೆ ಕಲಾವಿದೆ ಕು.ರೂಪಿಕಾ ಮಾತನಾಡಿ, ಮನುಷ್ಯನ ಬದುಕಿಗೆ ಕಲೆ ಬಹಳ ಮುಖ್ಯ. ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ನಿಮಗೆ ಪಠ್ಯದ ಜೊತೆಗೆ ಪಠ್ಯೇತರ ವಿಭಾಗದಲ್ಲೂ ಮಾರ್ಗದರ್ಶನ ನೀಡಿ ಬೆಳೆಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬಳ್ಳಾರಿ ಜಿಪಂ ಸಿಇಓ ಡಾ.ನಂದಿನಿ ಮಾತನಾಡಿ, ಅವಕಾಶಗಳು ಹಲವು ರೀತಿ ಬರುತ್ತವೆ. ಅದನ್ನು ಸಮರ್ಪಕವಾಗಿ ಬಳಸಿಕೊಂಡು ಶ್ರದ್ಧೆಯಿಂದ ಶ್ರಮ ವಹಿಸಿದರೆ ಮಾತ್ರ ಶ್ರೇಷ್ಠ ಗುರಿ ಸಾಧನೆ ಮಾಡುವುದರಲ್ಲಿ ಸಂಶಯವಿಲ್ಲ ಎಂದರು.

ಮಠದ ಪ್ರಧಾನ ಕಾರ್ಯದರ್ಶಿ ಶ್ರೀಪ್ರಸನ್ನನಾಥ ಸ್ವಾಮೀಜಿ, ತಹಸೀಲ್ದಾರ್ ನಂದೀಶ್ ಮಾತನಾಡಿದರು. ಕಲೋತ್ಸವದಲ್ಲಿ 2600ಕ್ಕೂ ಹೆಚ್ಚು ವಿದ್ಯಾರ್ಥಿಗಳು, 30 ಮಂದಿ ತೀರ್ಪುಗಾರರು ಭಾಗವಹಿಸುತ್ತಿರುವುದು ವಿಶೇಷ. ಕಾರ್ಯಕ್ರಮದಲ್ಲಿ ಶಿಕ್ಷಣ ಟ್ರಸ್ಟ್ ಆಡಳಿತಾಧಿಕಾರಿ ಡಾ.ಎಂ.ಟಿ.ಶಿವರಾಮು, ಮುಖ್ಯೋಪಾಧ್ಯಾಯ ಎಂ.ಎನ್.ಮಂಜುನಾಥ್ ಇತರರಿದ್ದರು.

ನ.24 ರಂದು ಬೃಹತ್ ಉದ್ಯೋಗ ಮೇಳ

ಮಂಡ್ಯ, ನ.21– ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮಳವಳ್ಳಿ ಶಾಂತಿ ಪದವಿ ಕಾಲೇಜಿನ ಆವರಣದಲ್ಲಿ ನವೆಂಬರ್ 24 ರಂದು ಬೃಹತ್ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

20ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು 500ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಲಭ್ಯವಿದ್ದು ಆಸಕ್ತಿಯುಳ್ಳ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ, ಜೆಓಸಿ, ನರ್ಸಿಂಗ್ ಯಾವುದೇ ಪದವಿ, ಡಿಪ್ಲೊಮೊ, ಬಿ.ಇ, ವಿದ್ಯಾರ್ಹತೆ ಹೊಂದಿರುವ ಕನಿಷ್ಠ 18 ವರ್ಷದಿಂದ 35 ವರ್ಷದೊಳಗಿನ ಅಭ್ಯರ್ಥಿಗಳು ಸ್ವ ವಿವರದೊಂದಿಗೆ ಹಾಗೂ ಎಲ್ಲಾ ಮೂಲ ದಾಖಲಾತಿ ಪ್ರತಿಗಳೊಂದಿಗೆ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ.

ಮಾಹಿತಿಗಾಗಿ ಉದ್ಯೋಗಾಧಿಕಾರಿಗಳ ದೂ.ಸಂ.08232–295124 ಅಥವಾ ಮೊ.ನಂ.8618332893 ಸಂಪರ್ಕಿಸಬಹುದೆಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ರೌಡಿಶೀಟರ್ ಹತ್ಯೆ



ಭಾರತೀನಗರ, ನ.21– ರೌಡಿಶೀಟರ್ ಓರ್ವನನ್ನು ಕೊಲೆ ಮಾಡಿರುವ ಘಟನೆ ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದಲ್ಲಿ ಭಾನುವಾರ ಸಂಜೆ ನಡೆದಿದೆ.

ಗ್ರಾಮದ ಅರುಣ್ ಅಲಿ ಯಾಸ್ ಕಪ್ಪ (23) ಹತ್ಯೆಯಾದ ರೌಡಿಶೀಟರ್ ಆಗಿದ್ದು, ಅದೇ ಗ್ರಾಮದ ದೊಡ್ಡಯ್ಯ (25), ದೇವರಾಜು (26) ಹತ್ಯೆ ಆರೋಪಿಗಳಾಗಿದ್ದಾರೆ.

ವಿವರ: ಹಳೇ ದ್ವೇಷದ ಹಿನ್ನೆಲೆಯಲ್ಲಿ ಅರುಣ ಹಾಗೂ ದೊಡ್ಡಯ್ಯ, ದೇವರಾಜು ನಡುವೆ ಭಾನುವಾರ ಸಂಜೆ ಗ್ರಾಮದಲ್ಲಿ ಜಗಳ ನಡೆದು, ಅರುಣನ ಮೇಲೆ ದೇವರಾಜು ಮತ್ತು ದೊಡ್ಡಯ್ಯ ಹಲ್ಲೆ ನಡೆಸಿದ್ದರು. ಹಲ್ಲೆಯಿಂದ ಗಾಯಗೊಂಡಿದ್ದ ಅರುಣ ಕೆ.ಎಂ.ದೊಡ್ಡಿ ಆಸ್ಪತ್ರೆಗೆ ಬೈಕ್‌ನಲ್ಲಿ ಹೋಗುತ್ತಿದ್ದ ವೇಳೆ ಆತನನ್ನು ಹಿಂಬಾಲಿಸಿದ ದೊಡ್ಡಯ್ಯ ಹಾಗೂ ದೇವರಾಜು ಅವರು, ಎತ್ತಿನಗಾಡಿ ಚಕ್ರಕ್ಕೆ ಸಿಕ್ಕಿಸುವ ಕೊಂಡಿಯಿಂದ ಅರುಣನ ಮೇಲೆ ಹಲ್ಲೆ ನಡೆಸಿದರು.

ತೀವ್ರ ಗಾಯಗೊಂಡು ಅಸ್ವಸ್ಥನಾಗಿ ಕುಸಿದುಬಿದ್ದಿದ್ದ ಆತನಿಗೆ ಭಾರತೀನಗರದ ಜಿ.ಮಾದೇಗೌಡ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಆತ ಸೋಮವಾರ ಬೆಳಗ್ಗೆ ಮೃತಪಟ್ಟಿದ್ದಾನೆ. ಈ ಸಂಬಂಧ ಕೆ.ಎಂ. ದೊಡ್ಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ತನಿಖೆ ಕೈಗೊಂಡಿದ್ದಾರೆ.

ಅಂಬೇಡ್ಕರ್ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ

ಯುವ ಜನತೆಗೆ ಮಾಜಿ ಶಾಸಕ ಡಾ.ಎನ್.ಎಲ್.ಭಾರತೀ ಶಂಕರ್ ಕರೆ



ತಿ.ನರಸೀಪುರ, ನ.21– ಯುವ ಜನತೆ ಅಂಬೇಡ್ಕರ್ ಅವರ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಜಾಗೃತಿ ಮೂಡಿಸುವ ಮೂಲಕ ಅಸ್ಪೃಶ್ಯತೆ ಆಚರಣೆ ನಿವಾರಣೆಗೆ ಮುಂದಾಗಬೇಕು ಎಂದು ಮಾಜಿ ಶಾಸಕ ಡಾ.ಎನ್.ಎಲ್.ಭಾರತೀ ಶಂಕರ್ ಕರೆ ನೀಡಿದರು.

ತಾಲೂಕಿನ ಮಾದಾಪುರದಲ್ಲಿ ಸೋಮವಾರ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಮುದಾಯದ ಯುವಕರು ವಿದ್ಯಾವಂತರಾದರೆ ಸಾಲದು, ಸ್ವಾವಲಂಬಿ ಬದುಕಿಗೆ ಯೋಗ್ಯ ಉದ್ಯೋಗ ಆಯ್ಕೆ ಮಾಡಿಕೊಂಡು ಬದುಕನ್ನು ಉತ್ತಮಗೊಳಿಸಿಕೊಳ್ಳಬೇಕು. ಅಂಬೇಡ್ಕರ್ ಚಿಂತನೆಗಳನ್ನು ಸಾಕಾರಗೊಳಿಸಿ ಸಾಮಾಜಿಕ ಅಸಮಾನತೆ ತೊಡೆದು ಹಾಕಬೇಕು ಎಂದರು.

ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳಾಗಿ ಸಂವಿಧಾನದ ಆಶಯಗಳು ಜಾರಿಯಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಸುಧಾರಣೆ ಕಾಣುತ್ತಿದ್ದರೂ ಚಾಮರಾಜನಗರ ಜಿಲ್ಲೆಯ ಹಳ್ಳಿಯೊಂದರಲ್ಲಿ ಕೊಳವೆ ತೊಂಬೆಯಲ್ಲಿ ಮಹಿಳೆಯೊಬ್ಬರು ನೀರು ಕುಡಿದಿದ್ದಕ್ಕೆ ಅಸ್ಪೃಶ್ಯತೆ ಆಚರಿಸಿದ ಘಟನೆ ನಿಜಕ್ಕೂ ಖಂಡನೀಯ. ಕೂಡಲೇ ಎಚ್ಚೆತ್ತುಕೊಂಡ ಅಲ್ಲಿನ ತಾಲೂಕು ಆಡಳಿತ ಅಸ್ಪೃಶ್ಯತೆ ಆಚರಿಸದಂತೆ ತಾಕೀತು ಮಾಡಿದೆ. ಇಂತಹ ಘಟನೆಗಳು ಸಾಮಾಜಿಕ ರೋಗ ಜೀವಂತ ಇರುವುದಕ್ಕೆ ಸಾಕ್ಷಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

> ಹಲವು ವರ್ಷಗಳಿಂದ ಅಂಬೇಡ್ಕರ್ ಸಮುದಾಯ ಭವನ ಪೂರ್ಣಗೊಳ್ಳದೆ ನೆನೆಗುದಿಗೆ ಬಿದ್ದಿದ್ದನ್ನು ಗಮನಿಸಿ, ಗ್ರಾಮಸ್ಥರು ಹಾಗೂ ಮುಖಂಡರ ಒತ್ತಾಯದಂತೆ ಆಡಳಿತ ಸಮಸ್ಯೆ ಸರಿಪಡಿಸಿ, ಮುಂದುವರೆದ ಕಾಮಗಾರಿಗೆ ಅನುದಾನ ಕಲ್ಪಿಸಿ ಕಟ್ಟಡ ಉದ್ಘಾಟಿಸಿದ್ದೇವೆ. ಗ್ರಾಮಸ್ಥರು ಸಮಿತಿ ರಚಿಸಿಕೊಂಡು ಭವನವನ್ನು ಶುಭ ಸಮಾರಂಭಗಳಿಗೆ ಬಳಸಿಕೊಂಡು ಉತ್ತಮವಾಗಿ ನಿರ್ವಹಣೆ ಮಾಡಬೇಕು. -ಎಂ.ಅಶ್ವಿನ್ ಕುಮಾರ್,ಶಾಸಕ.

ನಳಂದ ಬುದ್ಧ ವಿಹಾರದ ಬೋಧಿರತ್ನ ಬಂತೇಜಿ ಆಶೀರ್ವಚನ ನೀಡಿದರು. ಮಾದಾಪುರ ಗ್ರಾಪಂ ಅಧ್ಯಕ್ಷೆ ನಳಿನಿ, ಹೆಮ್ಮಿಗೆ ಗ್ರಾಪಂ ಅಧ್ಯಕ್ಷ ಚಿನ್ನಸ್ವಾಮಿ, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಸಾರ್ವಜನಿಕ ಆಸ್ಪತ್ರೆ ಶಸ್ತ್ರಚಿಕಿತ್ಸಕ ಡಾ.ರೇವಣ್ಣ, ತಹಸೀಲ್ದಾರ್ ಸಿ.ಜೆ.ಗೀತಾ, ಸಮಾಜ ಕಲ್ಯಾಣ ಅಧಿಕಾರಿ ರಾಮೇಗೌಡ, ಜೆ. ಪ್ರದೀಪ್ ಕುಮಾರ್, ಮಾಜಿ ಅಧ್ಯಕ್ಷ ಸುಶೀಲ, ಶಂಭುದೇವನಪುರ ರಮೇಶ್, ಸದಸ್ಯರಾದ ಅಶೋಕ, ತ್ರಿಪುರ, ಮಹದೇವಮ್ಮ, ಸೋಮಣ್ಣ, ಮಾಲತಿ, ಮೂರ್ತಿ, ಸಿದ್ದಯ್ಯ, ವಿಚಾರವಾದಿ ಕೆ.ಎನ್.ಪ್ರಭು ಸ್ವಾಮಿ, ತಾಪಂ ಮಾಜಿ ಸದಸ್ಯ ಎಂ.ಎಸ್. ಬಸವರಾಜು, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಬಸವರಾಜು ಹಾಗೂ ಮಾದಾಪುರ ಗ್ರಾಮಸ್ಥರು ಉಪಸ್ಥಿತರಿದ್ದರು.

ಕೆಂಡಗಣ್ಣಸ್ವಾಮಿ ಗದ್ದಿಗೆ ಪ್ರವಾಸಿ ಕೇಂದ್ರವಾಗಲಿ

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ



ಹೆಚ್.ಡಿ.ಕೋಟೆ, ನ.21– ಧಾರ್ಮಿಕ ಕ್ಷೇತ್ರಗಳಿಗೆ ಹೆಚ್ಚಿನ ಭಕ್ತರು, ಪ್ರವಾಸಿಗರು ಬರುವುದರಿಂದ ನಿರಂತರ ಅನ್ನ ದಾಸೋಹ ನಡೆಯಬೇಕು ಹಾಗೂ ಕೆಂಡಗಣ್ಣಸ್ವಾಮಿ ಗದ್ದಿಗೆ ಪ್ರವಾಸಿ ಕೇಂದ್ರವಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು.

ತಾಲೂಕಿನ ಗದ್ದಿಗೆ ಕೆಂಡಗಣ್ಣಸ್ವಾಮಿ ದೇವಸ್ಥಾನದಲ್ಲಿ ಕಡೆ ಕಾರ್ತಿಕ ಸೋಮವಾರದ ಅಂಗವಾಗಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ, ಅನ್ನದಾಸೋಹಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಚಾಮುಂಡಿಬೆಟ್ಟ, ನಂಜನಗೂಡು ದೇವಸ್ಥಾನ, ಮಲೆ ಮಹದೇಶ್ವರ ಬೆಟ್ಟದಲ್ಲಿ ಬಂದಂತಹ ಭಕ್ತರಿಗೆ ಸರ್ಕಾರ ನಿರಂತರ ದಾಸೋಹ ನಡೆಸಿಕೊಂಡು ಬರುತ್ತಿದೆ. ಅದರಂತೆ ಗದ್ದಿಗೆಯ ಕೆಂಡಗಣ್ಣೇಶ್ವರ ದೇವಸ್ಥಾನ ಕೂಡ ಈ ಭಾಗಕ್ಕೆ ಪ್ರಸಿದ್ಧ ಯಾತ್ರಾಸ್ಥಳವಾಗಿದೆ. ಈ ಭಾಗದ ಜನರ ನಂಬಿಕೆಯ ದೈವವಾಗಿದ್ದು, ಪ್ರತಿವರ್ಷ ಶಿವರಾತ್ರಿ ಮತ್ತು ಕಡೆ ಕಾರ್ತಿಕ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ಸಾವಿರಾರು ಭಕ್ತರು ಬೆಳಗ್ಗೆಯಿಂದ ರಾತ್ರಿವರೆಗೆ ಪೂಜೆ ಸಲ್ಲಿಸುತ್ತಾರೆ. ಇಂದು 25 ಸಾವಿರ ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿದೆ. ನಾಡಿನ ಸಮಸ್ತ ಜನರಿಗೆ ಭಗವಂತ ಒಳ್ಳೆಯದು ಮಾಡಲಿ ಎಂದು ಹಾರೈಸಿದರು. ಈ ವೇಳೆ ಶ್ರೀರಾಂಪುರ ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಬೋಗಾದಿ ರಾಜು, ದಿನೇಶ್ ಗೌಡ, ಅರುಣ್‌ಕುಮಾರ್ ಹಾಜರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಕಂಚಮಳ್ಳಿ ಗೇಟ್ ವನಸಿರಿ ನಾಡಿನ ಪ್ರವೇಶ ದ್ವಾರದಲ್ಲಿ ನಂದಿನಿ ಹಾಲಿನ ಉತ್ಪನ್ನ ಮಾರಾಟ ಕೇಂದ್ರವನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಉದ್ಘಾಟಿಸಿದರು. ಈ ವೇಳೆ ಮೈಮುಲ್ ನಿರ್ದೇಶಕ ಈರೇಗೌಡ, ಉಪಾಧ್ಯಕ್ಷೆ ದಾಕ್ಷಾಯಿಣಿ, ಕಂಚಮಳ್ಳಿ ಗ್ರಾಪಂ ಅಧ್ಯಕ್ಷೆ ರಮ್ಯ, ಗ್ರಾಪಂ ಸದಸ್ಯರು, ತಾಪಂ ಅಧ್ಯಕ್ಷ ಶ್ರೀನಿವಾಸ್, ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಚಂದನ್‌ಗೌಡ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹುಣಸೂರು: 1.64 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ



ಹುಣಸೂರು, ನ.21– ಗ್ರಾಮೀಣ ರಸ್ತೆಗಳು ಅಭಿವೃದ್ಧಿಯಾದರೆ ಮಾತ್ರ ಗ್ರಾಮಗಳ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ಲೋಕೋಪಯೋಗಿ ಇಲಾಖೆಯಿಂದ 1.64 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಗುರುಪುರ–ಕಾಳೇನಹಳ್ಳಿ ಸಂಪರ್ಕ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಭಾಗದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ, ದೀರ್ಘಕಾಲ ಬಾಳಿಕೆ ಬರುವಂತೆ ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಲಾಗಿದೆ. ಚುನಾಯಿತ ಜನಪ್ರತಿನಿಧಿಗಳಿಗೆ ಅಧಿಕಾರ ಶಾಶ್ವತವಲ್ಲ. ತಮ್ಮ ಅಧಿಕಾರಾವಧಿಯಲ್ಲಿ ಶಾಶ್ವತವಾಗಿ ಉಳಿಯುವ ಕೆಲಸ ಮಾಡಿದಾಗ ನಮ್ಮಗಳ ಸೇವೆ ಸಾರ್ಥಕವಾಗುತ್ತದೆ. ಪ್ರತಿ ಗ್ರಾಮಗಳನ್ನು ಪಕ್ಷಾತೀತವಾಗಿ ಅಭಿವೃದ್ಧಿಪಡಿಸಬೇಕು. ಗ್ರಾಮಗಳ ಅಭಿವೃದ್ಧಿಗೆಂದು ಸರ್ಕಾರ ಅಲ್ಪ ಪ್ರಮಾಣದ ಅನುದಾನ ಬಿಡುಗಡೆ ಮಾಡಿದ್ದು, ಆದ್ಯತೆ ಮೇರೆಗೆ ಗ್ರಾಮಗಳ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ ಎಂದರು.

ಸಮಾಜ ಬದಲಾವಣೆಗೆ ರೋಟರಿಯಿಂದ ಹಲವು ಕಾರ್ಯಕ್ರಮ

ರೋಟರಿ ಸಂಸ್ಥೆ 3181ರ ಜಿಲ್ಲಾ ಗವರ್ನರ್ ಪ್ರಕಾಶ್ ಕಾರಂತ್



ಪಿರಿಯಾಪಟ್ಟಣ, ನ.21– ರೋಟರಿ ಸಂಸ್ಥೆ ಹಲವು ಸಾಮಾಜಿಕ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಸಮಾಜದ ಬದಲಾವಣೆಗೆ ಶ್ರಮಿಸುತ್ತಿದೆ ಎಂದು ರೋಟರಿ ಸಂಸ್ಥೆ 3181ರ ಜಿಲ್ಲಾ ಗವರ್ನರ್ ಪ್ರಕಾಶ್ ಕಾರಂತ್ ತಿಳಿಸಿದರು.

ಪಟ್ಟಣದ ರೋಟರಿ ಭವನದಲ್ಲಿ ಸಂಸ್ಥೆ ಕಾರ್ಯ ಚಟುವಟಿಕೆಗಳ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೋಟರಿ ಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಅಧ್ಯಕ್ಷ ಸ್ಥಾನದಿಂದ ಕೊನೆ ಹಂತದ ಸ್ಥಾನದವರೆಗೂ ಪ್ರತಿಯೊಂದು ಹುದ್ದೆ ವರ್ಷಕ್ಕೊಮ್ಮೆ ಬದಲಾವಣೆಯಾಗುತ್ತದೆ. ಅದೇ ರೀತಿ ಸಂಸ್ಥೆ ಗುರಿ ಸಹ ಬದಲಾವಣೆಯಾಗಿ ಪ್ರತಿವರ್ಷ ಆರೋಗ್ಯ, ಶಿಕ್ಷಣ, ಕುಡಿಯುವ ನೀರು ಸೇರಿದಂತೆ ಹಲವು ಸೌಕರ್ಯಗಳ ನಿಗದಿತ ಗುರಿಯೊಂದಿಗೆ ಸಾಮಾಜಿಕ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ಅಭಿವೃದ್ಧಿಗೆ ಸಹಕರಿಸಲಾಗುತ್ತಿದೆ. ವನಸಿರಿ, ಜಲಸಿರಿ ಆರೋಗ್ಯ ಸಿರಿ, ವಿದ್ಯಾಸಿರಿ ಯೋಜನೆಗಳು ಸೇರಿದಂತೆ ರೋಟರಿ ದತ್ತಿ ನಿಧಿ ಯೋಜನೆಯಡಿ ಹಲವು ಕಾರ್ಯಕ್ರಮ ಚಾಲನೆಯಲ್ಲಿವೆ. 117 ವರ್ಷಗಳ ಇತಿಹಾಸವಿರುವ ರೋಟರಿ ಸಂಸ್ಥೆ ಸಮಾಜದಲ್ಲಿ ನೊಂದವರ ಪರ ಕರ್ತವ್ಯ ನಿರ್ವಹಿಸುತ್ತಿದೆ ಎಂದರು.

ಪಿರಿಯಾಪಟ್ಟಣ ರೋಟರಿ ಅಧ್ಯಕ್ಷ ಕೆ.ಎ.ಸತ್ಯನಾರಾಯಣ ಮಾತನಾಡಿ, ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆ ಅಭಿವೃದ್ಧಿಪಡಿಸುವುದು ಹಾಗೂ ಶಿಕ್ಷಣ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಂಪಲಾಪುರ ಗ್ರಾಮದ ಸರ್ಕಾರಿ ಶಾಲೆಯನ್ನು 5 ವರ್ಷಗಳ ಅವಧಿಗೆ ದತ್ತು ಪಡೆಯಲಾಗಿದೆ ಎಂದರು. ಈ ವೇಳೆ ವಲಯ 6ರ ಸಹಾಯಕ ಗವರ್ನರ್ ಅರುಣ್ ನರಗುಂದ್, ಮಾಜಿ ಸಹಾಯಕ ರಾಜ್ಯಪಾಲ ಬಿ.ವಿ.ಜವರೇಗೌಡ. ವಲಯ ಸೇನಾನಿ ಚಂದ್ರು, ಜಿಲ್ಲಾ ಕಾರ್ಯದರ್ಶಿ ನಾರಾಯಣ ಹೆಗಡೆ, ಪಿರಿಯಾಪಟ್ಟಣ ಕಾರ್ಯದರ್ಶಿ ವಿನಯ್ ಶೇಖರ್, ರೋಟರಿಯನ್ ಅಂಬಲಾರೆ ಬಸವೇಗೌಡ, ನಟರಾಜ್, ಶ್ರೀಕಾಂತ್ ಮತ್ತಿತರಿದ್ದರು.

ಇಂದಿನಿಂದ ಬೈಕ್ ರ್‍ಯಾಲಿ

ಹುಣಸೂರು, ನ.21– ತಾಲೂಕಿನ ಕಣಗಾಲು ಗ್ರಾಮದಲ್ಲಿ ನ.22ರಿಂದ ನ.30ರವರೆಗೆ 18ನೇ ವರ್ಷದ ಬೈಕ್ ರ್‍ಯಾಲಿ ಆಯೋಜಿಸಲಾಗಿದೆ. 105 ಬೈಕ್ ಸವಾರರು 50 ಬೈಕ್‌ಗಳಲ್ಲಿ ಕಣಗಾಲಿಂದ ಹೊರಟು ಗುರುವಾಯೂರು, ಏರಿಮಲೆ, ಪಂಪಾ (ಶಬರಿಮಲೆ) ಗೆ ತಲುಪಿ ಅಲ್ಲಿಂದ ತ್ರಿವೇಂಡ್ರಮ್, ಪಂದಳ, ಸುಚಿತ್ರು, ಕನ್ಯಾಕುಮಾರಿ, ತ್ರಿಚಾಂದೂರು, ರಾಮೇಶ್ವರಂ, ಮಧುರೈ, ಪಳನಿ, ಈಶ ಟೆಂಪಲ್, ಮೆಟ್ಟೂರು, ಮಹದೇಶ್ವರಬೆಟ್ಟ, ಹುಣಸೂರು ಮೂಲಕ ವಾಪಸ್ಸಾಗಲಿದ್ದಾರೆ.

ಫಿಫಾ ವಿಶ್ವಕಪ್ ಫುಟ್‌ಬಾಲ್: ಇರಾನ್ ವಿರುದ್ಧ ಇಂಗ್ಲೆಂಡ್‌ಗೆ ಭರ್ಜರಿ ಜಯ



ದೋಹಾ, ನ.21– ಇಲ್ಲಿನ ಖಲೀಫಾ ಇಂಟರ್ ನ್ಯಾಷನಲ್ ಮೈದಾನದಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಆಕ್ರಮಣಕಾರಿ ಆಟವಾಡಿದ ಇಂಗ್ಲೆಂಡ್ 6–2 ಗೋಲುಗಳ ಅಂತರದಿಂದ ಇರಾನ್ ತಂಡವನ್ನು ಮಣಿಸಿತು.

ಬುಕಾಯೊ ಸಾಕಾ 2 ಗೋಲು ಗಳಿಸಿದರೇ, ಜೂಡ್ ಬೆಲಿಂಗಮ್, ರಹೀಮ್ ಸ್ಟರ್ಲಿಂಗ್, ಮಾರ್ಕಸ್ ರಶ್‌ಫೋರ್ಡ್ ಮತ್ತು ಜಾಕ್ ಗ್ರೀಲಿಶ್ ಅವರು ತಲಾ ಒಂದೊಂದು ಗೋಲು ತಂದಿತ್ತರು.

ಮೊದಲ ಅರ್ಧ ಗಂಟೆ ಆಟದಲ್ಲಿ ಎರಡೂ ತಂಡಗಳು ಜಿದ್ದಾಜಿದ್ದಿನ ಪೈಪೋಟಿ ನೀಡಿದವು. ಇದರಿಂದ ಆರಂಭದಲ್ಲಿ ಗೋಲು ಬರಲಿಲ್ಲ. 35ನೇ ನಿಮಿಷದಲ್ಲಿ ಇಂಗ್ಲೆಂಡ್ ಗೋಲಿನ ಖಾತೆ ತೆರೆಯಿತು. ಲೂಕ್ ಶಾ ನೀಡಿದ ನಿಖರ ಪಾಸ್‌ನಲ್ಲಿ ಚೆಂಡನ್ನು ಹೆಡ್ ಮಾಡಿದ ಬೆಲಿಂಗಮ್ ಗುರಿ ಸೇರಿಸಿದರು. ಮೊದಲ ಗೋಲು ಬಿದ್ದದ್ದೇ ತಡ, ಆಟದ ಚಿತ್ರಣವೇ ಬದಲಾಯಿತು. ಅದುವರೆಗೂ ನಿಧಾನಗತಿಯ ಆಟವಾಡುತ್ತಿದ್ದ ಇಂಗ್ಲೆಂಡ್ ಆಟಗಾರರು ಎದುರಾಳಿ ತಂಡದ ಗೋಲುಪೆಟ್ಟಿಗೆ ಗುರಿಯಾಗಿಸಿ ಮೇಲಿಂದ ಮೇಲೆ ದಾಳಿ ನಡೆಸಿದರು.

8 ನಿಮಿಷಗಳ ಬಳಿಕ ಇಂಗ್ಲೆಂಡ್ ಮುನ್ನಡೆ ಹೆಚ್ಚಿಸಿತು. ಹ್ಯಾರಿ ಮಗುಯೆರ್ ಅವರು ಹೆಡರ್ ಮೂಲಕ ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ಪಡೆದುಕೊಂಡ ಬುಕಾಯೊ ಸಾಕಾ ಗುರಿ ಸೇರಿಸಿದರು. ವಿರಾಮಕ್ಕೆ ತೆರಳಲು ಕೆಲವೇ ನಿಮಿಷಗಳಿದ್ದಾಗ ಸ್ಟರ್ಲಿಂಗ್ (45+1) ತಮ್ಮ ತಂಡದ ಮುನ್ನಡೆಯನ್ನು 3–0ಗೆ ಹೆಚ್ಚಿಸಿದರು. ನಾಯಕ ಹ್ಯಾರಿ ಕೇನ್ ನೀಡಿದ ಪಾಸ್‌ನಲ್ಲಿ ಚೆಂಡನ್ನು ಗುರಿ ಸೇರಿಸುವಲ್ಲಿ ಅವರು ಯಾವುದೇ ತಪ್ಪು ಮಾಡಲಿಲ್ಲ.

ಎರಡನೇ ಅವಧಿಯಲ್ಲೂ ಇಂಗ್ಲೆಂಡ್‌ನ ಪ್ರಾಬಲ್ಯ ಮುಂದುವರಿಯಿತು. 62ನೇ ನಿಮಿಷದಲ್ಲಿ ಸಾಕಾ ತಮ್ಮ 2ನೇ ಗೋಲು ಗಳಿಸಿದರು. ಇರಾನ್‌ನ ಡಿಫೆಂಡರ್‌ಗಳನ್ನು ಚಾಣಾಕ್ಷತನದಿಂದ ತಪ್ಪಿಸುವಲ್ಲಿ ಯಶಸ್ವಿಯಾಗಿ ಮುನ್ನಡೆಯನ್ನು 4–0ಗೆ ಹೆಚ್ಚಿಸಿದರು.

ಇದಾದ 3 ನಿಮಿಷಗಳ ಬಳಿಕ ಮೆಹ್ದಿ ತರೆಮಿ ಅವರು ಗೋಲು ಗಳಿಸಿ ಇರಾನ್ ಹಿನ್ನಡೆಯನ್ನು 1–4ಕ್ಕೆ ತಗ್ಗಿಸಿದರು. ಆದರೆ ರಶ್‌ಫೋರ್ಡ್ (71ನೇ ನಿ.) ಹಾಗೂ ಗ್ರೀಲಿಶ್ (90ನೇ ನಿ.) ಅವರು ಗೋಲು ಗಳಿಸಿ ಇಂಗ್ಲೆಂಡ್‌ನ ಗೆಲುವಿನ ಅಂತರ ಹಿಗ್ಗಿಸಿದರು. ಪಂದ್ಯ ಕೊನೆಗೊಳ್ಳಲು ಕೆಲವು ಸೆಕೆಂಡುಗಳು ಇರುವಾಗ ತರೆಮಿ ತಮ್ಮ ಹಾಗೂ ತಂಡದ 2ನೇ ಗೋಲು ಗಳಿಸಿದರು.

ಅರಣ್ಯ ಭವನಕ್ಕೆ ರೈತರ ಮುತ್ತಿಗೆ

ವನ್ಯಜೀವಿ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರಕ್ಕೆ ಆಗ್ರಹ

● ಮಡಿಕೇರಿಯ ಕೆ.ಎಸ್. ತಿಮ್ಮಯ್ಯ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಆಕ್ರೋಶ



ಮಡಿಕೇರಿ,ನ.21– ವನ್ಯಜೀವಿಗಳು ಮತ್ತು ಮಾನವನ ನಡುವಿನ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕೊಡಗು ಜಿಲ್ಲಾ ಘಟಕದ ನೇತೃತ್ವದಲ್ಲಿ ನಗರದ ಅರಣ್ಯ ಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಯಿತು.

ಅರಣ್ಯ ಭವನ ಚಲೋ ಪ್ರತಿಭಟನೆ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗೆ ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತದ ಬಳಿ ನೂರಾರು ಸಂಖ್ಯೆಯಲ್ಲಿ ಸಮಾವೇಶಗೊಂಡ ರೈತ ಸಂಘದ ಪ್ರಮುಖರು, ಕಾರ್ಯಕರ್ತರು, ಬೆಳೆಗಾರರು, ಕಾರ್ಮಿಕರು, ಆದಿವಾಸಿಗಳು 'ಮಾನವ ಸರಪಳಿ' ರಚಿಸಿ ತಮ್ಮ ಹಕ್ಕೊತ್ತಾಯಗಳ ಈಡೇರಿಕೆಗೆ ಆಗ್ರಹಿಸಿದರು.

ಕಳೆದೆರಡು ದಶಕಗಳಿಂದ ನಡೆಯುತ್ತಿರುವ ಮಾನವ–ವನ್ಯ ಜೀವಿಗಳ ಸಂಘರ್ಷಕ್ಕೆ ಶಾಶ್ವತ ಪರಿಹಾರ ದೊರಕಿಸಿ ಕೊಡದ ಆಡಳಿತ ವ್ಯವಸ್ಥೆ, ಜನಪ್ರತಿನಿಧಿಗಳು ಮತ್ತು ಅಧಿಕಾರಿ ವರ್ಗದ ವಿರುದ್ಧ ಪ್ರತಿಭಟನಾಕಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಹೋರಾಟದ ಸ್ವರೂಪ ಬದಲು: ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಕೊಡಗು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ, ಕಾಡಾನೆ ಮತ್ತು ವನ್ಯಜೀವಿಗಳ ಹಾವಳಿಯಿಂದ ಜಿಲ್ಲೆಯಲ್ಲಿ ಸಾಕಷ್ಟು ಸಾವು ನೋವುಗಳು ಸಂಭವಿಸಿವೆ. ಹೀಗಿದ್ದೂ ಜನಪ್ರತಿನಿಧಿಗಳು, ಸರ್ಕಾರ ಜಾಣ ಕಿವುಡನ್ನು ಪ್ರದರ್ಶಿಸುತ್ತಾ ಬಂದಿದೆ. ಕಳೆದ ಎರಡೂವರೆ ದಶಕಗಳಿಂದ ಈ ಕ್ಷೇತ್ರದಿಂದ ಆಯ್ಕೆಯಾಗಿ ಬರುತ್ತಿರುವ ಜನಪ್ರತಿನಿಧಿಗಳು ಜನರ ಮೂಲಭೂತ ಸಮಸ್ಯೆಗಳ ಬಗೆಹರಿಕೆಗೆ ಮುಂದಾಗುತ್ತಿಲ್ಲ. ಪರಿಸ್ಥಿತಿ ಇದೇ ರೀತಿ ಮುಂದುವರೆದಲ್ಲಿ ನಮ್ಮ ಹೋರಾಟದ ಸ್ವರೂಪವೇ ಬದಲಾಗಲಿದೆ. ಅದಕ್ಕೂ ಮುನ್ನ ಎಚ್ಚೆತ್ತುಕೊಳ್ಳುವಂತೆ ಹೇಳಿದರು.

ವನ್ಯಜೀವಿ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ನೀಡಬೇಕಾದ ಅರಣ್ಯ ಇಲಾಖಾ ಅಧಿಕಾರಿಗಳು, ಸಮಸ್ಯೆ ಬಗೆಹರಿಕೆಗೆ ಇಂದು ಪ್ರಯೋಗಗಳನ್ನಷ್ಟೆ ಮಾಡುತ್ತಿದ್ದಾರೆ. ರೈಲ್ವೆ ಹಳಿಯ ಬೇಲಿ ನಿರ್ಮಾಣ ಮಾಡಿ ಅದು ಪ್ರಯೋಜನಕಾರಿಯಾಗದನ್ನು ಮನಗಂಡು ಇದೀಗ ಇದರೊಂದಿಗೆ ರೋಪ್ ಸೋಲಾರ್ ಅಳವಡಿಕೆಗೆ ಮುಂದಾಗಿದ್ದಾರೆ. ಇದು ಪ್ರಯೋಗ ನಡೆಸುವ ಸಮಯವಲ್ಲ. ಶಾಶ್ವತ ಪರಿಹಾರ ನೀಡುವ ಮಹತ್ತರ ಸಮಯವೆಂದು ಸ್ಪಷ್ಟಪಡಿಸಿದರು.

ಕಾರ್ಮಿಕ ಸಂಘಟನೆ ಸಿಐಟಿಯು ಪ್ರಮುಖರಾದ ಪಿ.ಆರ್.ಭರತ್ ಮಾತನಾಡಿ, ಜಿಲ್ಲೆಯಲ್ಲಿ 125ಕ್ಕೂ ಹೆಚ್ಚು ಮಂದಿ ಕಾಡಾನೆ ಮತ್ತು ವನ್ಯಜೀವಿಗಳ ದಾಳಿಗೆ ಜೀವ ಕಳೆದುಕೊಂಡಿದ್ದಾರೆ. ಹೀಗಿದ್ದರೂ ಆಡಳಿತದಲ್ಲಿರುವವರಿಗೆ ಜನರ ಸಂಕಷ್ಟದ ಅರಿವಾಗಿಲ್ಲ. ಪ್ರಸ್ತುತ ಒಂದೆಡೆ ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರಕುತ್ತಿಲ್ಲ, ಮತ್ತೊಂದೆಡೆ ಬೆಳೆದ ಬೆಳೆ ವನ್ಯಜೀವಿಗಳ ಉಪಟಳದಿಂದ ಕೈ ತಲುಪದ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರು, ಬೆಳೆಗಾರರು, ಕಾರ್ಮಿಕರ ಸಂಕಷ್ಟ ನಿವಾರಣೆಯ ಈ ಹೋರಾಟ ಕೇವಲ ಆರಂಭ ಮಾತ್ರವೆ ಎಂದು ಎಚ್ಚರಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಪ್ರಮುಖರಾದ ಬಡಗಲಪುರ ನಾಗೇಂದ್ರ ಮಾತನಾಡಿ, ಪ್ರಸ್ತುತ ಸರ್ಕಾರದ ಚಿಂತನೆಯ ಅರಣ್ಯ ಪ್ರವಾಸೋದ್ಯಮವನ್ನು ತಕ್ಷಣವೇ ರದ್ದು ಮಾಡಬೇಕೆಂದು ಆಗ್ರಹಿಸಿದರು.

ಅರಣ್ಯ ಭವನಕ್ಕೆ ಮುತ್ತಿಗೆ: ರೈತ ಸಂಘದ ನೇತೃತ್ವದಲ್ಲಿ ರೈತರು, ಆದಿವಾಸಿಗಳು ಮತ್ತು ಕಾರ್ಮಿಕರನ್ನು ಒಳಗೊಂಡ ಐಕ್ಯತಾ ಹೋರಾಟದ ಭಾಗವಾಗಿ ಆಯೋಜಿತ 'ಅರಣ್ಯ ಭವನ ಚಲೋ' ಪ್ರತಿಭಟನೆಯಲ್ಲಿ ಜಿಲ್ಲೆಯ ವಿವಿಧೆಡೆಗಳಿಂದ ಆಗಮಿಸಿದ್ದ ರೈತ ಸಂಘದ ಕಾರ್ಯಕರ್ತರು, ರೈತರು, ಬೆಳೆಗಾರರು, ಕಾರ್ಮಿಕರು ಮತ್ತು ಆದಿವಾಸಿ ಸಮೂಹ ಅರಣ್ಯ ಭವನಕ್ಕೆ ಮುತ್ತಿಗೆ ಹಾಕಿದರು. ಸಿಸಿಎಫ್ ಡಿ.ಮೂರ್ತಿ, ಡಿಎಫ್‌ಓ ಪೂವಯ್ಯ, ಎಡಿಸಿ ನಂಜುಂಡೇಗೌಡ ಅವರ ಸಮ್ಮುಖದಲ್ಲಿ ವನ್ಯಜೀವಿಗಳ ಹಾವಳಿಯಿಂದ ಉಂಟಾಗಿರುವ ಸಂಕಷ್ಟಗಳನ್ನು ನಿವಾರಿಸಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಈ ಸಂದರ್ಭ ಮಾತನಾಡಿದ ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ, ಇದೊಂದು ರಾಜಕೀಯ ರಹಿತವಾದ ಹೋರಾಟವಾಗಿದ್ದು, ಕಾಡಾನೆ ಹಾವಳಿಗೆ ತುತ್ತಾಗುತ್ತಿರುವ ಮುಕ್ಕೋಡ್ಲು, ಹಚ್ಚಿನಾಡು, ಹಮ್ಮಿಯಾಲ ಈ ಎಲ್ಲಾ ವಿಭಾಗದ ರೈತ ಸಮೂಹವನ್ನು ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆಂದು ತಿಳಿಸಿದರು. ಜಿಲ್ಲೆಯ ಜನತೆಗೆ ಅನ್ಯಾಯವಾದರೆ ಜನಪ್ರತಿನಿಧಿಗಳು ಸ್ಪಂದಿಸಬೇಕೆಂದು ಅವರು ಆಗ್ರಹಿಸಿದರು.

ಕಾನೂನು ಹೋರಾಟ: ಹಿರಿಯ ವಕೀಲರಾದ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಮಾತನಾಡಿ, ಕೊಡಗನ್ನು 4 ಕಡೆಯಿಂದ ಅರಣ್ಯ ಸುತ್ತುವರಿದಿದೆ. ಇದೀಗ ಅರಣ್ಯ ಒತ್ತುವರಿಯ ಕಾರಣವನ್ನು ನೀಡಿ ಇಡೀ ಜಿಲ್ಲೆಯನ್ನೆ ಅರಣ್ಯವನ್ನಾಗಿಸುವ ಪ್ರಯತ್ನ ಅರಣ್ಯ ಇಲಾಖೆಯಿಂದ ನಡೆದಿದೆ. ಜನರ ಸಂಕಷ್ಟದ ಅರಿವಿದ್ದರೂ ಅರಣ್ಯ ಇಲಾಖೆ ಸ್ಪಂದಿಸುವುದಿಲ್ಲ. ಈ ಹಿನ್ನೆಲೆ ನಮ್ಮ ಸಂಕಷ್ಟಗಳ ನಿವಾರಣೆ ಮತ್ತು ಅರಣ್ಯ ಇಲಾಖೆಯ ಆಲೋಚನೆಗಳನ್ನು ಬದಲಿಸಲು ಕಾನೂನಿನಿಂದ ಮಾತ್ರ ಸಾಧ್ಯವೆಂದು ಪ್ರತಿಪಾದಿಸಿದರು.

ಈ ಸಂದರ್ಭ ರೈತ ಸಂಘದ ಪ್ರಮುಖರಾದ ಹೊಸಕೋಟೆ ಬಸವರಾಜು, ಸುಜಯ್ ಬೋಪಯ್ಯ, ಪುಚ್ಚಿಮಾಡ ಸುಭಾಷ್, ಕಾರ್ಮಿಕ ಮುಖಂಡರಾದ ಎನ್.ಡಿ.ಕುಟ್ಟಪ್ಪ, ಹೆಚ್.ಡಿ. ರಮೇಶ್, ಪಿ.ಆರ್.ಭರತ್, ಎಐಟಿಯುಸಿ ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಎಂ. ಸೋಮಪ್ಪ, ರೈತ ಸಂಘದ ಕಾನೂನು ಸಲಹೆಗಾರ ಹೇಮಚಂದ್ರ, ಬೆಳೆಗಾರ ನಂದಾ ಸುಬ್ಬಯ್ಯ ಸೇರಿದಂತೆ ಮತ್ತಿತರರು ಹಾಜರಿದ್ದರು.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ಮಡಿಕೇರಿಯಲ್ಲಿ ಬಾಂಬ್ ನಿಷ್ಕ್ರಿಯ ದಳದಿಂದ ತಪಾಸಣೆ

ಜಿಲ್ಲೆಯಲ್ಲಿ ಭದ್ರತೆಯನ್ನು ಹೆಚ್ಚುಗೊಳಿಸಿದ ಪೊಲೀಸರು

ಮಡಿಕೇರಿ,ನ.21– ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಸೋಮವಾರ ಭಾರೀ ತಪಾಸಣೆ ನಡೆಸಲಾಯಿತು. ರಾಜ್ಯ ಗುಪ್ತಚರ ಇಲಾಖೆ ನಿರ್ದೇಶನದಂತೆ ಕೊಡಗು ಜಿಲ್ಲಾ ಬಾಂಬ್ ನಿಷ್ಕ್ರಿಯ ದಳ ಜನನಿಬಿಡ ಪ್ರದೇಶಗಳಲ್ಲಿ ಶೋಧ ಕಾರ್ಯ ನಡೆಸಿತು.



ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ಬಸ್ ನಿಲ್ದಾಣ, ಮಾರುಕಟ್ಟೆ ಆವರಣ, ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಪ್ರವಾಸಿ ತಾಣಗಳಲ್ಲಿ ಅನುಮಾನಾಸ್ಪದ ವಸ್ತುಗಳ ಕುರಿತು ಶೋಧ ಕಾರ್ಯ ನಡೆಸಿತು. ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಶಂಕಿತ ಆರೋಪಿ ಮೈಸೂರು ಮೂಲಕ ಮಡಿಕೇರಿ ಮಾರ್ಗವಾಗಿ ಮಂಗಳೂರಿಗೆ ಸಂಚರಿಸಿರುವ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯಲ್ಲೂ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಜಿಲ್ಲೆಯ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಸಿ.ಸಿ. ಕ್ಯಾಮರಾಗಳ ಮೂಲಕ ನಿಗಾ ವಹಿಸಲಾಗಿದೆ. ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಎಸ್‌ಪಿ ಕ್ಯಾಪ್ಟನ್ ಮಲ್ಜೀರ ಅಯ್ಯಪ್ಪ, ಗುಪ್ತಚರ ಇಲಾಖೆ ನಿರ್ದೇಶನದಂತೆ ಬಾಂಬ್ ನಿಷ್ಕ್ರಿಯ ದಳ ಶೋಧ ಕಾರ್ಯ ನಡೆಸಿದೆ. ಇದೊಂದು ನಿರಂತರ ಪ್ರಕ್ರಿಯೆಯಾಗಿದ್ದು, ಮಂಗಳೂರು ಘಟನೆ ಹಾಗೂ ಬಾಂಬ್ ನಿಷ್ಕ್ರಿಯ ದಳದ ಶೋಧ ಕಾರ್ಯ ಕೇವಲ ಕಾಕತಾಳೀಯವಾಗಿದೆ ಎಂದು ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಪೂರ್ವಭಾವಿಯಾಗಿ ಎಲ್ಲಾ ರೀತಿಯ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಭದ್ರತೆಗೆ ಸಂಬಂಧಿಸಿದಂತೆ ಗುಪ್ತಚರ ಇಲಾಖೆಗಳ ಜೊತೆ ನಿರಂತರ ಸಂಪರ್ಕ ಹೊಂದಿಕೊಳ್ಳಲಾಗಿದೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕರಾಟೆಯಲ್ಲಿ ರಿಷಿಕಾಗೆ ದ್ವಿತೀಯ ಸ್ಥಾನ



ಮಡಿಕೇರಿ,ನ.21– ಮೈಸೂರಿನಲ್ಲಿ ನಡೆದ ರಾಷ್ಟ್ರ ಮಟ್ಟದ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಮಡಿಕೇರಿಯ ವಿಂಗ್ಸ್ ಆಫ್ ಪ್ಯಾಶನ್ ನೃತ್ಯ ಸಂಸ್ಥೆಯ ವಿದ್ಯಾರ್ಥಿನಿ ರಿಷಿಕಾ ಎಂ.ಎನ್. ದ್ವಿತೀಯ ಸ್ಥಾನ ಪಡೆದಿದ್ದಾರೆ. ಈಕೆ ನಗರದ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯ 8ನೇ ತರಗತಿ ವಿದ್ಯಾರ್ಥಿನಿಯಾಗಿದ್ದಾಳೆ.

ಗಾರೆ ಕೆಲಸಗಾರರಿಗೆ ಟೂಲ್ಸ್ ಕಿಟ್ ವಿತರಣೆ

ಗುರುತಿನ ಚೀಟಿಯೊಂದಿಗೆ ಸರ್ಕಾರದ ಸವಲತ್ತು ಪಡೆಯಿರಿ

ವಿರಾಜಪೇಟೆ, ನ.21– ಕಟ್ಟಡ ಕಾರ್ಮಿಕರ ಸಂಘದಿಂದ ಗುರುತಿನ ಚೀಟಿ ಪಡೆದ ಫಲಾನುಭವಿಗಳು ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದೆ ಬರಬೇಕು ಎಂದು ವಿರಾಜಪೇಟೆ ಹಿರಿಯ ಕಾರ್ಮಿಕ ನಿರೀಕ್ಷಕ ಎಂ.ಸಿ.ಮಾದಪ್ಪ ಕರೆ ನೀಡಿದರು.



ವಿರಾಜಪೇಟೆ ನಗರದಲ್ಲಿರುವ ಕಾರ್ಮಿಕ ನಿರೀಕ್ಷಕರ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ತಾಲೂಕಿನ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ಮುಖ್ಯವಾಗಿ 'ಗಾರೆ ಕೆಲಸದ ಕಾರ್ಮಿಕರಿಗೆ ಟೂಲ್ಸ್ ಕಿಟ್ ವಿತರಣೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಟ್ಟಡ ಕಾರ್ಮಿಕರಿಗಾಗಿ ಸರಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಬಡ ಕುಟುಂಬದ ಕಾರ್ಮಿಕರು ಸಂಘದ ಮೂಲಕ ಗುರುತಿನ ಚೀಟಿ ಪಡೆದುಕೊಂಡು ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವಂತಾಗಬೇಕು ಎಂದರು. ಇನ್ನು ಪೊನ್ನಂಪೇಟೆ ತಾಲೂಕಿನ ಗಾರೆ ಕೆಲಸದ ಕಾರ್ಮಿಕರಿಗೆ ಬುಧವಾರ ಟೂಲ್ಸ್ ಕಿಟ್ ವಿತರಿಸಲಾಗುವುದು ಎಂದರು.

ಕಾರ್ಮಿಕ ನಿರೀಕ್ಷಕರ ಕಚೇರಿಯ ಸಹಾಯಕ ಎಸ್.ನವೀನ್, ಕಟ್ಟಡ ಕಾರ್ಮಿಕ ಜಿಲ್ಲಾ ಸಂಘದ ಸಿ.ಜಿ.ವರ್ಗಿಸ್, ಎಂ.ಸೇದು ಹಾಗೂ ಕಾರ್ಮಿಕ ಸಂಘದ ಸದಸ್ಯರು ಹಾಜರಿದ್ದರು. ಕಾರ್ಯಕ್ರಮದಲ್ಲಿ ಒಟ್ಟು 80 ಮಂದಿ ಗಾರೆ ಕಾರ್ಮಿಕರಿಗೆ ಕಿಟ್ ವಿತರಿಸಲಾಯಿತು.

ಮಾಲ್ದಾರೆಯಲ್ಲಿ ಕಾಂಕ್ರೀಟ್ ರಸ್ತೆ ಉದ್ಘಾಟನೆ

ಸಿದ್ದಾಪುರ, ನ.21– ಕಾವೇರಿ ನೀರಾವರಿ ನಿಗಮದ ಮೂಲಕ ಸುಮಾರು 80 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ಮಾಲ್ದಾರೆ ದೊಡ್ಡ ಹಡ್ಲು ಹಾಡಿಗೆ ತೆರಳುವ ಕಾಂಕ್ರೀಟ್ ರಸ್ತೆಯನ್ನು ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಉದ್ಘಾಟಿಸಿದರು.



ನಂತರ ಮಾತನಾಡಿದ ಅವರು, ಸರ್ಕಾರ ಹಲವಾರು ಯೋಜನೆಗಳನ್ನು ನೀಡುತ್ತಿದ್ದು, ಇದರೊಂದಿಗೆ ಕಾವೇರಿ ನೀರಾವರಿ ನಿಗಮವು ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿ ಅನುದಾನ ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಇದೀಗ ಸುಮಾರು 80 ಲಕ್ಷ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಸಮುದಾಯಗಳ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಾವೇರಿ ನಿಗಮದ ಮೂಲಕ ವಿರಾಜಪೇಟೆ ತಾಲೂಕಿಗೆ ಅಂದಾಜು 12 ಕೋಟಿ ಹಣ ಬಂದಿದ್ದು ಆದಷ್ಟು ಬೇಗನೆ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ಕ್ಷೇತ್ರ ವ್ಯಾಪ್ತಿಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು, ಕೆಲವರು ವಿನಾಕಾರಣ ಆರೋಪಗಳನ್ನು ಮಾಡ್ತಾ ಇದ್ದಾರೆ. ನಾವು ಯಾವುದಕ್ಕೂ ತಲೆಕೆಡಿಸಿಕೊಳ್ಳದೆ ಜನರಿಗೆ ಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆ. ಸರ್ಕಾರದಿಂದ ಹಲವಾರು ಯೋಜನೆಗಳಿದ್ದು ಇದರ ಸದುಪಯೋಗಪಡಿಸಿಕೊಂಡು ಸಮಾಜದ ಮುಖ್ಯ ವಾಹಿನಿಗೆ ಬರಬೇಕೆಂದರು. ಈ ಸಂದರ್ಭ ಮಾಲ್ದಾರೆ ಗ್ರಾಪಂ ಅಧ್ಯಕ್ಷ ಸಮೀರ್, ಪೊನ್ನಂಪೇಟೆ ತಾಲೂಕು ಕಾರ್ಯ ನಿರ್ವಹಣಾಧಿಕಾರಿ ಅಪ್ಪಣ್ಣ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಜೇಶ್, ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ನವೀನ್, ಪಂಚಾಯಿತಿ ಸದಸ್ಯರಾದ ಕುಂಞಣ್ಣ, ಚಂದ್ರ, ಸರಸ್ವತಿ, ಮಾಜಿ ಸದಸ್ಯ ರಘು ಕರುಂಬಯ್ಯ, ಪಂಚಾಯಿತಿ ಕಾರ್ಯದರ್ಶಿ ಲಿಂಗರಾಜು, ಗ್ರಾಮದ ಪ್ರಮುಖರಾದ ರವಿ ಮತ್ತಿತರರಿದ್ದರು.

ಕಾಗಲವಾಡಿಯಲ್ಲಿ ಕಡೇ ಕಾರ್ತಿಕ ಸೋಮವಾರ 101 ಹಾಲರವೆ ಪೂಜಾ ಮಹೋತ್ಸವ



ಚಾಮರಾಜನಗರ, ನ.21 ತಾಲೂಕಿನ ಕಾಗಲವಾಡಿಯಲ್ಲಿ ಶ್ರೀ ಮಲೈ ಮಹದೇಶ್ವರಸ್ವಾಮಿಯ 14ನೇ ವರ್ಷದ ವಾರ್ಷಿಕೋತ್ಸವ ಹಾಗೂ ಕಡೇ ಕಾರ್ತಿಕ ಸೋಮವಾರ ಪ್ರಯುಕ್ತ 101 ಹಾಲರವೆ ಪೂಜಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಸೋಮವಾರ ಬೆಳಗ್ಗೆ 6.30 ಗಂಟೆಗೆ ಶ್ರೀಮಲೈಮಹದೇಶ್ವರ ದೇವಸ್ಥಾನದಿಂದ ಸತ್ತಿಗೆ, ಸೂರಿಪಾನಿ, ದೇವರ ವಿಗ್ರಹಗಳನ್ನು ಗ್ರಾಮದ ಸರ್ಕಾರಿ ಶಾಲಾವರಣಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಶ್ರೀಮಹದೇಶ್ವರ ದೇವರ ವಿಗ್ರಹ, ಸತ್ತಿಗೆ, ಸೂರಿಪಾನಿಗಳನ್ನು ಶುಚಿಗೊಳಿಸಿ, ಪೂಜೆ ಸಲ್ಲಿಸಿ ಅಲ್ಲಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕಂಸಾಳೆ, ಗೊರವರ ಕುಣಿತ, ಡೊಳ್ಳು ಕುಣಿತ, ವಾದ್ಯಗೋಷ್ಠಿಯೊಂದಿಗೆ ಶ್ರೀಮಲೈಮಹದೇಶ್ವರ 101 ಹಾಲರವೆ ಪೂಜಾ ಮಹೋತ್ಸವ ನಡೆಯಿತು.

ನಂತರ ಶ್ರೀಮಲೈಮಹದೇಶ್ವರ ದೇವಸ್ಥಾನದಲ್ಲಿ ರುದ್ರಾಭಿಷೇಕ, ಬಿಲ್ವಾರ್ಚನೆ ಮಹಾಮಂಗಳಾರತಿ ನಡೆಯಿತು. ಮಹಾಪ್ರಸಾದ ವಿತರಿಸಲಾಯಿತು. ಪೂಜಾ ಮಹೋತ್ಸವ ಪ್ರಯುಕ್ತ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ಹಸಿರುತೋರಣಗಳಿಂದ, ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು, ಮೆರವಣಿಗೆ ಹಾದುಹೋಗುವ ರಸ್ತೆಯಲ್ಲಿ ಬಣ್ಣಬಣ್ಣದ ಚಿತ್ತಾರ ಸ್ವಾಗತಿಸಲಾಯಿತು.

ಮೆರವಣಿಗೆಯಲ್ಲಿ ಕಾಗಲವಾಡಿ ಗ್ರಾಮಸ್ಥರು, ಯಜಮಾನರು, ನಾಡು ದೇಶದ ಯಜಮಾನರು, ದೇವರಗುಡ್ಡರು ಮುಖಂಡರು, ಹಾಗೂ ಅಕ್ಕಪಕ್ಕದ ಗ್ರಾಮಸ್ಥರು, ಭಕ್ತರು ಭಾಗವಹಿಸಿದ್ದರು.

ಗುಜರಾತ್ ಉದ್ಯಮಿ ಆರೋಪ ಸುಳ್ಳು

ಇದರ ಹಿಂದೆ ಬಿಜೆಪಿ ಮುಖಂಡರ ಷಡ್ಯಂತರ ಇದೆ : ಪುಟ್ಟರಂಗಶೆಟ್ಟಿ



ಚಾಮರಾಜನಗರ, ನ.21– ಗುಜರಾತ್ ಮೂಲದ ಉದ್ಯಮಿ ಕಮಲೇಶ್ ಕುಮಾರ್ ಗೋಪಾಲ ದಾಸ್ ಪಾಟೀಲ್ ಅವರು ನನ್ನ ಮೇಲೆ ಮಾಡಿರುವ ಆರೋಪ ಸುಳ್ಳು ಇದರ ಹಿಂದೆ ಬಿಜೆಪಿಯ ಕೆಲ ಮುಖಂಡರ ಷಡ್ಯಂತರ ಅಡಗಿದೆ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಆಪಾದಿಸಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣಿಗಾರಿಕೆ ಜಮೀನು ಖರೀದಿ ಒಪ್ಪಂದ ಕರಾರು ಮಾಡಿಕೊಂಡಿದ್ದು, ಕೇವಲ ಮುಂಗಡ ಹಣವನ್ನು ಮಾತ್ರ ನೀಡಲಾಗಿತ್ತು. ಜಮೀನಿನ ಪೂರ್ಣ ಹಣ ನೀಡಿ ಕಾನೂನು ಬದ್ಧವಾಗಿ ಕ್ರಯ ಮಾಡಿಕೊಳ್ಳದೇ ಸದರಿ ಜಮೀನಿನಲ್ಲಿ ಗಣಿಗಾರಿಕೆ ನಡೆಸುವ ಮೂಲಕ 9 ಕೋಟಿ ರೂ. ವಂಚಿಸಿದ್ದಾರೆ ಎಂದು ನನ್ನ ಮೇಲೆ ಗುಜರಾತ್ ಮೂಲದ ಉದ್ಯಮಿ ಕಮಲೇಶ್ ಆರೋಪಿಸಿದ್ದಾರೆ. ಈ ಆರೋಪ 100ಕ್ಕೆ 100 ಸುಳ್ಳು ಎಂದರು.

ಕಮಲೇಶ್ ಕ್ರಯದ ಕರಾರು ಪತ್ರದಂತೆ ನಡೆದುಕೊಳ್ಳದೆ ನನಗೆ ಮೋಸ ಮಾಡುವ ದುರುದ್ದೇಶದಿಂದ ಬಿಜೆಪಿ ಪಕ್ಷದ ಮುಖಂಡರ ಬೆಂಬಲದೊಂದಿಗೆ ನನ್ನ ರಾಜಕೀಯ ಜೀವನಕ್ಕೆ ಹಾಗೂ ನನ್ನ ಹೆಸರಿಗೆ ಕಳಂಕ ತರುವ ಉದ್ದೇಶದಿಂದ ಇಲ್ಲ ಸಲ್ಲದ ಸುಳ್ಳು ಆರೋಪಗಳನ್ನು ಮಾಡಿದ್ದಾರೆ ಎಂದರು.

ಕಮಲೇಶ್ ಅವರ ಮೇಲೆ ಮಾನನಷ್ಟ ಮೊಕದ್ದಮೆ ಹೂಡುವ ಬಗ್ಗೆ ಚಿಂತನೆ ನಡೆಸಿದ್ದೇನೆ ಎಂದ ಪುಟ್ಟರಂಗಶೆಟ್ಟಿ, ನನ್ನ ಗೌರವಕ್ಕೆ ಚ್ಯುತಿ ಬರುವಂತೆ ನನ್ನ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡಿದ್ದಾರೆ ಎಂದರು.

ತೆರಕಣಾಂಬಿ ಗ್ರಾಮದ ಸರ್ವೆ ನಂ.337 ರಲ್ಲಿ 4 ಎಕರೆ ಒಂದೂವರೆ ಗುಂಟೆ ಗಣಿಗಾರಿಕೆ ಜಮೀನು ಜೋಷಿ ಎಂಬುವರ ಮಾಲಿಕತ್ವಕ್ಕೆ ಸೇರಿದ್ದಾಗಿದೆ. ಈ ಜಮೀನನ್ನ ನನಗೆ ಶುದ್ಧ ಕ್ರಯಕ್ಕೆ ಬರೆದುಕೊಟ್ಟಿದ್ದು ನನ್ನ ಹೆಸರಿಗೆ ಖಾತೆ ಆಗಿದೆ. ಅದೇ ಗ್ರಾಮದ ಸರ್ವೆ ನಂ.335/1, 336/4, 336/6, 339/1 ಜಮೀನುಗಳ ಒಟ್ಟು ವಿಸ್ತೀರ್ಣ 4.33 ಎಕರೆ ಗಣಿಗಾರಿಕೆ ಜಮೀನನ್ನ ಜೋಷಿ ಅವರಿಂದ ಕಮಲೇಶ್ ಅವರು ಕ್ರಯಕ್ಕೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದು, ಮುಂಗಡವಾಗಿ 3 ಕೋಟಿ ರೂ. ಪಡೆದಿದ್ದರು. ಕ್ರಯದ ಕರಾರು ಪತ್ರದಂತೆ ಮುಂಗಡ ಹಣವನ್ನು ಪಡೆದ ನಂತರವೂ ಸಹ ನಿಗದಿತ ವಾಯಿದೆ ಒಳಗೆ ಉಳಿದ ಕ್ರಯದ ಮೊಬಲಗನ್ನು ಪಡೆದುಕೊಂಡು ಕ್ರಯಪತ್ರ ನೋಂದಣಿ ಮಾಡಿಕೊಟ್ಟಿಲ್ಲ ಎಂದು ಪುಟ್ಟರಂಗಶೆಟ್ಟಿ ವಿವರಿಸಿದರು.

ನಾನು ಜೋಷಿ ಅವರಿಗೆ ಕೊಟ್ಟಿರುವ ಕ್ರಯದ ಹಣವನ್ನು ಸೇರಿಸಿ, ಕಮಲೇಶ್ ತಮಗೆ ಕೊಡಬೇಕೆಂಬ ದುರುದ್ದೇಶದಿಂದ ನನ್ನ ವಿರುದ್ಧ 9 ಕೋಟಿ ರೂ. ಹಣ ವಂಚನೆ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಆರೋಪ ಸಂಪೂರ್ಣ ಸುಳ್ಳಿನಿಂದ ಕೂಡಿದ್ದು, ಕಮಲೇಶ್ ವಿರುದ್ಧ ನಾನು ಕಾನೂನು ಕ್ರಮವನ್ನು ಜರುಗಿಸುವುದಾಗಿ ಹೇಳಿದರು.

ಕಮಲೇಶ್ ಅವರಿಗೆ ನಾನು ಯಾವುದೇ ರೀತಿಯ ಬೆದರಿಕೆಯನ್ನು ಹಾಕಿಲ್ಲ. ಕಮಲೇಶ್ ಅವರಿಗೆ ಸೇರಿರುವ ಜಮೀನಿನಲ್ಲಿ ನಾನು ಗಣಿಗಾರಿಕೆ ಆರಂಭಿಸಿಲ್ಲ. ನಾನು ಕಳೆದ 42 ವರ್ಷಗಳಿಂದ ಗಣಿಗಾರಿಕೆಯಲ್ಲಿ ತೊಡಗಿದ್ದು, ಕಾನೂನು ಚೌಕಟ್ಟಿನಲ್ಲಿ ಮಾಡುತ್ತಿದ್ದೇನೆ ಎಂದು ಪುಟ್ಟರಂಗಶೆಟ್ಟಿ ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಿದರು.

ಉದ್ಯಮಿಗಳಾದ ಶ್ರೀನಾಥ್, ಶಾಂತ್ ಕುಮಾರ್, ಆಲೂರು ಪ್ರದೀಪ್, ಸೈಯದ್ ಕಾಮಿಲ್ ಖಾನ್, ಪುಟ್ಟರಂಗಶೆಟ್ಟಿ ಅಳಿಯ ರಾಮಚಂದ್ರ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಇಂದು ನಗರದಲ್ಲಿ ವಿಜ್ಞಾನ ವಸ್ತು ಪ್ರದರ್ಶನ

ಚಾಮರಾಜನಗರ, ನ.21– ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವತಿಯಿಂದ 2022–23ನೇ ಸಾಲಿನ ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನವನ್ನು ನ.22ರಂದು ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ವಿಜ್ಞಾನ ವಸ್ತು ಪ್ರದರ್ಶನದ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಗ್ಗೋಠಾರ ಪ್ರಕರಣ: ಎಫ್‌ಐಆರ್ ದಾಖಲು

ಚಾಮರಾಜನಗರ, ನ.21– ತಾಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ಸಾರ್ವಜನಿಕ ನೀರಿನ ಟ್ಯಾಂಕ್‌ನಲ್ಲಿ ದಲಿತ ಮಹಿಳೆ ನೀರು ಕುಡಿದರು ಎಂಬ ಕಾರಣಕ್ಕೆ ಟ್ಯಾಂಕ್‌ನಲ್ಲಿ ಸಂಗ್ರಹವಾಗಿದ್ದ ನೀರನ್ನು ಖಾಲಿ ಮಾಡಿ, ಸಗಣಿ ಮೂಲಕ ಟ್ಯಾಂಕನ್ನು ಶುದ್ಧೀಕರಿಸಿದರು ಎನ್ನಲಾದ ಘಟನೆ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮದ ಪರಿಶಿಷ್ಟ ವರ್ಗದ ಮುಖಂಡ ಗಿರಿಯಪ್ಪ ಅದೇ ಗ್ರಾಮದ ವೀರಶೈವ ಮುಖಂಡ ಮಹದೇವಪ್ಪ ವಿರುದ್ಧ ದೂರು ನೀಡಿದ್ದಾರೆ. ಪ.ಜಾತಿ, ಪ.ಪಂಗಡದ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿದ್ದು, ನಾಪತ್ತೆ ಆಗಿರುವ ಆರೋಪಿಯ ಹುಡುಕಾಟದಲ್ಲಿ ಪೊಲೀಸರು ನಿರತರಾಗಿದ್ದಾರೆ.

ನ.24ರಂದು ಗುಂಡ್ಲುಪೇಟೆ, ಬೇಗೂರು ವ್ಯಾಪ್ತಿಯ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ನ.21– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಗುಂಡ್ಲುಪೇಟೆ ಮತ್ತು ಬೇಗೂರು ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನ.24 ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಗುಂಡ್ಲುಪೇಟೆ, ಭರಗಿ, ಕೋಡಿಹಳ್ಳಿ, ಬೇರಂಬಾಡಿ, ನೇನೆಕಟ್ಟೆ, ವೀರನಪುರ ಮತ್ತು ಬೊಮ್ಮಲಾಪುರ, ಬೆಳವಾಡಿ, ಬಾಚಳ್ಳಿ, ದಾರಿಬೇಗೂರು, ಕೊಡಸೋಗೆ, ಹೆಗ್ಗವಾಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹಂಗಳ, ಶಿವಪುರ, ಕಲ್ಲಿಗೌಡನಹಳ್ಳಿ ಎನ್.ಜೆ.ವೈ, ಎಲಚಟ್ಟಿ, ಗೋಪಾಲ್‌ಪುರ ಎನ್.ಜೆ.ವೈ, ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ ಮತ್ತು ಬರಗಿ, ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಹೆಚ್.ಎಸ್.ಹುಂಡಿ ಎನ್.ಜೆ.ವೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ದೇವಮಣಿ ನಿಧನ



ಚಾಮರಾಜನಗರ, ನ.21– ನಗರಸಭೆ ವ್ಯಾಪ್ತಿಯ ರಾಮಸಮುದ್ರ ನಾಯಕರ ಬೀದಿ ನಿವಾಸಿ ಕಿಟ್ಟನಾಯಕರ ಪತ್ನಿ ದೇವಮಣಿ (52) ಸೋಮವಾರ ಸಂಜೆ ನಿಧನರಾದರು. ಮೃತರು ಪತಿ, ಇಬ್ಬರು ಪುತ್ರಿಯರು ಹಾಗೂ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಮಂಗಳವಾರ(ನ.22) ಬೆಳಗ್ಗೆ 11ಕ್ಕೆ ಸ್ವಗ್ರಾಮ ರಾಮಸಮುದ್ರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ವಚ್ಛತಾ ಓಟ, ಮತದಾರರ ಜಾಗೃತಿ ಕಾರ್ಯಕ್ರಮ



ಚಾಮರಾಜನಗರ, ನ.21–ವಿಶ್ವ ಶೌಚಾಲಯ ದಿನಾಚರಣೆ ಅಂಗವಾಗಿ ಸ್ವಚ್ಛತಾ ಓಟ ಹಾಗೂ ಮತದಾರರ ಪಟ್ಟಿ ಸಂಕ್ಷಿಪ್ತ ಪರಿಷ್ಕರಣೆ ಕುರಿತ ಜಾಗೃತಿ ಕಾರ್ಯಕ್ರಮಗಳಿಗೆ ನಗರದಲ್ಲಿ ಇಂದು ಚಾಲನೆ ದೊರೆಯಿತು.

ನಗರದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ ಸ್ವಚ್ಛತಾ ಓಟ ಹಾಗೂ ಮತದಾರರ ಜಾಗೃತಿ ಕಾರ್ಯಕ್ರಮಗಳಿಗೆ ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಹಾಗೂ ಎಸ್‌ಪಿ ಟಿ.ಪಿ. ಶಿವಕುಮಾರ್ ಅವರು ಹಸಿರು ನಿಶಾನೆ ತೋರಿದರು.

ಗ್ರಾಮೀಣ ಜನರಲ್ಲಿ ನೈರ್ಮಲ್ಯ ಕುರಿತು ಹೆಚ್ಚಿನ ಅರಿವು ಮೂಡಿಸಲು ಸ್ವಚ್ಛತಾ ಓಟ ಹಾಗೂ ಮತದಾರರ ಜಾಗೃತಿ ಕಾರ್ಯಕ್ರಮದಲ್ಲಿ ನಗರದ ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿ ಆರಂಭವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿ ಪ್ರವಾಸಿ ಮಂದಿರದಲ್ಲಿ ಅಂತ್ಯಗೊಂಡಿತು. ಸ್ವಚ್ಛತಾ ಓಟದಲ್ಲಿ ಅಧಿಕಾರಿಗಳು, ವಿವಿಧ ಶಾಲಾ ಮಕ್ಕಳು, ಸ್ಕೌಟ್ಸ್ ಮತ್ತು ಗೈಡ್ ವಿದ್ಯಾರ್ಥಿಗಳು, ಸಾರ್ವಜನಿಕರು, ಇನ್ನಿತರರು ಪಾಲ್ಗೊಂಡಿದ್ದರು.

ಇದೇ ವೇಳೆ ಸ್ವಚ್ಛತಾ ಓಟ ಹಾಗೂ ಮತದಾರರ ಜಾಗೃತಿ ಕಾರ್ಯಕ್ರಮದ ಕುರಿತು ಮಾತನಾಡಿದ ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ ಅವರು, ಜಿಲ್ಲೆಯ ಎಲ್ಲಾ ಗ್ರಾಮೀಣ ಭಾಗದಲ್ಲಿ ಸ್ವಚ್ಛತೆ, ಶೌಚಾಲಯಗಳ ಸದ್ಬಳಕೆ, ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತ ಪರಿಕಲ್ಪನೆಯಡಿ ಸಾಂಕೇತಿಕವಾಗಿ ಇಂದು ಸ್ವಚ್ಛತಾ ಓಟ ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾರರು ಮುಕ್ತ ಮತದಾನ ಮಾಡಲು ಅನುಕೂಲವಾಗುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಮತದಾರರ ಪಟ್ಟಿ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯ ಕುರಿತು ಜಾಗೃತಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಹೆಚ್ಚುವರಿ ಎಸ್‌ಪಿ ಕೆಎಸ್.ಸುಂದರ್‌ರಾಜು, ಮಲ್ಲಿಕಾರ್ಜುನ್, ಜಿಪಂ ಮುಖ್ಯ ಲೆಕ್ಕಾಧಿಕಾರಿ ಗಂಗಾಧರ್, ಸೋಮಣ್ಣೇಗೌಡ, ಇನ್ನಿತರರು ಸ್ವಚ್ಛತಾ ಓಟದಲ್ಲಿ ಪಾಲ್ಗೊಂಡಿದ್ದರು.

ಸೋಲಿಗರ ಸಮಸ್ಯೆ ಪರಿಹಾರಕ್ಕೆ ಪಾದಯಾತ್ರೆ

ಯಳಂದೂರು, ನ.21– ಬುಡಕಟ್ಟು ಜನಾಂಗವಾದ ಸೋಲಿಗರು ಇಂದೂ ಕೂಡ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇವರ ಬಗ್ಗೆ ಸರ್ಕಾರ ವಿಶೇಷ ಕಾಳಜಿ ವಹಿಸುವಂತೆ ಆಗ್ರಹಿಸಿ ಮುಂದಿನ ದಿನಗಳಲ್ಲಿ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಪ್ರವೀಣ್‌ಕುಮಾರ್‌ಶೆಟ್ಟಿ ತಿಳಿಸಿದರು.

ಅವರು ತಾಲೂಕಿನ ಬಿಳಿಗಿರಿರಂಗನಬೆಟ್ಟಕ್ಕೆ ಭೇಟಿ ನೀಡಿ ಸೋಲಿಗರ ಸಮಸ್ಯೆಗಳನ್ನು ಆಲಿಸಿ ಮಾತನಾಡಿದ ಅವರು, ಈ ಸಮುದಾಯ ಅನಾದಿಕಾಲದಿಂದಲೂ ಕಾಡಿನಲ್ಲಿ ವಾಸವಾಗಿದೆ. ಇವರು ಕನ್ನಡ ಭಾಷೆ, ಸಂಸ್ಕೃತಿಯ ನಿಜವಾದ ಆರಾಧಕರು ಹಾಗೂ ಪ್ರತಿಪಾದಕರಾಗಿದ್ದಾರೆ. ಈ ಸಂಸ್ಕೃತಿಯ ನೈಜಭಾಗವಾಗಿದ್ದಾರೆ. ಆದರೆ ಇವರು ಇಂದಿಗೂ ಕೂಡ, ಆರ್ಥಿಕವಾಗಿ, ಶೈಕ್ಷಣಿಕವಾಗಿ ತೀರಾ ಹಿಂದುಳಿದಿದ್ದಾರೆ. ಅಲ್ಲದೆ ಇವರಿಗೆ ಸಿಗುತ್ತಿರುವ ಮೂಲಸೌಲಭ್ಯಗಳೂ ಕೂಡ ಸರಿಯಾಗಿ ಲಭಿಸುತ್ತಿಲ್ಲ. ಈ ಬಗ್ಗೆ ಧ್ವನಿ ಎತ್ತಲು ಹೋರಾಟದ ಅವಶ್ಯಕತೆ ಇದ್ದು ಇದಕ್ಕಾಗಿ ಮುಂದಿನ ದಿನಗಳಲ್ಲಿ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಇದಕ್ಕೂ ಮುಂಚೆ ಪಟ್ಟಣದ ಎಸ್‌ಬಿಐ ಸರ್ಕಲ್‌ನಲ್ಲಿ ಇವರಿಗೆ ತಾಲೂಕು ಘಟಕದ ವತಿಯಿಂದ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಲಾಯಿತು.

ಕರವೇ ರಾಜ್ಯ ಉಪಾಧ್ಯಕ್ಷ ಮಂಜೇಶ್, ಶಿವರಾಜ್‌ಗೌಡ, ಕಾರ್ಯದರ್ಶಿ ಎಂ.ಲೋಕೇಶ್, ನಿಕಟಪೂರ್ವ ರಾಜ್ಯಾಧ್ಯಕ್ಷ ರಮೇಶ್, ಜಿಲ್ಲಾಧ್ಯಕ್ಷ ಆರ್.ಮೋಹನ್, ಉಪಾಧ್ಯಕ್ಷ ನಾಗೇಂದ್ರನಾಯಕ್, ಪ್ರಧಾನ ಕಾರ್ಯದರ್ಶಿ ರಿಯಾಜ್‌ಪಾಷ, ಉಮ್ಮತ್ತೂರು ಚಂದ್ರು, ತಾಲೂಕು ಅಧ್ಯಕ್ಷ ವೈ.ಕೆ. ಮೋಳೆ ನಾಗರಾಜು, ಚಾಮಲಾಪುರ ವಿಜಯ್, ಜೆ.ಶ್ರೀನಿವಾಸ್, ಭೀಮಪ್ಪ, ವೈ.ವಿ.ಉಮಾಶಂಕರ್, ವೆಂಕಟೇಶ್, ಬೇದೇಗೌಡ, ರವಿಗೌಡಹಳ್ಳಿ, ಹರೀಶ್ ಬಾಬು, ಸ್ವಾಮಿ, ಸೋಮಣ್ಣ, ರಂಗಸ್ವಾಮಿ ಸೇರಿದಂತೆ ಹಲವರು ಇದ್ದರು.

ಮೂರನೇ ಪುಟದಿಂದ

ಸಮುದಾಯದ ಬೃಹತ್ ಪ್ರತಿಭಟನಾ ರ್‍ಯಾಲಿ

ತಾವು ಜೀವನ ನಡೆಸಿ ಕೊಂಡು ಹೋಗುತ್ತಿರುವ ಬ್ರಾಹ್ಮಣರ ಬಗ್ಗೆ ಕೆಲವರು ಆಡಿದ ಅವಹೇಳನಕಾರಿ ಮಾತಿಗೆ ಬುದ್ಧಿ ಹೇಳಲು ಬ್ರಾಹ್ಮಣರು ಸಿಡಿದೆದ್ದಿದ್ದಾರೆ. ಯಾವುದೇ ಜಾತಿಗಳ ಜಾತಿ ಹೆಸರಲ್ಲಿ ಬಾಯಿಗೆ ಬಂದಂತೆ ಮಾತನಾಡುವ ಇಂಥ ವ್ಯಕ್ತಿಗಳಿಗೆ ಅಂತ್ಯ ಹಾಡುವ ನಿಟ್ಟಿನಲ್ಲಿ ವಿಪ್ರ ಸಮುದಾಯ ಇಂದು ಬೀದಿಗಿಳಿದಿದೆ.

ವಿಧಾನಪರಿಷತ್ ಮಾಜಿ ಸದಸ್ಯ ಗೋ. ಮಧುಸೂದನ್ ಮಾತನಾಡುತ್ತಾ, ದೇಶವನ್ನು ಪಾನ್ ಇಸ್ಲಾಮಿಕ್ ಮಾಡುವ ಷಡ್ಯಂತ್ರ ನಡೆದಿದೆ. ಅದಕ್ಕೆ ಪೂರಕವಾಗಿ ಬಿಟ್ಟಿರುವ ಏಜೆಂಟ್‌ಗಳ ಪೈಕಿ ಪ.ಮಲ್ಲೇಶ್ ಒಬ್ಬರು. ಪ.ಮಲ್ಲೇಶ್ ಯಾರ ದುಡ್ಡು ಪಡೆದು, ಏಜೆಂಟಾಗಿ ಯಾರ ಪರ ಕೆಲಸ ಮಾಡುತ್ತಿದ್ದಾರೋ ಗೊತ್ತಿಲ್ಲ. ಹಿಂದೆ ಬಂದರೆ ಒದೆಯದ, ಮುಂದೆ ಬಂದರೆ ಹಾಯದ ಏನೂ ಮಾಡದ ಬ್ರಾಹ್ಮಣರ ಬಗ್ಗೆ ಮಾತ ನಾಡುತ್ತಾರಲ್ಲ ಇನ್ನಾದರೂ ವೃದ್ಧಾಪ್ಯ ಕಾಲದಲ್ಲಿ ಇಂತ ಅಪರಾಧಗಳನ್ನು ಮಾಡದಿರಲಿ. ಅವರು ಬ್ರಾಹ್ಮಣರ ದೇಶದ, ಕ್ಷಮೆ ಕೇಳಬೇಕು. ಜಿಲ್ಲಾ, ನಗರ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಮಾತನಾಡುತ್ತಾ, ವಿನಾಕಾರಣ ಬ್ರಾಹ್ಮಣರ ವಿರುದ್ಧವಾದ ಅವ ಹೇಳನದ ಮಾತುಗಳನ್ನು ಬ್ರಾಹ್ಮಣರು ಇನ್ನು ಮುಂದೆ ಸಹಿಸುವುದಿಲ್ಲ. ಇಂತಹ ಶಕ್ತಿಗಳ ವಿರುದ್ಧ ನಮ್ಮ ಹೋರಾಟ. ವಿಷಾದ ಹೇಳಿದರೆ ಸಾಲದು, ಬಹಿರಂಗ ಕ್ಷಮೆ ಕೇಳುವವ ರೆಗೂ ಬ್ರಾಹ್ಮಣರ ಹೋರಾಟ ನಿಲ್ಲುವುದಿಲ್ಲ. ಉಪಮೇಯರ್ ಡಾ.ಜಿ.ರೂಪ, ವೇದ ವಿದ್ವಾಂಸ ಡಾ.ಭಾನುಪ್ರಕಾಶ್ ಶರ್ಮಾ, ವಿಜಯನಗರ ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಪ್ರೊ.ಭಾಷ್ಯಂ ಸ್ವಾಮೀಜಿ, ಅಮೃತೇಶ್ವರ ದೇವಾಲಯದ ಮೈ.ಕುಮಾರ್, ಬಿ.ಆರ್.ನಟರಾಜ ಜೋಯಿಸ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್. ಶ್ರೀವತ್ಸ ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್, ಜಿಎಸ್‌ಎಸ್ ಸಂಸ್ಥೆಯ ಡಿ.ಶ್ರೀಹರಿ, ಸಮುದಾಯದ ಮುಖಂಡರಾದ ವಿಕ್ರಮ್ ಅಯ್ಯಂಗಾರ್, ಅಜಯ್ ಶಾಸ್ತ್ರಿ ರಾಕೇಶ್ ಭಟ್, ಪಾಲಿಕೆ ಮಾಜಿ ಸದಸ್ಯ ಸ್ನೇಕ್‌ಶ್ಯಾಮ್, ಜಯಸಿಂಹ ಶ್ರೀಧರ್, ಎಸ್.ರಂಗನಾಥ್, ಎಂ.ವಿ.ನಾಗೇಂದ್ರಬಾಬು, ಶ್ರೀನಿವಾಸ ಪ್ರಸಾದ್, ಹೆಚ್.ಜಿ.ಗಿರಿಧರ್, ಟಿ.ಎಸ್.ಅರುಣ್ ಇನ್ನಿತರರು ಭಾಗವಹಿಸಿದ್ದರು.

ನಾಯಕತ್ವ ಬಿಜೆಪಿ ವರಿಷ್ಠರ ನಿರ್ಧಾರ

2024ರ ಲೋಕಸಭಾ ಚುನಾವಣೆಯಲ್ಲಿ ಮರಳಿ ಗೆಲ್ಲಬೇಕೆಂದರೆ ಈಗ ಅಧಿಕಾರದಲ್ಲಿರುವ ಕರ್ನಾಟಕವನ್ನು ಯಾವ ಕಾರಣಕ್ಕೂ ಕಳೆದುಕೊಳ್ಳಬಾರದು ಎಂಬುದು ಬಿಜೆಪಿ ವರಿಷ್ಠರ ಉದ್ದೇಶವಾಗಿದೆ. ದಕ್ಷಿಣ ಭಾರತದಲ್ಲಿ ಹೆಚ್ಚು ಸಂಸತ್ ಸ್ಥಾನಗಳನ್ನು ಗೆಲ್ಲುವ ಅವಕಾಶ ಇರುವುದು ಕರ್ನಾಟಕದಲ್ಲಿ ಮಾತ್ರ. ಹೀಗಾಗಿ ಯಾವ ಕಾರಣಕ್ಕೂ ಅದನ್ನು ನಿರ್ಲಕ್ಷಿಸಕೂಡದು ಎಂಬ ಸೂಚನೆ ನೀಡಲಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಇಪ್ಪತ್ತೈದು ಸ್ಥಾನಗಳನ್ನು ಗೆದ್ದಿತ್ತು.ಮುಂದಿನ ಚುನಾವಣೆಯಲ್ಲಿ ಈ ಸಾಧನೆ ಪುನರಾವರ್ತನೆ ಮಾಡಲು ಏನು ಮಾಡಬೇಕು?ಎಂಬ ಸಂಬಂಧ ಈಗಾಗಲೇ ಬಿಜೆಪಿ ಹೈಕಮಾಂಡ್ ಸರ್ವೇಗಳನ್ನು ಮಾಡಿಸುತ್ತಿದೆ. ರಾಜ್ಯದಲ್ಲಿ ಹದಿನೈದು ಸ್ಥಾನಗಳನ್ನು ಮಾತ್ರ ಮರಳಿ ಗೆಲ್ಲಬಹುದು ಎಂಬುದು ಸರ್ವೇಗಳ ಮಾಹಿತಿ.

ಕರ್ನಾಟಕದಲ್ಲಿ ಸ್ವಯಂಬಲದ ಮೇಲೆ ಗೆದ್ದು ಅಧಿಕಾರ ಹಿಡಿದರೆ ಸಂಸತ್ ಚುನಾವಣೆಯಲ್ಲಿ ಹಿಂದಿನ ಸಾಧನೆಯನ್ನು ಪುನರಾವರ್ತನೆ ಮಾಡಲು ಅಗತ್ಯವಾದ ಕಾರ್ಯತಂತ್ರವನ್ನು ರೂಪಿಸಬಹುದು ಎಂಬುದು ಹೈಕಮಾಂಡ್ ಉದ್ದೇಶ. ಈ ಹಿನ್ನೆಲೆಯಲ್ಲಿಯೇ ಕರ್ನಾಟಕದ ವಿಧಾನಸಭೆ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದ್ದು, ಡಿಸೆಂಬರ್ ಎಂಟರ ವೇಳೆಗೆ ಕರ್ನಾಟಕಕ್ಕೆ ದಂಡೆತ್ತಿ ಬರಲು ಹೈಕಮಾಂಡ್ ನಿರ್ಧರಿಸಿದೆ. ಕರ್ನಾಟಕಕ್ಕೆ ಬಂದು ರಾಜ್ಯ ಬಿಜೆಪಿಯ ವಾರ್ ರೂಮ್ ಅನ್ನು ಸಂಪೂರ್ಣವಾಗಿ ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲಿರುವ ದೆಹಲಿ ವರಿಷ್ಠರು, ಹಾಲಿ ಶಾಸಕರು ಸೇರಿದಂತೆ 224 ವಿಧಾನಸಭಾ ಕ್ಷೇತ್ರಗಳ ಪೈಕಿ ನೂರಕ್ಕೂ ಹೆಚ್ಚು ಕಡೆ ಹೊಸಮುಖಗಳಿಗೆ ಟಿಕೆಟ್ ನೀಡಲು ತೀರ್ಮಾನಿಸಿದೆ.

ಕೊನೆಗೂ ಅರ್ಜಿ ಸಲ್ಲಿಸಿದ ಸಿದ್ದರಾಮಯ್ಯ

ವೆಂಕಟೇಶ್ ಅವರಿಂದ ಅರ್ಜಿ ಸಲ್ಲಿಕೆ ಮಾಡಿಸಿದ್ದಾರೆ. ಆದರೆ ಯಾವ ಕ್ಷೇತ್ರದ ಟಿಕೆಟ್ ಎನ್ನುವುದನ್ನು ಮಾತ್ರ ಗುಟ್ಟು ಬಿಟ್ಟುಕೊಟ್ಟಿಲ್ಲ. ಕ್ಷೇತ್ರದ ಹೆಸರು ಬರೆಯದೆ ಅರ್ಜಿ ಸಲ್ಲಿಸಿದ ಸಿದ್ದರಾಮಯ್ಯ, ಹೈಕಮಾಂಡ್ ಸೂಚನೆ ಮೇರೆಗೆ ಕ್ಷೇತ್ರದ ಆಯ್ಕೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಈ ಮೂಲಕ ಸಿದ್ದರಾಮಯ್ಯನವರು ತಾವು ಸ್ಪರ್ಧೆ ಮಾಡುವ ಕ್ಷೇತ್ರದ ಬಗ್ಗೆ ಕಾರ್ಯಕರ್ತರು ಹಾಗೂ ಅಭಿಮಾನಿಗಳಲ್ಲಿ ಮತ್ತಷ್ಟು ಕುತೂಹಲ ಹೆಚ್ಚಿಸಿದ್ದಾರೆ. ಕೇವಲ ಸ್ವಪಕ್ಷದ ನಾಯಕರು, ಕಾರ್ಯಕರ್ತರಲ್ಲಿ ಮಾತ್ರವಲ್ಲ. ವಿರೋಧ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಹಾಗೂ ಕಾರ್ಯಕರ್ತರಲ್ಲೂ ಸಹ ಸಿದ್ದರಾಮಯ್ಯನವರು ಸ್ಪರ್ಧೆ ಮಾಡುವ ಕ್ಷೇತ್ರ ಯಾವುದು ಎಂದು ತಿಳಿದುಕೊಳ್ಳಲು ಕಾತರರಿಂದ ಕಾಯುತ್ತಿದ್ದಾರೆ. ಆದ್ರೆ, ಸಿದ್ದರಾಮಯ್ಯ ಮಾತ್ರ ಟಿಕೆಟ್‌ಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಕ್ಷೇತ್ರದ ಹೆಸರು ಮಾತ್ರ ಉಲ್ಲೇಖಿಸಿಲ್ಲ. ಬದಲಿಗೆ ಅರ್ಜಿ ಹಾಕುವ ಮೂಲಕ ಟಿಕೆಟ್ ಕಾಯ್ದಿರಿಸಿದ್ದಾರೆ ಅಷ್ಟೇ. ಇದರಿಂದ ಸಿದ್ದರಾಮಯ್ಯನವರ ನಡೆ ತೀವ್ರ ಕುತೂಹಲ ಮೂಡಿಸಿದೆ.

ಎಲ್ಲಾ ಹಂತದಲ್ಲೂ ಕನ್ನಡ ಕಡ್ಡಾಯ

ಸರ್ಕಾರಕ್ಕೆ ಶಿಫಾರಸು ಮಾಡಿರುವುದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಒಪ್ಪಿದೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು. ಇದರ ಬಗ್ಗೆ ಮುಖ್ಯಮಂತ್ರಿಗಳ ಒಪ್ಪಿಗೆ ಪಡೆದ ನಂತರ ತಾಯಿ ಭುವನೇಶ್ವರಿಯ ಭಾವಚಿತ್ರವನ್ನು ಸರ್ಕಾರ ಬಿಡುಗಡೆ ಮಾಡಲಿದ್ದು, ಸರ್ಕಾರಿ ಕಚೇರಿಗಳಲ್ಲಿ ಇದನ್ನು ಅಳವಡಿಸಲಾಗುತ್ತದೆ ಎಂದರು.

ಕನ್ನಡ ನಾಡಿನ ಹಲವು ವಿಶೇಷಗಳನ್ನು ಚಿತ್ರ ಒಳಗೊಂಡಿದ್ದು, ಈ ಚಿತ್ರವೇ ಇನ್ನು ಮುಂದೆ ರಾಜ್ಯದ ಎಲ್ಲ ಕಡೆ ಪ್ರದರ್ಶಿತವಾಗಬೇಕು ಎಂದು ಅವರು ಸ್ಪಷ್ಟಪಡಿಸಿದರು.

ಹೊಯ್ಸಳರು, ಕದಂಬರು, ಮೈಸೂರು ಅರಸರು ಸೇರಿದಂತೆ ರಾಜ್ಯವನ್ನು ಆಳಿದ ಹಲವು ಪ್ರಮುಖ ರಾಜಮನೆತನಗಳ ವೈಶಿಷ್ಟ್ಯಗಳು ತಾಯಿ ಭುವನೇಶ್ವರಿಯ ಚಿತ್ರದಲ್ಲಿದ್ದು ಇದೇ ಇನ್ನು ಮುಂದೆ ಅಧಿಕೃತ ಚಿತ್ರವಾಗಲಿದೆ ಎಂದು ವಿವರಿಸಿದರು.

ಹಾವೇರಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಸಿರ್ಸಿಯಿಂದ ತಾಯಿ ಭುವನೇಶ್ವರಿಯ ರಥ ಹೊರಡಲಿದ್ದು, ಇದೇ ರೀತಿ ರಾಜ್ಯದ ಇಪ್ಪತ್ತು ಜಿಲ್ಲೆಗಳಿಂದ ಭುವನೇಶ್ವರಿಯ ರಥ ಹೊರಟು ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಹಾವೇರಿಯನ್ನು ತಲುಪಲಿದೆ ಎಂದು ಹೇಳಿದರು. ಕನ್ನಡ ನಾಮಫಲಕಗಳು ಕಡಿಮೆಯಾಗುತ್ತಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು ಇಂತಿಷ್ಟು ಪ್ರಮಾಣದಲ್ಲಿ ಕನ್ನಡ ನಾಮಫಲಕಗಳ ಬಳಕೆ ಕಡ್ಡಾಯ ಎಂದು ಸೂಚನೆ ನೀಡುವುದಾಗಿ ಸಚಿವರು ಭರವಸೆ ನೀಡಿದರು. ಕರ್ನಾಟಕದಾದ್ಯಂತ ಇರುವ ಮತ್ತು ಈಗ ನಶಿಸುತ್ತಿರುವ ಕಲೆಗಳನ್ನು ಪುನರುಜ್ಜೀವಗೊಳಿಸಲು ಡಿಸೆಂಬರ್ ಆರರಿಂದ ಎರಡು ತಿಂಗಳ ಕಾಲ ಶಿಬಿರಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಲಂಬಾಣಿ ನೃತ್ಯವೂ ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಇರುವ ಕಲೆಗಳು ನಶಿಸುತ್ತಿದ್ದು, ಇವುಗಳನ್ನು ಮೂಲ ಕನ್ನಡ ಸಂಸ್ಕೃತಿಯ ಹೆಸರಿನಲ್ಲಿ ಪುನರುಜ್ಜೀವಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದರು.

ಉಗ್ರ ಸಂಘಟನೆ ಸಂಪರ್ಕ

ಬಗ್ಗೆ ಇನ್ನೂ ಮಾಹಿತ ಲಭ್ಯವಾಗಿದೆ. ಆತನ ಯೋಜನೆಯಂತೆ ಬಾಂಬ್ ಸ್ಫೋಟಿಸಿದ್ದರೆ ಉದ್ವಿಗ್ನ ವಾತಾವರಣ ಸೃಷ್ಟಿಯಾಗುತ್ತಿತ್ತು. ಆದರೆ ಮಾರ್ಗಮಧ್ಯೆಯೇ ಬಾಂಬ್ ಸ್ಫೋಟಿಸಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ. ಈ ವಿಚಾರದಲಿ ದೇವರಿಗೆ ಧನ್ಯವಾದ ಸಲ್ಲಿಸಲೇಬೇಕು ಎಂದರು. ಈತನಿಗೆ ಆರ್ಥಿಕ ನೆರವು ನೀಡುತ್ತಿದ್ದವರ ಪತ್ತೆಗಾಗಿ ವಿಶೇಷ ತಂಡ ರಚನೆ ಮಾಡಲಾಗಿದೆ ಎಂದು ಅವರ ಶಂಕಿತ ಶಾರೀಕ್ ತಮಿಳುನಾಡಿನ ಕೊಯಮತ್ತೂರು, ಕೇರಳ ಮುಂತಾದೆಡೆಯಲ್ಲಾ ಸುತ್ತಾಡಿ ಮೈಸೂರಿಗೆ ಬಂದು ನೆಲೆಸಿದ್ದ. ಮೊಬೈಲ್ ತಯಾರಿಸುವ ಇನ್ಸ್‌ಟಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತಿದ್ದ. ಫೋಟೋ ನೋಡಿದಾಗಲೇ ಆತ ಶಾರೀಕ್ ಎಂದುಬುದು ಗೊತ್ತಾಗಿತ್ತು. ಆದರೂ ಅವರ ಮನೆಯವರನ್ನು ಕರೆಸಿ ಆತನ ಗುರುತು ಪತ್ತೆ ಮಾಡಿದ್ದೇವೆ ಎಂದರು.

ಮಂಗಳೂರಿನಲ್ಲಿ 2020ರಲ್ಲಿ ಗೋಡೆಬರಹ ವಿಚಾರವಾಗಿದ ಯುಎಪಿಎ ಆಕ್ಟ್‌ನಡಿ ಪ್ರಕರಣ ದಾಖಲಾಗಿದೆ. ಆ ಪ್ರಕರಣದಲ್ಲಿ ಈತನೇ ಪ್ರಮುಖ ಆರೋಪಿಯಾಗಿದ್ದ. ಆಗಲೇ ಅವನಿಗೆ ಮನೆಯವರು ಬುದ್ಧಿ ಹೇಳಿದ್ದರಂತೆ. ಈ ವಿಚಾರ ಶಿವಮೊಗ್ಗದಲ್ಲಿ ಜಬಿವುಲ್ಲಾ ಕೇಸ್ ವಿಚಾರಣೆ ವೇಳೆ ನಮಗೆ ಗೊತ್ತಾಗಿತ್ತು. ಮುನೀರ್ ಎಂಬಾತನನ್ನು ಬಂಧಿಸಿದ್ದಾಗ ಶಿವಮೊಗ್ಗದಲ್ಲಿ ಶಾರೀಕ್ ಟ್ರಯಲ್ ಬ್ಲಾಸ್ಟ್ ಮಾಡಿದ್ದು ಗೊತ್ತಾಗಿದೆ. ಶನಿವಾರ ಸಂಜೆ ಮಂಗಳೂರಿನಲ್ಲಿ ನಡೆದಿದ್ದ ಸ್ಫೋಟ ಪ್ರಕರಣದಲ್ಲಿ ಬಾಂಬ್ ತಯಾರಿಸಲು ಶಾರೀಕ್‌ಗೆ ತರಬೇತಿ ನೀಡಲಾಗಿತ್ತೇ. ಅಥವಾ ಆತನೇ ಸ್ವಯಂ ಕಲಿತುಕೊಂಡನೆ ಎಂಬುದರ ಬಗ್ಗೆ ತಿಳಿಯಬೇಕಿದೆ ಎಂದರು. ಈತ ಮೈಸೂರಿನಲ್ಲಿ ವಾಸವಿದ್ದ ಮನೆಯಲ್ಲಿ ಹಲವು ಸ್ಫೋಟಕ ವಸ್ತುಗಳು ದೊರೆತಿವೆ. ಈ ಶಂಕಿತ ನಕಲಿ ಗುರುತಿನ ಚೀಟಿ ಪಡೆದು ಕೊಯಮತ್ತೂರಿನಲ್ಲೂ ವಾಸವಿದ್ದ ಎಂದು ಹೇಳಿದ ಅವರು, ಈತ ಭಯೋತ್ಪಾದನಾ ಕೃತ್ಯಗಳಲ್ಲಿ ತೊಡಗಿರುವ ವಿಚಾರ ಮೈಸೂರಿನಲ್ಲಿ ಈತನಿಗೆ ಮನೆ ಬಾಡಿಗೆಗೆ ನೀಡಿದ್ದ ಮೋಹನ್‌ಕುಮಾರ್ ಎಂಬುವರಿಗೆ ಗೊತ್ತಿಲ್ಲ ಎಂದು ಅಲೋಕ್‌ಕುಮಾರ್ ತಿಳಿಸಿದರು.

ಕುಕ್ಕರ್ ಬಾಂಬ್‌ನೊಂದಿಗೆ ಫೋಟೋ ಕ್ಲಿಕ್ಕಿಸಿದ್ದ

ಸಂಘಟನೆಯೊಂದಿಗೆ ನಿರಂತರ ಸಂಪರ್ಕ ಹೊಂದಿದ್ದನಲ್ಲದೇ ಅಂತರ್‍ರಾಷ್ಟ್ರೀಯ ಭಯೋತ್ಪಾದಕರೊಂದಿಗೂ ನಂಟು ಬೆಳೆಸಿದ್ದ ಎನ್ನಲಾಗಿದೆ. ತಾನೇ ತಯಾರಿಸಿದ ಬಾಂಬ್‌ನಿಂದ ಕರಾವಳಿಯಲ್ಲಿ ರಕ್ತಪಾತಕ್ಕೆ ಸಂಚು ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಕೆ.ಜಿ.ಹಳ್ಳಿಯಲ್ಲಿ ಮೊಹಮದ್ ರುಹುಲ್ಲಾ ಎಂಬುವನನ್ನು ವಶಕ್ಕೆ ಪಡೆದಿರುವ ಪೊಲೀಸರು, ಮೈಸೂರು ಪೊಲೀಸರಿಗೆ ಒಪ್ಪಿಸಿದ್ದಾರೆ. ತನಿಖೆ ನಡೆಸುತ್ತಿರುವ ಮಂಗಳೂರು ಪೊಲೀಸರು ಆತನನ್ನು ತೀವ್ರ ವಿಚಾರಣೆಗೊಳಪಡಿಸಿದ್ದಾರೆ. ಮೊಹಮದ್ ಶಾರಿಕ್‌ನೊಂದಿಗೆ ಸಂಪರ್ಕದಲ್ಲಿದ್ದ ಎಲ್ಲರನ್ನೂ ತನಿಖಾಧಿಕಾರಿಗಳು ವಶಕ್ಕೆ ಪಡೆಯುತ್ತಿದ್ದಾರೆ.

ಮತ್ತೊಂದೆಡೆ ಎನ್‌ಐಎ ತಂಡದ ಅಧಿಕಾರಿಗಳು ಮಂಗಳೂರು, ಮೈಸೂರು ಮತ್ತು ಶಿವಮೊಗ್ಗ ನಗರಗಳಲ್ಲಿ 7 ಕಡೆ ದಾಳಿ ನಡೆಸಿ ಸ್ಥಳೀಯ ಪೊಲೀಸರ ನೆರವಿನಿಂದ ಶೋಧ ಕಾರ್ಯ ನಡೆಸಿದರು. ಶಂಕಿತ ಉಗ್ರ ಸೆ.8ರಂದು ಒಮ್ಮೆ ಮಂಗಳೂರಿನ ಬಿ.ಸಿ ರಸ್ತೆ ಮೂಲಕ ನಾಗುರಿಗೆ ತೆರಳಿ ಸ್ಥಳ ಪರಿಶೀಲಿಸಿ ಬಂದಿದ್ದ ಎಂಬುದು ತನಿಖೆಯಿಂದ ತಿಳಿದುಬರುತ್ತಿದೆ.

ಎನ್‌ಇಪಿ ಪ್ರಕಾರ ಪರೀಕ್ಷೆ ನಡೆಸುವ ಬಗ್ಗೆ ಪದವಿ ಕಾಲೇಜು ಪ್ರಾಂಶುಪಾಲರ ಸಭೆಯಲ್ಲಿ ಭಿನ್ನ ಅಭಿಪ್ರಾಯ



ಮೈಸೂರು,ನ.21(ಎಂಟಿವೈ)- ನೂತನವಾಗಿ ಜಾರಿಗೊಳಿಸಲು ಮುಂದಾಗಿರುವ ಎನ್‌ಇಪಿ ಪ್ರಕಾರ 60:40 ಅಂಕಗಳ ಅನುಪಾತದಲ್ಲಿ ಪದವಿ ಪರೀಕ್ಷೆ ನಡೆಸಲು ಸಮಯ ನಿಗದಿ ಮಾಡುವುದಕ್ಕೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯ ವ್ಯಕ್ತವಾಗಿದ್ದು, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿಲುವು ಪ್ರಕಟಿಸಲು ನಿರ್ಧರಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನಭವನದ ಸಭಾಂಗಣದಲ್ಲಿ ಸೋಮವಾರ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಶಿಕ್ಷಣ ಮಂಡಳಿ ವತಿಯಿಂದ ಆಯೋಜಿಸಿದ್ದ ಪದವಿ ಕಾಲೇಜುಗಳ ಪ್ರಾಂಶುಪಾಲರ ಒಂದು ದಿನದ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಮೈಸೂರು ವಿವಿ ವ್ಯಾಪ್ತಿಯ ಪದವಿ ಕಾಲೇಜುಗಳ ಪ್ರಾಂಶುಪಾಲರು ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಒಮ್ಮತ ಮೂಡಲಿಲ್ಲ. ಪದವಿ ವಿದ್ಯಾರ್ಥಿಗಳ ಪರೀಕ್ಷಾ ಅವಧಿಯನ್ನು 2 ಗಂಟೆ ಅಥವಾ 2.30 ಗಂಟೆಗೆ ನಿಗದಿಪಡಿಸಬೇಕು ಎನ್ನುವುದಕ್ಕೆ ಸ್ಪಷ್ಟ ಅಭಿಪ್ರಾಯ ವ್ಯಕ್ತವಾಗಲಿಲ್ಲ. ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಾಂಶುಪಾಲರು ಭಿನ್ನ ಅಭಿಪ್ರಾಯಗಳು ವ್ಯಕ್ತಪಡಿಸಿದ್ದರಿಂದ ಮುಂದಿನ ಸಿಂಡಿಕೇಟ್ ಸಭೆ ಹಾಗೂ ಶಿಕ್ಷಣ ಮಂಡಳಿ ಸಭೆಯಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಯಿತು.

ಭಿನ್ನ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಮೈಸೂರು ವಿವಿಯ ಪರೀಕ್ಷಾಂಗ ಕುಲಸಚಿವ ಪ್ರೊ.ಜ್ಞಾನಪ್ರಕಾಶ್ ಮಾತನಾಡಿ, ಮೂರನೇ ಸೆಮಿಸ್ಟರ್ ಪರೀಕ್ಷೆಯನ್ನು ಎಷ್ಟು ಅವಧಿಗೆ ಸೀಮಿತಗೊಳಿಸಬೇಕು ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಾಂಶುಪಾಲರುಗಳು ವಿಭಿನ್ನ ಸಲಹೆ ನೀಡಿದ್ದರಿಂದ ಮತ್ತೊಂದು ಸುತ್ತಿನ ಚರ್ಚೆ ನಡೆಸಿದ ಮೇಲೆ ಸಮಯವನ್ನು ನಿಗದಿಪಡಿಸುವುದು ಸೂಕ್ತ. ಈಗಾಗಲೇ ಮೊದಲನೇ ಸೆಮಿಸ್ಟರ್ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಎರಡನೇ ಸೆಮಿಸ್ಟರ್ ಫಲಿತಾಂಶವನ್ನು ವಾರದೊಳಗೆ ಪ್ರಕಟಿಸಲಾಗುವುದು. ಎನ್‌ಇಪಿ ಪ್ರಕಾರ ಎರಡು ಗಂಟೆಗಳ ಕಾಲ ಪರೀಕ್ಷೆ ನಡೆಸಬೇಕು. ಆದರೆ, ಶಿಕ್ಷಣ ಮಂಡಳಿ ಸಭೆಯಲ್ಲಿ 2 ಗಂಟೆ ಸಾಲುವುದಿಲ್ಲ. ಎರಡೂವರೆ ಗಂಟೆ ಸಮಯ ಕೊಡಬೇಕೆಂಬ ಬೇಡಿಕೆ ಇಟ್ಟಿದ್ದಾರೆ. ಇದಲ್ಲದೆ, ವಿದ್ಯಾರ್ಥಿಗಳು ನೇರವಾಗಿ ಭೇಟಿ ಮಾಡಿ ಸಮಯ ಹೆಚ್ಚಿಸುವಂತೆ ಕೋರಿದ್ದಾರೆ. ಬೇರೆ ಬೇರೆ ವಿವಿಗಳಲ್ಲಿ ಎರಡೂವರೆ ಗಂಟೆ ಸಮಯ ಕೊಟ್ಟಿರುವಾಗ ಮೈಸೂರು ವಿವಿಯಲ್ಲಿ 2 ಗಂಟೆಗೆ ಸೀಮಿತಗೊಳಿಸಿರುವುದನ್ನು ಪ್ರಸ್ತಾಪಿಸಿರುವ ಕಾರಣ ಈ ಬಗ್ಗೆ ಪ್ರಾಂಶುಪಾಲರ ಅಭಿಪ್ರಾಯ ಸಂಗ್ರಹಿಸಲಾಗಿದೆ ಎಂದರು.

ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಒಂದು ಸೆಮಿಸ್ಟರ್ ಮುಗಿದಿದೆ. ಎರಡನೇ ಸೆಮಿಸ್ಟರ್ ಮೌಲ್ಯಮಾಪನ ಮುಗಿದು ಡಿಕೋಡಿಂಗ್ ಆಗಿದೆ. ವಾರದೊಳಗೆ ಫಲಿತಾಂಶ ಪ್ರಕಟ ಮಾಡುತ್ತೇವೆ. ಕೋರ್ಸ್ ನೋಂದಣಿ ಮಾಡಿಕೊಳ್ಳುವಾಗ ಮೂರನೇ ಸೆಮಿಸ್ಟರ್ ಬಂದಾಗ ಶೇ.75ರಷ್ಟು ಹಾಜರಾತಿ ನಮೂದನೆ ಮಾಡಬೇಕು. ಎಸ್‌ಸಿ-ಎಸ್ಟಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವುದರಿಂದ ಸರಿಯಾಗಿ ನಮೂದಿಸಬೇಕು. ಪರೀಕ್ಷಾ ಶುಲ್ಕ ಪಾವತಿಸದಿದ್ದರೂ ಹಾಜರಾತಿ ಆಗಿರುವುದು ಕಂಡು ಬಂದಿದೆ. ಒಂದು ವೇಳೆ ಹಾಜರಾದರೂ ನೋಂದಣಿ ಆಗುವುದಿಲ್ಲ. ನಮ್ಮಲ್ಲಿರುವ ಹಾಜರಾತಿ ಮತ್ತು ಪರೀಕ್ಷೆ ನೋಂದಣಿ ಕಾರ್ಯವನ್ನು ಬೇರೆ ಬೇರೆ ಏಜೆನ್ಸಿ ನೋಡಿಕೊಳ್ಳುತ್ತದೆ. ಇದರಿಂದ ಕೇವಲ ಒಂದು ಕಾಲೇಜಿನಿಂದ ಮಾಹಿತಿ ಕಳುಹಿಸದಿದ್ದರೂ ಪೂರ್ಣ ಪ್ರಮಾಣದ ಫಲಿತಾಂಶ ಪ್ರಕಟಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಹಂಗಾಮಿ ಕುಲಪತಿ ಪ್ರೊ.ಎಚ್.ರಾಜಶೇಖರ್ ಮಾತನಾಡಿ, ಎನ್‌ಇಪಿಯಲ್ಲಿ ಸಮಸ್ಯೆಗಳೊಂದಿಗೆ ಒಳ್ಳೆಯ ಅಂಶಗಳೂ ಇವೆ. ಇರುವ ಸಮಸ್ಯೆ ಗುರುತಿಸಿ, ಆ ಕುರಿತು ಚರ್ಚಿಸಿ ಪರಿಹಾರ ಕಂಡುಹಿಡಿಯಬೇಕು. ಎನ್‌ಇಪಿಯಲ್ಲಿರುವ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಕೆಲವರಿಗೆ ಸಾಧ್ಯವಾಗಿಲ್ಲ. ಆಂತರಿಕ ಶಿಸ್ತಿಗೆ ಆದ್ಯತೆ ನೀಡಿ ಬೇಡಿಕೆಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸಬೇಕಾಗಿದೆ. ಈ ಹಿಂದೆ ವಾಣಿಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಅಂದರೆ ಏನು ಎಂದು ಗೊತ್ತಿರಲಿಲ್ಲ. ಈಗ ಬೆರಳ ತುದಿಯಲ್ಲಿ ಇಟ್ಟುಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಇನ್ನೋವೇಟಿವ್ ಐಡಿಯಾ ಇದೆ. ಹಾಗೆಯೇ ಸಾಕಷ್ಟು ಸಮಸ್ಯೆಗಳು ಇದ್ದರೂ ಅದನ್ನು ಮೀರಿ ಮುಂದಕ್ಕೆ ಸಾಗುವ ಸವಾಲು ಇದೆ. ಅವುಗಳನ್ನು ಸಕಾರಾತ್ಮಕವಾಗಿ ತೆಗೆದುಕೊಂಡು ಸಾಗಿದರೆ ಮಕ್ಕಳಿಗೆ ಭವಿಷ್ಯದಲ್ಲಿ ಅನುಕೂಲ ಆಗಲಿದೆ. ನಾಲ್ಕು ಜಿಲ್ಲೆಯನ್ನು ಹೊಂದಿರುವ ವಿವಿಯ ಮುಂದಿನ ವರ್ಷಕ್ಕೆ ಒಂದು ಜಿಲ್ಲೆಯ ವಿವಿಧೆಡೆ ಕಾರ್ಯ ನಿರ್ವಹಿಸುವ ಕಾರಣ ಅನೇಕ ಸಮಸ್ಯೆಗಳು ಎದುರಾಗಲಿವೆ. ಇಂಡಸ್ಟ್ರಿಯಲ್ ನೀಡ್‌ಗಳನ್ನು ಗಮನಿಸಿ ಮುಂದಿನ ದಿನಗಳಲ್ಲಿ ಪಠ್ಯಕ್ರಮದಲ್ಲೂ ಬದಲಾವಣೆ ಮಾಡಿಕೊಳ್ಳುವುದು ಅಗತ್ಯ ಇದೆ ಎಂದರು.

ಸಭೆಯಲ್ಲಿ ಕಾಲೇಜು ಶಿಕ್ಷಣ ಮಂಡಳಿ ನಿರ್ದೇಶಕ ಪ್ರೊ.ಬಿ.ಶ್ರೀಕಂಠಸ್ವಾಮಿ ಸೇರಿದಂತೆ ವಿವಿಧ ಕಾಲೇಜುಗಳ ಪ್ರಾಂಶುಪಾಲರು ಪಾಲ್ಗೊಂಡಿದ್ದರು.

ರಾಜ್ಯೋತ್ಸವ ಪ್ರಯುಕ್ತ ನ.25ರಂದು ಉಚಿತ ಆರೋಗ್ಯ ತಪಾಸಣೆ ಶಿಬಿರ ಸೇರಿ ನಾನಾ ಕಾರ್ಯಕ್ರಮ

'ಭಾರತದ ಪ್ರಜೆಗಳಾದ ನಾವು' ಸಿನಿಮಾ ಪ್ರದರ್ಶನ ; ಪ್ರವೇಶ ಉಚಿತ



ಮೈಸೂರು,ನ.21(ಪಿಎಂ)-ಕರುನಾಡ ರಕ್ಷಣಾ ವೇದಿಕೆ ಹಾಗೂ ಲಯನ್ಸ್ ಕ್ಲಬ್ ಆಫ್ ಮೈಸೂರು ರಾಜೀವನಗರ ಜಂಟಿ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವ ಪ್ರಯುಕ್ತ ನ.25ರಂದು ಉಚಿತ ಆರೋಗ್ಯ ತಪಾಸಣೆ ಶಿಬಿರ, ಸಸಿ ವಿತರಣೆ ಹಾಗೂ 'ಭಾರತದ ಪ್ರಜೆಗಳಾದ ನಾವು' ಸಿನಿಮಾ ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಎಂ.ಸತೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರದಲ್ಲಿ ಸಿನಿಮಾ ಪ್ರದರ್ಶನ ನಡೆಯಲಿದ್ದು ಇದೇ ಆವರಣದಲ್ಲಿ ಉಚಿತ ಕಣ್ಣಿನ ತಪಾಸಣೆ, ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಕೆಲ ಔಷಧಗಳನ್ನೂ ಇದೇ ವೇಳೆ ಉಚಿತವಾಗಿ ವಿತರಣೆ ಮಾಡಲಾಗುವುದು ಎಂದರು.

ಅಲ್ಲದೆ, ರಕ್ತದಾನ ಶಿಬಿರದೊಂದಿಗೆ ದೇಹ ಮತ್ತು ನೇತ್ರದಾನದ ನೋಂದಣಿಯೂ ಇರಲಿದೆ. ಇದೇ ವೇಳೆ ಆಯುರ್ವೇದ ಹಾಗೂ ತೋಟಗಾರಿಕೆ ಸೇರಿದಂತೆ ಇನ್ನಿತರ ಸಸಿಗಳನ್ನು ಉಚಿತವಾಗಿ ನೀಡಲಾಗುವುದು. ಬೆಳಗ್ಗೆ 9ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಬಳಿಕ ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಆರೋಗ್ಯ ತಪಾಸಣೆ ಶಿಬಿರ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳು ನಡೆಯಲಿವೆ. ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ 'ಭಾರತದ ಪ್ರಜೆಗಳಾದ ನಾವು' ಸಿನಿಮಾ ಪ್ರದರ್ಶನ ನಡೆಯಲಿದೆ ಸಿನಿಮಾಗೆ ಪ್ರವೇಶ ಉಚಿತವಿದೆ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೆ.ಆರ್.ಆಸ್ಪತ್ರೆ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಸಾಹಿತಿ ಡಾ.ಕೃಷ್ಣಮೂರ್ತಿ ಚಮರಂ ಮಾತನಾಡಿ, 'ಭಾರತದ ಪ್ರಜೆಗಳಾದ ನಾವು' ನಾನೇ ರಚಿಸಿ, ನಿರ್ದೇಶಿಸಿರುವ ಸಿನಿಮಾ. ಭಾರತದ ಸಂವಿಧಾನದ ಆಶಯಗಳಡಿ ಭಾರತೀಯರು ತಮ್ಮ ಬದುಕು ಕಟ್ಟಿಕೊಳ್ಳುವ ಜೊತೆಗೆ ರಾಷ್ಟ್ರ ಸದೃಢಗೊಳಿಸಬಹುದು ಎಂಬ ಸಂದೇಶ ಈ ಸಿನಿಮಾದಲ್ಲಿದೆ. ಜೈ ಭೀಮ್ ಪ್ರೊಡಕ್ಷನ್ಸ್‌ನಿಂದ ನಿರ್ಮಾಣಗೊಂಡ ಈ ಸಿನಿಮಾ, 35ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನವಾಗಿದೆ. ರಾಷ್ಟ್ರ ಪ್ರಶಸ್ತಿ ವಿಜೇತ ನಿರ್ದೇಶಕ ಮತ್ತು ನಟ ಬಿ.ಸುರೇಶ್ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ ಎಂದು ತಿಳಿಸಿದರು. ವೇದಿಕೆ ಜಿಲ್ಲಾಧ್ಯಕ್ಷ ಬಸವರಾಜು, ಉಪಾಧ್ಯಕ್ಷೆ ಕವಿತಾ, ಲಯನ್ಸ್ ಕ್ಲಬ್ ಆಫ್ ಮೈಸೂರು ರಾಜೀವನಗರದ ಅಧ್ಯಕ್ಷೆ ಲಕ್ಷ್ಮೀ ಸಿದ್ದರಾಮು ಮತ್ತಿತರರು ಗೋಷ್ಠಿಯಲ್ಲಿದ್ದರು.

ತಾಂತ್ರಿಕ ಕಾರಣಗಳಿಂದ ಸಾಲ ನೀಡಲು ನಿರಾಕರಣೆ

ಬ್ಯಾಂಕಿನ ಆವರಣದಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ರೈತ

- ಸಾರ್ವಜನಿಕರ ಸಹಾಯದಿಂದ ಆಸ್ಪತ್ರೆಗೆ ದಾಖಲಿಸಿದ ಬ್ಯಾಂಕ್ ಸಿಬ್ಬಂದಿ
- ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಹೋಬಳಿಯಲ್ಲಿ ಘಟನೆ

ಮೈಸೂರು, ನ.21(ಎಸ್‌ಪಿಎನ್)- ತಾಂತ್ರಿಕ ಕಾರಣವೊಡ್ಡಿ ಕಬ್ಬು ಬೆಳೆಗೆ ಸಾಲ ನೀಡದ ಬ್ಯಾಂಕ್ ಅಧಿಕಾರಿಗಳ ವರ್ತನೆಗೆ ಬೇಸತ್ತು ಬ್ಯಾಂಕ್ ಆವರಣದಲ್ಲೇ ಕಬ್ಬು ಬೆಳೆಗಾರರ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ಹೋಬಳಿಯಲ್ಲಿ ಸೋಮವಾರ ನಡೆದಿದೆ.

ಅಂತರಸಂತೆ ಹೋಬಳಿಯ ಹೊಸಹೊಳಲು ಗ್ರಾಮದ ಕಬ್ಬು ಬೆಳೆಗಾರ ನಿಂಗೇಗೌಡ (70) ವಿಷ ಸೇವಿಸಿ ಅಸ್ವಸ್ಥಗೊಂಡ ರೈತ. ಇವರು ಕಳೆದೆರಡು ತಿಂಗಳ ಹಿಂದೆ ಅಂತರಸಂತೆ ಹೋಬಳಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್‌ಗೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಕಬ್ಬು ಬೆಳೆಗಾಗಿ ಬ್ಯಾಂಕ್‌ಗೆ 2 ಲಕ್ಷ ರೂ.ಗೆ ಅರ್ಜಿ ಹಾಕಿದ್ದರು.

ಅಂದಿನಿಂದ ಬ್ಯಾಂಕ್‌ಗೆ ಅಲೆದಲೆದು ಸುಸ್ತಾಗಿ, ಇಂದು (ಸೋಮವಾರ) ಕೊನೆಯದಾಗಿ ರೈತ ನಿಂಗೇಗೌಡ, ಬ್ಯಾಂಕ್ ಅಧಿಕಾರಿಗಳನ್ನು ಭೇಟಿ ಮಾಡಿ, ಸಾಲ ಮಂಜೂರು ಮಾಡುವಂತೆ ಒತ್ತಾಯಿಸಿದ್ದಾರೆ. ಇದಕ್ಕೆ ಬ್ಯಾಂಕ್ ಅಧಿಕಾರಿಗಳು ನಿಮಗೆ(ನಿಂಗೇಗೌಡ) ಸಿಬಿಲ್ ಸ್ಕೋರ್ ತೀರಾ ಕಡಿಮೆಯಿದೆ, ಹಾಗಾಗಿ ಸಾಲ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಬ್ಯಾಂಕ್ ಅಧಿಕಾರಿಗಳ ಈ ಹೇಳಿಕೆಯಿಂದ ಬೇಸತ್ತ ರೈತ ನಿಂಗೇಗೌಡ, ಕೇಂದ್ರ ಕಚೇರಿಯಿಂದ ಬಂದಿದ್ದ ಪತ್ರವನ್ನು ನೀಡಿದ್ದಾರೆ ಎನ್ನಲಾಗಿದೆ.



ಬ್ಯಾಂಕ್ ಆವರಣದಲ್ಲಿ ಏಕಾಏಕಿ ವಿಷ ಸೇವಿಸಿ ಅಸ್ವಸ್ಥರಾಗಿ ವಾಂತಿ ಮಾಡಿಕೊಂಡು ಒದ್ದಾಡುತ್ತಿದ್ದರು. ಕೂಡಲೇ ಬ್ಯಾಂಕ್ ಸಿಬ್ಬಂದಿ, ನಿಂಗೇಗೌಡರ ಪುತ್ರ ಮಹದೇವು ಅವರಿಗೆ ಕರೆ ಮಾಡಿ, ಈ ವಿಷಯ ತಿಳಿಸಿದ್ದಾರೆ. ನಂತರ ಸಾರ್ವಜನಿಕರ ಸಹಾಯದಿಂದ ಹೆಚ್.ಡಿ.ಕೋಟೆ ತಾಲೂಕು ಆಸ್ಪತ್ರೆಗೆ ನಿಂಗೇಗೌಡರನ್ನು ದಾಖಲಿಸಿ, ಪ್ರಥಮ ಚಿಕಿತ್ಸೆ ನೀಡಿದ್ದಾರೆ.

ಅಲ್ಲಿನ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕೆ.ಆರ್.ಆಸ್ಪತ್ರೆಗೆ ದಾಖಲಿಸಿ, ತೀವ್ರ ನಿಗಾ ಘಟಕದಲ್ಲಿ ನಿಂಗೇಗೌಡರಿಗೆ ಚಿಕಿತ್ಸೆ ಮುಂದುವರೆದಿದೆ ಎಂದು ಅವರ ಪುತ್ರ ಮಹದೇವು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕಾರ್ಮಿಕರ ಬೇಡಿಕೆ ಈಡೇರಿಕೆಗಾಗಿ ಪ್ರತಿಭಟನೆ



ಮೈಸೂರು,ನ.21(ಎಂಟಿವೈ)- ಪರಿಷ್ಕೃತಗೊಂಡಿರುವ ಪಿಂಚಣಿ ವ್ಯವಸ್ಥೆ ಜಾರಿಗೊಳಿಸುವುದು, ಕಾರ್ಮಿಕ ಇಲಾಖೆ ವತಿಯಿಂದ ಕಾರ್ಮಿಕರಿಗೆ ಅಗತ್ಯ ಸೌಲಭ್ಯ ನೀಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕಾಂಗ್ರೆಸ್‌ನ ಕಾರ್ಮಿಕ ವಿಭಾಗದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಕುವೆಂಪುನಗರದ ಕಾಂತರಾಜ ಅರಸ್ ರಸ್ತೆಯಲ್ಲಿರುವ ಕಾರ್ಮಿಕ ಇಲಾಖೆಯ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಮುಂದೆ ಕಾಂಗ್ರೆಸ್ ಕಾರ್ಮಿಕ ವಿಭಾಗದ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ಕಾರ್ಮಿಕರಿಗೆ ಸೌಲಭ್ಯ ನೀಡುವಲ್ಲಿ ವಿಫಲವಾಗಿರುವ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಕೂಡಲೇ ಕಾರ್ಮಿಕ ಇಲಾಖೆಗೆ ನಿರ್ದೇಶನ ನೀಡಿ ಪರಿಷ್ಕೃತ ಪಿಂಚಣಿ ಯೋಜನೆ ಜಾರಿಗೆ ತಂದು ಕಾರ್ಮಿಕರಿಗೆ ಮದುವೆ ಹಾಗೂ ಹೆರಿಗೆಗೆ ಸಹಾಯಧನ ಸೌಲಭ್ಯ ನೀಡಬೇಕು. ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿರುವ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ವಿದ್ಯಾರ್ಥಿಗಳಿಗೆ ಬಾಕಿಯಿರುವ ವಿದ್ಯಾರ್ಥಿವೇತನ ಬಿಡುಗಡೆ ಮಾಡಬೇಕು. 3 ತಿಂಗಳಿಗೊಮ್ಮೆ ತಾಲೂಕು ಮತ್ತು ಜಿಲ್ಲಾವಾರು ಕಾರ್ಮಿಕ ಮುಖಂಡರೊಂದಿಗೆ ಸಭೆ ನಡೆಸಬೇಕು. ಕಾರ್ಮಿಕರಿಗೆ ಇಲಾಖೆ ನೀಡುವ ಕಿಟ್ ವಿತರಣೆಗೆ ಕ್ರಮ ಕೈಗೊಳ್ಳಬೇಕು. ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ವಸ್ತುಗಳ ಖರೀದಿಯಲ್ಲಿ ನಡೆಸುತ್ತಿರುವ ಹಗರಣಕ್ಕೆ ಕಡಿವಾಣ ಹಾಕಬೇಕು. ಇದುವರೆಗೂ ನಡೆದಿರುವ ಭ್ರಷ್ಟಾಚಾರದ ವಿರುದ್ಧ ತನಿಖೆ ನಡೆಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕಾರ್ಮಿಕರಿಗೆ ಮನೆ ನಿರ್ಮಿಸಿಕೊಳ್ಳಲು 5 ಲಕ್ಷ ರೂ. ಸಹಾಯಧನ ನೀಡಬೇಕು. ಕಟ್ಟಡ ಕಾರ್ಮಿಕರು ಹಾಗೂ ಅವಲಂಬಿತರಿಗೆ ವೈದ್ಯಕೀಯ ವೆಚ್ಚ ಭರಿಸಬೇಕು. ವೈದ್ಯಕೀಯ ತಪಾಸಣೆ ವೇಳೆ ಪತ್ತೆಯಾಗುವ ರೋಗಗಳಿಗೆ ಚಿಕಿತ್ಸೆನೀಡಲು ಕಾರ್ಮಿಕ ಇಲಾಖೆ ನೆರವು ನೀಡಬೇಕು. ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಭವಿಷ್ಯ ನಿಧಿ ನೀಡಬೇಕು. ನಿರ್ಮಾಣ ಕ್ಷೇತ್ರದಲ್ಲಿ ಅನಾಹುತ ತಡೆಗೆ ಕ್ರಮ ಕೈಗೊಂಡು ಕಾರ್ಮಿಕರ ಹಿತಕಾಯಬೇಕು. ಗುತ್ತಿಗೆದಾರ, ಮೇಸ್ತ್ರಿಗಳಿಂದ ಆಗುವ ವಂಚನೆ ತಡೆಗಟ್ಟಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ಗ್ರಾಮಾಂತರ ಕಾರ್ಮಿಕ ಘಟಕದ ಅಧ್ಯಕ್ಷ ಮಂಜುನಾಥ ಕೋಟೆ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಹಾಗೂ ಇನ್ನಿತರು ಪಾಲ್ಗೊಂಡಿದ್ದರು.

2023ನೇ ಸಾಲಿನ ಸಾರ್ವತ್ರಿಕ ರಜೆ ಪಟ್ಟಿ

ಬೆಂಗಳೂರು: 2023ನೇ ಸಾಲಿನಲ್ಲಿ ರಾಜ್ಯಾದ್ಯಂತ 19 ಸಾರ್ವತ್ರಿಕ ರಜೆ ಹಾಗೂ ಸರ್ಕಾರಿ ನೌಕರರಿಗೆ 17 ಪರಿಮಿತ ರಜಾ ಒಳಗೊಂಡು ಒಟ್ಟು 36 ರಜೆಗಳನ್ನು ಘೋಷಿಸಲಾಗಿದೆ. ಸಾರ್ವತ್ರಿಕ ರಜಾದಿನಗಳ ಪಟ್ಟಿಯನ್ನು ಸರ್ಕಾರ ಬಿಡುಗಡೆ ಮಾಡಿದ್ದು, ಅದರ ವಿವರ ಹೀಗಿದೆ.

ಸಾರ್ವತ್ರಿಕ ರಜಾದಿನಗಳ ಪಟ್ಟಿ	
26.01.2023	ಗಣರಾಜ್ಯೋತ್ಸವ
18.02.2023	ಮಹಾ ಶಿವರಾತ್ರಿ
22.03.2023	ಯುಗಾದಿ ಹಬ್ಬ
03.04.2023	ಮಹಾವೀರ ಜಯಂತಿ
07.04.2023	ಗುಡ್ ಫ್ರೈಡೆ
14.04.2023	ಡಾ.ಬಿಆರ್.ಅಂಬೇಡ್ಕರ್ ಜಯಂತಿ
01.05.2023	ಕಾರ್ಮಿಕ ದಿನಾಚರಣೆ
29.06.2023	ಬಕ್ರೀದ್
29.07.2023	ಮೊಹರಂ ಕಡೆ ದಿನ
15.08.2023	ಸ್ವಾತಂತ್ರ್ಯ ದಿನಾಚರಣೆ
18.09.2023	ಗಣೇಶ ಚತುರ್ಥಿ
28.09.2023	ಈದ್ ಮಿಲಾದ್
02.10.2023	ಗಾಂಧಿಜಯಂತಿ
23.10.2023	ಮಹಾನವಮಿ, ಆಯುಧಪೂಜೆ
24.10.2023	ವಿಜಯದಶಮಿ
01.11.2023	ಕನ್ನಡ ರಾಜ್ಯೋತ್ಸವ
14.11.2023	ಬಲಿಪಾಡ್ಯಮಿ, ದೀಪಾವಳಿ
30.11.2023	ಕನಕದಾಸ ಜಯಂತಿ
25.12.2023	ಕ್ರಿಸ್ಮಸ್

ಪರಿಮಿತ ರಜಾದಿನಗಳ ಪಟ್ಟಿ	
30.01.2023	ಮಧ್ವ ನವಮಿ
7.03.2023	ಷಬ್- ಎ- ಬರಾತ್
8.03.2023	ಹೋಳಿ ಹಬ್ಬ.
30.03.2023	ಶ್ರೀ ರಾಮನವಮಿ
18.04.2023	ಷಬ್-ಎ-ಖದರ್
21.04.2023	ಜಮಾತ್- ಉಲ್-ವಿದಾ
25.04.2023	ಶ್ರೀ ಶಂಕರಾಚಾರ್ಯ ಜಯಂತಿ, ಶ್ರೀ ರಾಮಾನುಜಾಚಾರ್ಯ ಜಯಂತಿ
05.5.2023	ಬುದ್ಧ ಪೂರ್ಣಿಮಾ
25.08.2023	ವರಮಹಾಲಕ್ಷ್ಮಿ ವ್ರತ
29.08.2023	ಋಗ್ ಉಪಕರ್ಮ, ತಿರು ಓಣಂ
30.08.2023	ಯಜುರ್ ಉಪಕರ್ಮ
31.08.2023	ಬ್ರಹ್ಮಶ್ರೀ ನಾರಾಯಣಗುರು ಜಯಂತಿ
6.09.2023	ಶ್ರೀ ಕೃಷ್ಣ ಜನ್ಮಾಷ್ಟಮಿ
8.09.2023	ಕನ್ಯಾ ಮರಿಯಮ್ಮ ಜಯಂತಿ
18.10.2023	ತುಲಾ ಸಂಕ್ರಮಣ
27.11.202	ಗುರುನಾನಕ್ ಜಯಂತಿ
28.11.2023	ಹುತ್ತರಿ ಹಬ್ಬ

ನೂತನ ವರ್ಷಾರಂಭ (1.01.2023), ದೇವರ ದಾಸಿಮಯ್ಯ ಜಯಂತಿ (26.03.2023), ವಿಶ್ವಕರ್ಮ ಜಯಂತಿ (17.09.2023) ಮತ್ತು ಕ್ರಿಸ್ಮಸ್ ಈವ್ (24.12.2023). ಭಾನುವಾರದಂದು ಹಾಗೂ ಹೋಲಿ ಸ್ಯಾಟರ್ ಡೇ (8.04.2023) ಎರಡನೇ ಶನಿವಾರದಂದು ಬರುವುದರಿಂದ, ಈ ರಜೆ ಪಟ್ಟಿಯಲ್ಲಿ ನಮೂದಿಸಿಲ್ಲ.


ಸೌರಮಾನ ಯುಗಾದಿ (14.04.2023) ಶುಕ್ರವಾರ ಡಾ॥ ಬಿ. ಆರ್. ಅಂಬೇಡ್ಕರ್ ಜಯಂತಿ, ಸ್ವರ್ಣಗೌರಿ ವ್ರತ (18.09.2023) ಸೋಮವಾರ ವರಸಿದ್ಧಿ ವಿನಾಯಕ ವ್ರತ ಹಾಗೂ ಅನಂತ ಪದ್ಮನಾಭ ವ್ರತ (28.09.2023) ಗುರುವಾರ ಈದ್-ಮಿಲಾದ್ ನಿಮಿತ್ತ ಘೋಷಿಸಿರುವ ಸಾರ್ವತ್ರಿಕ ರಜಾ ದಿನಗಳಂದು ಬರುವುದರಿಂದ ಈ ರಜೆ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧೀನ ಕಾರ್ಯದರ್ಶಿಯಾಗಿರುವ ಅಪೇಕ್ಷಾ ಸತೀಶ್ ಪವಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇನ್ನು 3.9.2023ರಂದು ಭಾನುವಾರ ಕೈಲ್ ಮುಹೂರ್ತ, 18-10-2023ರಂದು ತುಲಾ ಸಂಕ್ರಮಣ ಮತ್ತು 28-11-2023ರಂದು ಹುತ್ತರಿ ಹಬ್ಬವನ್ನು ಆಚರಿಸಲು ಕೊಡಗು ಜಿಲ್ಲೆಗೆ ಮಾತ್ರ ಅನ್ವಯವಾಗುವಂತೆ ಸ್ಥಳೀಯ ಸಾರ್ವತ್ರಿಕ ರಜೆಯನ್ನು ಘೋಷಿಸಲಾಗಿದೆ. 1-4-2023ರಂದು ವಾಣಿಜ್ಯ ಬ್ಯಾಂಕು ಮತ್ತು ಸಹಕಾರಿ ಬ್ಯಾಂಕ್‌ಗಳ ವಾರ್ಷಿಕ ಮುಕ್ತಾಯದ ದಿನ ಆಗಿರುವುದರಿಂದ ಅಂದು ಬ್ಯಾಂಕುಗಳಿಗೆ ಮಾತ್ರ ರಜೆ ಇರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೆಗಾ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ನ. 21-ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆಯಲ್ಲಿ ಡಾ. ನೀಲಕಂಠನ್ ಅವರ ಸ್ಮರಣಾರ್ಥ ನ.28ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ಗಂಟೆವರೆಗೆ ಮೆಗಾ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821-2472102 ಸಂಪರ್ಕಿಸಬಹುದು.

ಜಿಲ್ಲಾ ಕಾಂಗ್ರೆಸ್ ಸಹಕಾರ ವಿಭಾಗಕ್ಕೆ ನೇಮಕ



ಮೈಸೂರು, ನ21- ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಹಕಾರ ವಿಭಾಗದ ಜಿಲ್ಲಾ ಅಧ್ಯಕ್ಷರನ್ನಾಗಿ ನಾಗನಹಳ್ಳಿ ಉಮಾಶಂಕರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಕೆ.ಆರ್.ಪುರದಲ್ಲಿ ಡಾ.ಅಂಬೇಡ್ಕರ್ ಪುತ್ಥಳಿ ಅನಾವರಣ

ಶಿಕ್ಷಣದಿಂದ ಮಾತ್ರ ಶೋಷಿತ ಸಮುದಾಯಗಳ ಅಭಿವೃದ್ಧಿ: ಧ್ರುವನಾರಾಯಣ್

ಹೆಚ್.ಡಿ.ಕೋಟೆ, ನ.21– ಪ.ಜಾತಿಯಲ್ಲಿ 101 ಮತ್ತು ಪ.ಪಂಗಡದಲ್ಲಿ 54 ಜಾತಿಗಳಿದ್ದು, ಇದೀಗ ಮತ್ತಷ್ಟು ಜಾತಿಗಳನ್ನು ಸೇರಿಸಲಾಗುತ್ತಿದೆ. ಆದರೆ ಮೀಸಲಾತಿ ಪ್ರಮಾಣ ಮಾತ್ರ ಅಷ್ಟೇ ಇದೆ. ಹೀಗಾಗಿ ನಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಬೇಕು. ಆಗ ಮಾತ್ರ ಶೋಷಿತ ಸಮುದಾಯಗಳು ಮೇಲೆ ಬರಲು ಸಾಧ್ಯ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ತಿಳಿಸಿದರು.

ತಾಲೂಕಿನ ಕೆ.ಆರ್.ಪುರ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಅನಾವರಣಗೊಳಿಸಿ, ಬುದ್ಧ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಪ್ರಸ್ತುತ ಎಲ್ಲಾ ಸಮಾಜಗಳಿಗೂ ಸಂವಿಧಾನ ಮೀಸಲಾತಿ ನೀಡಿದೆ. ಈ ಹಿಂದೆ ಸ್ವಾಭಿಮಾನದ ಸಂಕೇತವಾಗಿರುವ ಅಂಬೇಡ್ಕರ್ ಅವರನ್ನು ದಲಿತ ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸಲಾಗಿತ್ತು. ಆದರೆ ಇಂದು ವಿಶ್ವಸಂಸ್ಥೆಯೇ ಅವರ ಜನ್ಮ ದಿನಾಚರಣೆಯನ್ನು ವಿಶ್ವಜ್ಞಾನಿ ದಿನಾಚರಣೆ ಎಂದು ಆಚರಿಸುವ ಮೂಲಕ ಅಂಬೇಡ್ಕರ್ ಪ್ರತಿಯೊಂದು ಸಮುದಾಯಕ್ಕೂ ಸೇರಿದವರು ಎಂದು ಸಾರಿದೆ ಎಂದರು.

ನಗರ ಪ್ರದೇಶದ ಮಕ್ಕಳು ಕೇವಲ ವಿದ್ಯಾಭ್ಯಾಸಕಷ್ಟೇ ಗಮನ ನೀಡುತ್ತಾರೆ. ಆದರೆ ಗ್ರಾಮೀಣ ಮಕ್ಕಳು ಕೆಲಸದ ಜೊತೆ ವಿದ್ಯಾಭ್ಯಾಸ ಮಾಡುವುದರಿಂದ ನಗರ ಪ್ರದೇಶದ ಮಕ್ಕಳ ಜೊತೆ ಸ್ಪರ್ಧೆಗೆ ಇಳಿಯುವುದು ಕಷ್ಟ, ಹೀಗಾಗಿ ಗ್ರಾಮೀಣ ಭಾಗದಲ್ಲಿ ದೇವಾಲಯಕ್ಕೆ ಬದಲು ಗ್ರಂಥಾಲಯ, ಶಾಲಾ ನಿರ್ಮಾಣಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು ಎಂದರು.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಎಸ್‌ಇಪಿ, ಟಿಎಸ್‌ಪಿ ಕಾನೂನು ತಂದು ಅನುಕೂಲ ಮಾಡಿಕೊಡಲಾಯಿತು. ವಾರ್ಷಿಕ 30 ಸಾವಿರ ಕೋಟಿ ಅನುದಾನ ನೀಡಲಾಗಿತ್ತು. ಪ.ಜಾತಿ, ಪ.ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ನೀಡಿತು. ಆದರೆ ಈಗಿನ ಸರ್ಕಾರ ವಿದ್ಯಾರ್ಥಿ ವೇತನ ನಿಲ್ಲಿಸಿ, ಶುಲ್ಕ ಹೆಚ್ಚಿಸಿದೆ. ಕೇಂದ್ರದಲ್ಲಿ 30 ಲಕ್ಷ ಉದ್ಯೋಗ ಖಾಲಿ ಇದ್ದರೂ ನೇಮಕ ಮಾಡಿಕೊಳ್ಳುತ್ತಿಲ್ಲ ಎಂದು ಆರೋಪಿಸಿದರು.

ಈ ವೇಳೆ ಗ್ರಾಮದ ಮುಖಂಡ ರತ್ನಾಕರ ಮಾತನಾಡಿ, ಗ್ರಾಮಕ್ಕೆ ಪದವಿಪೂರ್ವ ಕಾಲೇಜು, ಉತ್ತಮ ಕ್ರೀಡಾಂಗಣ ಮತ್ತು ಸುಸಜ್ಜಿತ ಗ್ರಂಥಾಲಯ ನಿರ್ಮಿಸಿಕೊಡುವಂತೆ ಮನವಿ ಮಾಡಿದರು.



ಕಾರ್ಯಕ್ರಮದಲ್ಲಿ ಅಂತರಸಂತೆ ಬುದ್ಧ ವಿಹಾರದ ಗೌತಮಿ ಬಂತೇಜೀ, ಶಾಸಕ ಅನಿಲ್ ಚಿಕ್ಕಮಾದು ತಾಯಿ ನಾಗಮ್ಮ, ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಮಮತ, ಬಿಜೆಪಿ ಮುಖಂಡ ಕೃಷ್ಣಸ್ವಾಮಿ, ಜೆಡಿಎಸ್ ಯುವ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ನಂಜನಗೂಡು ಕೆಪಿಸಿಸಿ ಉಸ್ತುವಾರಿ ಸೋಮೇಶ್, ಜಿಪಂ ಮಾಜಿ ಸದಸ್ಯ ರವಿ, ತಾಪಂ ಮಾಜಿ ಸದಸ್ಯ ರಾಜು, ಕಾಂಗ್ರೆಸ್ ಮುಖಂಡ ಪ್ರದೀಪ್, ಸತೀಶ್ ಗೌಡ, ಬಾಲಯ್ಯ, ಮುಖಂಡರಾದ ಶಿವು, ವಿಫುಲ್, ವಿನೋದ್, ಉದ್ಯಮಿ ಲಿಂಗರಾಜು, ರಾಜ್ಯಶಾಸ್ತ್ರ ಉಪನ್ಯಾಸಕ ಚಂದ್ರಪ್ಪ, ಅಂತರಸಂತೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹೇಶ್, ಜೀವಿಕ ಬಸವರಾಜು, ನಾಗಣ್ಣ, ಚಾಮರಾಜ, ಜಗದೀಶ್, ಶಿವಕುಮಾರ್, ಮಂಜು, ಅಬ್ದುಲ್ ರೆಹಮಾನ್, ಅಕ್ಬರ್, ದೇವರಾಜು, ನಂದಕುಮಾರ್, ಮಲ್ಲೇಶ್, ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ವಕೀಲ ಜವರಯ್ಯ, ಪುರಸಭೆ ಸದಸ್ಯ ಪ್ರೇಮ್‌ಕುಮಾರ್, ದಿನೇಶ್, ಶಫೀರ್, ಪೃಥ್ವಿರಾಜ್, ಭೈರೇಗೌಡ, ಪುತ್ಥಳಿ ಶಿಲ್ಪಿ ನಾಗೇಂದ್ರ ಇತರರಿದ್ದರು.



ಕಡೇ ಕಾರ್ತಿಕ ಸೋಮವಾರ

ಶ್ರೀಕಂಠೇಶ್ವರನ ಸನ್ನಿಧಿಗೆ ಹರಿದು ಬಂದ ಭಕ್ತ ಸಾಗರ

ನಂಜನಗೂಡು, ನ.21– ಕಡೇ ಕಾರ್ತಿಕ ಸೋಮವಾರದ ಪ್ರಯುಕ್ತ ದಕ್ಷಿಣಕಾಶಿ ಶ್ರೀಕಂಠೇಶ್ವರನ ದೇವಾಲಯಕ್ಕೆ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿ ಪುನೀತರಾದರು.

ಕಾರ್ತಿಕ ಮಾಸದ ಅಂಗವಾಗಿ ಭಾನುವಾರ ಸಂಜೆಯಿಂದಲೇ ಬಂದ ಭಕ್ತರು ಕಪಿಲಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿ ಸೋಮವಾರ ಮುಂಜಾನೆ 5 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಅಲ್ಲದೆ ಬೆಲ್ಲ, ಅಕ್ಕಿಯಿಂದ ತುಲಾಭಾರ ಸೇವೆ, ಉರುಳು ಸೇವೆ, ಈಡುಗಾಯಿ ಸೇವೆ, ಧೂಪ, ದೀಪಗಳ ಸೇವೆ ಸಲ್ಲಿಸಿ ದೇವಿಗೆ ಕುಂಕುಮಾರ್ಚನೆ, ಶ್ರೀಕಂಠೇಶ್ವರ ಸ್ವಾಮಿಗೆ ಬೆಳ್ಳಿ ಅಂಗಾಂಗಗಳನ್ನು ಹರಕೆ ಹುಂಡಿಗೆ ಹಾಕಿ ಶ್ರದ್ಧಾಭಕ್ತಿಯಿಂದ ಸೇವೆ ಸಲ್ಲಿಸಿ ಭಕ್ತಿ ಮೆರೆದರು.

ಕಡೇ ಕಾರ್ತಿಕ ಅಂಗವಾಗಿ ಶ್ರೀಕಂಠೇಶ್ವರಸ್ವಾಮಿಯನ್ನು ಚಿನ್ನದ ಕೊಳಗ ತೊಡಿಸಿ, ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಶ್ರೀಕಂಠೇಶ್ವರ ಸ್ವಾಮಿಯವರಿಗೆ ಪಂಚತೀರ್ಥಗಳ ಅಭಿಷೇಕ, ಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ಶಾಲಾನ್ನ ಅರ್ಪಣೆ, ಕಲ್ಲುಸಕ್ಕರೆ ಪೂಜೆಗಳನ್ನು ಸಾಂಗೋಪವಾಗಿ ನೆರವೇರಿಸಲಾಯಿತು. ನಂತರ ಮಹಾ ಮಂಗಳಾರತಿ ಮಾಡಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ದೇವಾಲಯದ ದಾಸೋಹ ಭವನದಲ್ಲಿ ಭಕ್ತರಿಗಾಗಿ ಅನ್ನ, ಸಾಂಬರ್, ಪಾಯಸ, ಪಲ್ಯ ವಿಶೇಷ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ದೇವಾಲಯದ ಎಇಓ ವೆಂಕಟೇಶಪ್ರಸಾದ್ ಮಾತನಾಡಿ, 70 ಸಾವಿರಕ್ಕೂ ಅಧಿಕ ಭಕ್ತರು ದೇವಾಲಯಕ್ಕೆ ಭೇಟಿ ನೀಡಿ ದರ್ಶನ ಪಡೆದಿದ್ದಾರೆ. ದೇವಾಲಯಕ್ಕೂ ಸಹ ಹೆಚ್ಚಿನ ಆದಾಯ ಬಂದಿದೆ ಎಂದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರ

'ಕೈ' ಟಿಕೆಟ್‌ಗಾಗಿ ಬೋಸ್, ಪ್ರಮುಲ್ ಕುಮಾರ್ ಅರ್ಜಿ



ಸುನೀಲ್‌ಬೋಸ್



ಪ್ರಮುಲ್ ಕುಮಾರ್

ತಿ.ನರಸೀಪುರ, ನ.21– ಮುಂಬರುವ ವಿಧಾನಸಭಾ ಚುನಾವಣೆಯ ತಿ.ನರಸೀಪುರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗಾಗಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪುತ್ರ ಸುನೀಲ್ ಬೋಸ್ ಮತ್ತು ಮಾಜಿ ವಿಧಾನ ಪರಿಷತ್ ಸದಸ್ಯ ದಿ.ಎನ್. ಮಂಜುನಾಥ್ ಪುತ್ರ ಎಂ.ಪ್ರಮುಲ್ ಕುಮಾರ್ ಅರ್ಜಿ ಸಲ್ಲಿಸಿದ್ದಾರೆ.

ಇದುವರೆಗೂ ತಿ.ನರಸೀಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸುವ ಮೂಲಕ ಶಾಸಕ, ಸಚಿವರಾಗಿ ಕೆಲಸ ಮಾಡುತ್ತಿದ್ದ ಡಾ.ಹೆಚ್.ಸಿ. ಮಹದೇವಪ್ಪ ಕ್ಷೇತ್ರ ಬಿಟ್ಟು ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಅರ್ಜಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಟಿಕೆಟ್ ಆಕಾಂಕ್ಷಿಗಳಾಗಿ ಇವರಿಬ್ಬರು ಅರ್ಜಿ ಸಲ್ಲಿಸಿದ್ದಾರೆ.

ಸುನೀಲ್ ಬೋಸ್ ತಮ್ಮ ತಂದೆ ಸ್ಥಾನ ತುಂಬಲು ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದಾರೆ. ಇತ್ತ ದಿ.ಎಂಎಲ್‌ಸಿ ಟಿ.ಎನ್.ನರಸಿಂಹಮೂರ್ತಿ ಅವರ ಮೊಮ್ಮಗ ಮತ್ತು ವಿಧಾನ ಪರಿಷತ್ ಮಾಜಿ ಸದಸ್ಯ ದಿ.ಎನ್.ಮಂಜುನಾಥ್ ಅವರ ಪುತ್ರ ಪ್ರಮುಲ್ ಕುಮಾರ್ ಪ್ರಬಲ ಆಕಾಂಕ್ಷಿಯಾಗಿ ಕಾಂಗ್ರೆಸ್‌ನಿಂದ ಅರ್ಜಿ ಸಲ್ಲಿಸಿದ್ದಾರೆ. ಪ್ರಮುಲ್ ಕುಮಾರ್ ತಮ್ಮ ತಾಯಿ ಆಶಾ ಮಂಜುನಾಥ್ ಅವರೊಂದಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಅವರ ಗಮನಕ್ಕೆ ತಂದು ಅರ್ಜಿ ಸಲ್ಲಿಸಿದ್ದಾರೆ ಎನ್ನಲಾಗಿದೆ. ಜೊತೆಗೆ ತಿ.ನರಸೀಪುರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಸಿದ್ದರಾಮಯ್ಯ ಸೂಚಿಸಿದ್ದಾರೆ ಎನ್ನಲಾಗಿದೆ.

ಸುನೀಲ್ ಬೋಸ್ ಈಗಾಗಲೇ ಕ್ಷೇತ್ರದಲ್ಲಿ ಜನರನ್ನು ಭೇಟಿ ಮಾಡುವ ಮೂಲಕ ಚುನಾವಣಾ ಕಣಕ್ಕೆ ಸಿದ್ಧತೆ ನಡೆಸಿದ್ದರೇ, ಪ್ರಮುಲ್ ಕುಮಾರ್ ಕೂಡ ಸದ್ದಿಲ್ಲದೆ ಕ್ಷೇತ್ರದ ಮುಖಂಡರು ಮತ್ತು ಕಾರ್ಯಕರ್ತರನ್ನು ಸಂಪರ್ಕಿಸುವ ಕಾರ್ಯ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಈ ಇಬ್ಬರು ಯುವ ನಾಯಕರು ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದು, ಯಾರಿಗೆ ಅದೃಷ್ಟ ಒಲಿಯಲಿದೆ ಎಂದು ಕಾದು ನೋಡಬೇಕಾಗಿದೆ.

ಹೊಸ ತಿರುಮಕೂಡಲಿನಲ್ಲಿ ಶ್ರೀಮಂಟೇಸ್ವಾಮಿ ದೇವಸ್ಥಾನ ಉದ್ಘಾಟನೆ

ತಿ.ನರಸೀಪುರ, ನ.21– ಜನರು ಧಾರ್ಮಿಕ ಚಿಂತನೆ ಹಾಗೂ ಸಾಮರಸ್ಯದಿಂದ ಬದುಕಲು ದೇಗುಲಗಳು ಅಗತ್ಯ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಹೊಸ ತಿರುಮಕೂಡಲಿನಲ್ಲಿ ಶ್ರೀಮಂಟೇಸ್ವಾಮಿ ದೇವಸ್ಥಾನ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮಗಳಲ್ಲಿ ದೇಗುಲಗಳಿದ್ದರೆ ಜನರಲ್ಲಿ ಭಯ, ಭಕ್ತಿ ಶ್ರದ್ಧೆ ಮೂಡುತ್ತದೆ. ಧಾರ್ಮಿಕ ನಂಬಿಕೆಗಳು ಜನರನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುತ್ತವೆ. ಈ ಹಿನ್ನೆಲೆಯಲ್ಲಿ ದೇವಾಲಯಗಳು ಪ್ರಸ್ತುತವಾಗಿದೆ. ಗ್ರಾಮಸ್ಥರು ಉತ್ತಮ ದೇವಾಲಯ ಮಾಡಿದ್ದಾರೆ. ಅದರ ಸ್ವಚ್ಛತೆ ಹಾಗೂ ದೈನಂದಿನ ಪೂಜಾ ಕೈಂಕರ್ಯಗಳನ್ನು ಜನರ ಒಳಿತಿಗಾಗಿ ನಿರಂತರವಾಗಿ ಮಾಡುವಂತೆ ಸಲಹೆ ನೀಡಿದರು.

ಶಾಸಕ ಎಂ. ಅಶ್ವಿನ್ ಕುಮಾರ್ ಮಾತನಾಡಿ, ಗ್ರಾಮದಲ್ಲಿ ಎಲ್ಲರೂ ಸೇರಿ ಉತ್ತಮ ದೇವಾಲಯ ನಿರ್ಮಿಸಿದ್ದೀರಿ. ನನ್ನಿಂದ ಸಹಾಯ ಬೇಕಾದರೆ ಮುಕ್ತವಾಗಿ ಭೇಟಿ ಮಾಡುವಂತೆ ತಿಳಿಸಿದರು.



ದೇಗುಲ ಉದ್ಘಾಟನೆ ಹಿನ್ನಲೆಯಲ್ಲಿ ಗ್ರಾಮದಲ್ಲಿ ಶ್ರೀಮಂಟೇಸ್ವಾಮಿ ದೇವತಾ ಪ್ರತಿಷ್ಠಾಪನಾ ಮಹೋತ್ಸವ ಪೂಜಾ ಕೈಂಕರ್ಯ ಹಾಗೂ ಕಂಡಾಯ ಮೆರವಣಿಗೆ ಹಮ್ಮಿಕೊಳ್ಳಲಾಯಿತು. ಬಳಿಕ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು.

ಕಾರ್ಯಕ್ರಮದಲ್ಲಿ ರಾಜಗುರು ಬೊಪ್ಪೇಗೌಡನಪುರದ ಚೇತನ್‌ರಾಜ್ ಅರಸ್ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಸೋಮನಾಥನಂದ ನಾಥ ಸ್ವಾಮೀಜಿ, ಒಕ್ಕಲಿಗರ ಸಂಘದ ಅಧ್ಯಕ್ಷ ಪಿ.ಸ್ವಾಮಿನಾಥ ಗೌಡ, ಯಜಮಾನರಾದ ಪಿ.ಚಂದ್ರೇಗೌಡ, ಮಹದೇವಸ್ವಾಮಿ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್ ಹಾಗೂ ತಿರುಮಕೂಡಲು ಗ್ರಾಮಸ್ಥರು ಹಾಜರಿದ್ದರು.

ಜಿಲ್ಲಾ ಮಟ್ಟದ ಮಕ್ಕಳ ಕಸಾಪಗೆ ತನುಜ ಸಮ್ಮೇಳನಾಧ್ಯಕ್ಷೆ



ಹುಣಸೂರು, ನ.21– ಜಿಲ್ಲಾ ಮಟ್ಟದ ಮಕ್ಕಳ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನಾಧ್ಯಕ್ಷೆಯಾಗಿ ನಗರದ ಟ್ಯಾಲೆಂಟ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ತನುಜ ಆಯ್ಕೆಯಾಗಿದ್ದಾರೆ.

ಕುವೆಂಪು ಮಕ್ಕಳ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಟ್ಯಾಲೆಂಟ್ ಶಿಕ್ಷಣ ಸಂಸ್ಥೆ ವತಿಯಿಂದ ಟ್ಯಾಲೆಂಟ್ ಸಂಸ್ಥೆ ಆವರಣದಲ್ಲಿ ನ.24 ಮತ್ತು 25 ರಂದು ಜಿಲ್ಲಾ ಮಟ್ಟದ ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡಿದ್ದು ಸಮ್ಮೇಳನಾಧ್ಯಕ್ಷರನ್ನಾಗಿ ತನುಜಾ ಅವರನ್ನು ತಾಲೂಕಿನ ಸಾಹಿತಿಗಳು ಆಯ್ಕೆ ಮಾಡಿದ್ದಾರೆ ಎಂದು ಟ್ಯಾಲೆಂಟ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಮಂಜುನಾಥ್ ತಿಳಿಸಿದ್ದಾರೆ.



ಹೆಚ್.ಡಿ.ಕೋಟೆ ತಾಲೂಕಿನ ಹೊಸಹಳ್ಳಿ ಹಾಡಿಯಲ್ಲಿ ಗ್ರಾಮ ವಾಸ್ತವ್ಯ ಮಾಡಿದ್ದ ಕಂದಾಯ ಸಚಿವ ಆರ್.ಅಶೋಕ್ ಜೇನು ಕುರುಬರ ಸಮುದಾಯಕ್ಕೆ ಸೇರಿದ ಬಸವರಾಜ್ ಮನೆಯಲ್ಲಿ ಬೆಳಗಿನ ಉಪಾಹಾರವಾಗಿ ನೂರೆ ಗೆಣಸು, ತಾವಟೆ ಗೆಣಸು, ಮರಗೆಣಸು, ಕುಂಬಳ ಸೊಪ್ಪು, ಅಣ್ಣೆ, ತುಂಬೆ, ಗಣಕಲು ಸೊಪ್ಪು, ಜೇನು ತುಪ್ಪ ಸೇರಿದಂತೆ ಹಾಡಿ ಜನರ ಆಹಾರ ಸೇವಿಸಿದರು. ಈ ವೇಳೆ ಡಿಸಿ ಡಾ. ರಾಜೇಂದ್ರ, ಬಿಜೆಪಿ ಮುಖಂಡ ಅರುಣ್ ಕುಮಾರ್‌ಗೌಡ, ವಿಜಯ್‌ಗೌಡ ಇತರರಿದ್ದರು.

ಕೆಂಪೇಗೌಡನಕೊಪ್ಪಲಲ್ಲಿ ಕನ್ನಡ ರಾಜ್ಯೋತ್ಸವ

ಬೆಟ್ಟದಪುರ, ನ.21– ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಸರ್ಕಾರ ಆಡಳಿತ ಭಾಷೆಯಾಗಿ ಕನ್ನಡವನ್ನು ಜಾರಿಗೆ ತರಬೇಕು ಎಂದು ಮಾಜಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಇಲ್ಲಿಗೆ ಸಮೀಪದ ಕಿತ್ತೂರು ಗ್ರಾಪಂ ವ್ಯಾಪ್ತಿಯ ಕೆಂಪೇಗೌಡನಕೊಪ್ಪಲು ಗ್ರಾಮದಲ್ಲಿ ಕೆಂಪೇಗೌಡ ಯುವ ಬಳಗ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ನ್ಯಾಯಾಲಯ, ಬ್ಯಾಂಕು ಸೇರಿದಂತೆ ಎಲ್ಲಾ ರಂಗಗಳಲ್ಲೂ ಕನ್ನಡದಲ್ಲಿ ವ್ಯವಹರಿಸಬೇಕು. ನಮ್ಮ ಭಾಷೆ ಮೇಲೆ ನಮಗೆ ಅಭಿಮಾನವಿರಬೇಕು. ಆಗ ಮಾತ್ರ ಕನ್ನಡ ಭಾಷೆ ಉಳಿಸಿ ಬೆಳೆಸಲು ಸಾಧ್ಯ ಎಂದರು. ಗ್ರಾಪಂ ಸದಸ್ಯ ಕೆ.ಎಸ್.



ದಿನೇಶ್ ಮಾತನಾಡಿ, ನವೆಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವ ಮಾಡುತ್ತೇವೆ. ಆದರೆ ನಿರಂತರವಾಗಿ ಕನ್ನಡ ಜಾಗೃತಿ ಕೆಲಸಗಳು ಆಗಬೇಕು. ಕನ್ನಡ ನಾಡು, ನೆಲ ಜಲ ವಿಚಾರ ಬಂದಾಗ ನಾವೆಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕು. ನಮ್ಮೂರಿನಲ್ಲಿ ಆಂಗ್ಲ ಮಾಧ್ಯಮ ಶಾಲೆಗಳಿಂದ ಮಕ್ಕಳನ್ನು ಬಿಡಿಸಿ ಕನ್ನಡ ಶಾಲೆಗೆ ಸೇರಿಸಿರುವುದು ಹೆಮ್ಮೆಯ ವಿಚಾರ ಎಂದರು.

ಸಮಾರಂಭಕ್ಕೂ ಮುನ್ನ ಕಿತ್ತೂರು ಗ್ರಾಮದ ಪ್ರಮುಖ ಬೀದಿಗಳಲ್ಲಿ ತೆರೆದ ವಾಹನದಲ್ಲಿ ಕನ್ನಡಾಂಬೆ ಭಾವಚಿತ್ರ ಇಟ್ಟು ಮೆರವಣಿಗೆ ನಡೆಸಲಾಯಿತು. ಇದೇ ವೇಳೆ ಹಲವು ವರ್ಷಗಳಿಂದ ರಾಜಕೀಯ ವೈರಿಗಳಾಗಿದ್ದ ದಿ.ಮಾಜಿ ಶಾಸಕ ಕೆ.ಎಸ್. ಕಾಳಮರಿಗೌಡ ಸಹೋದರ ಚಂದ್ರೇಗೌಡ, ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕೆ.ಎಸ್. ಮಂಜುನಾಥ್, ಮಾಜಿ ಸಚಿವ ಕೆ.ವೆಂಕಟೇಶ್, ತೆರೆದ ವಾಹನದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದು ವಿಶೇಷವಾಗಿತ್ತು.

ಜಿಪಂ ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕೆ.ಎಸ್.ಮಂಜುನಾಥ್, ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ಮಾಜಿ ಸದಸ್ಯ ಡಿ.ಟಿ.ಸ್ವಾಮಿ, ಗ್ರಾಪಂ ಸದಸ್ಯರಾದ ಕೆ.ಎಸ್. ದಿನೇಶ್‌ಗೌಡ, ಜಗದೀಶ್, ದೀಪು, ಪಿಎಸಿಎಸ್ ಅಧ್ಯಕ್ಷ ಸಚಿನ್, ಜೆಡಿಎಸ್ ಯುವ ಮುಖಂಡ ಗಗನ್, ಕೆ.ವೆಂಕಟೇಶ್ ಸಹೋದರಿ ಶಾರದಮ್ಮ, ಯಜಮಾನ್ ಕೆ.ಪಿ.ರವಿಕುಮಾರ್, ಕೆಂಪೇಗೌಡ ಯುವ ಬಳಗದ ಪದಾಧಿಕಾರಿಗಳು ಮಹಿಳೆಯರು ಗ್ರಾಮಸ್ಥರು ಹಾಜರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಹೊನ್ನಾಪುರ ಗ್ರಾಮದಲ್ಲಿ 16 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಅಂಗನವಾಡಿ ಕೇಂದ್ರವನ್ನು ಶಾಸಕ ಕೆ.ಮಹದೇವ್ ಉದ್ಘಾಟಿಸಿದರು. ಈ ವೇಳೆ ಜೆಡಿಎಸ್ ಅಧ್ಯಕ್ಷ ಅಣ್ಣಯಶೆಟ್ಟಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಮಮತಾ, ಮೇಲ್ವಿಚಾರಕಿ ಶ್ವೇತಾ, ಬೆಟ್ಟದಪುರ ಮೇಲ್ವಿಚಾರಕಿ ಸವಿತಾ, ನಿರ್ಮಿತಿ ಕೇಂದ್ರದ ಇಂಜಿನಿಯರ್ ರಕ್ಷಿತ್, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಾರ್ವಜನಿಕರು ಹಾಜರಿದ್ದರು.

ಬೊಮ್ಮನಾಯಕನಹಳ್ಳಿಯಲ್ಲಿ ಡೇರಿ ಕಟ್ಟಡಕ್ಕೆ ಭೂಮಿ ಪೂಜೆ

ತಿ.ನರಸೀಪುರ, ನ.21– ಗುಣಮಟ್ಟದ ಹಾಲಿಗೆ ಮಾರುಕಟ್ಟೆಯಲ್ಲಿ ನಿಖರ ಬೆಲೆ ಇರುವುದರಿಂದ ಹಳ್ಳಿಗಾಡಿನ ರೈತರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ಬೊಮ್ಮನಾಯಕನಹಳ್ಳಿಯಲ್ಲಿ ಸೋಮವಾರ 10.50 ಲಕ್ಷ ರೂ. ವೆಚ್ಚದ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹವಾಮಾನ ವೈಪರಿತ್ಯ ಸೇರಿದಂತೆ ಹಲವು ವೇಳೆ ರೈತರು ಕಷ್ಟಪಟ್ಟು ಬೆಳೆದ ಬೆಳೆ ನಾಶವಾಗುವುದರಿಂದ ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಹಾಲಿಗೆ ನಿಖರ ಬೆಲೆ ಖಚಿತವಾಗಿ ಸಿಗುವುದರಿಂದ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತಿದೆ ಎಂದರು.

ಊರಿಗೊಂದು ಸರ್ಕಾರಿ ಶಾಲೆ ಇರುವಂತೆ ಪ್ರತಿಯೊಂದು ಹಳ್ಳಿಯಲ್ಲೂ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಇರಬೇಕು. ಅದಕ್ಕಾಗಿ ಲಾಭದಾಯಕವಾಗಿ ನಡೆಯುತ್ತಿರುವ ಬೊಮ್ಮನಾಯಕನಹಳ್ಳಿ ಹಾಲು ಉತ್ಪಾದಕ ಸಹಕಾರ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕೆಎಂಎಫ್‌ನಿಂದ 4.50 ಲಕ್ಷ ಹಾಗೂ ಮೈಮುಲ್ ನಿಂದ 6 ಲಕ್ಷ ರೂ. ಅನುದಾನ ನೀಡಿದ್ದೇವೆ. ಕಟ್ಟಡ ನಿರ್ಮಾಣದ ಬಳಿಕ ಮುಂದುವರೆದ ಕಾಮಗಾರಿಗೆ ಹೆಚ್ಚಿನ ಅನುದಾನವನ್ನು ಆಡಳಿತ ಮಂಡಳಿ ನಿರ್ದೇಶಕರು ಕಲ್ಪಿಸಿಕೊಡಲು ಬದ್ಧ ಎಂದರು.



ಮೈಮುಲ್ ನಿರ್ದೇಶಕ ಸಿ.ಓಂಪ್ರಕಾಶ್ ಮಾತನಾಡಿ, ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಅಭಿವೃದ್ಧಿಗೆ ಗ್ರಾಮದ ಜನರು ಗುಂಪುಗಾರಿಕೆ ಬಿಟ್ಟು ಒಗ್ಗೂಡಬೇಕು. ನಿತ್ಯ ಬಳಕೆಯಾಗುವ ಸಂಘದ ಕಟ್ಟಡ ನಿರ್ಮಾಣಕ್ಕೆ ಶಾಸಕರು ಹಾಗೂ ಸಂಸದರ ಅನುದಾನ ಪಡೆಯಬೇಕು. ರಾಜ್ಯದಲ್ಲಿ ಪ್ರತಿದಿನ 80 ಲಕ್ಷ ಹಾಲು ಉತ್ಪಾದನೆಯಾಗುತ್ತಿದೆ. ಗ್ರಾಮದಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಆರ್.ಚೆಲುವರಾಜು ಹಾಗೂ ಉಮಾಶಂಕರ್ ಕಾಳಜಿ ವಹಿಸಿ ಹೆಚ್ಚಿನ ಅನುದಾನವನ್ನು ಒಕ್ಕೂಟದಿಂದ ಕಲ್ಪಿಸಿದ್ದಾರೆ. ಹಾಲು ಉತ್ಪಾದಕ ರೈತರ ಮಕ್ಕಳ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ನೆರವಾಗಲು ವಿದ್ಯಾರ್ಥಿನಿಯರ ನಿಲಯ ತೆರೆಯಲಾಗಿದೆ ಎಂದರು.

ಈ ವೇಳೆ ಒಕ್ಕೂಟದ ವ್ಯವಸ್ಥಾಪಕ ಡಾ.ಸಣ್ಣತಮ್ಮೇಗೌಡ, ಉಪ ವ್ಯವಸ್ಥಾಪಕ ಡಾ.ಸಿ.ದಿವಾಕರ್, ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಸಂಘದ ಅಧ್ಯಕ್ಷ ಬಸವರಾಜು, ಉಪಾಧ್ಯಕ್ಷ ಲಿಂಗಯ್ಯ, ನಿರ್ದೇಶಕರಾದ ಕಪನಿ ಗೌಡ, ಗುರುಮಲ್ಲಯ್ಯ, ನಿಂಗಣ್ಣ, ಶಂಕರ, ಸಿದ್ದಯ್ಯ, ರಾಜೇಶ್, ರೇವಣ್ಣ, ಕಾರ್ಯನಿರ್ವಾಹಕ ಬಿ.ಎಂ.ಗವಿಯ, ಹಾಲು ಪರೀಕ್ಷಕ ಪುನೀತ್, ಸಹಾಯಕ ಪುಟ್ಟಮಲ್ಲ, ಮುಖಂಡರಾದ ಬಿ.ಪುಟ್ಟಬುದ್ಧಿ, ಕೂಸಪ್ಪ ಚೆಲುವರಾಜು, ಪುಟ್ಟಮಾದಯ್ಯ, ಬಟ್ಟಾಳಿಗೆಹುಂಡಿ ಪುಟ್ಟಮಲ್ಲಯ್ಯ ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಕಾಂತಾರ (ಕ): ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

ಸ್ಕ್ರೀನ್ 2 ಮಠ (ಕ): ಬೆ.10ಕ್ಕೆ, ಅಬ್ಬರ (ಕ): ಮ.1.05ಕ್ಕೆ, ರಾ.10.05ಕ್ಕೆ, ಕಾಲಗ ತಲೈವನ್ (ತ): ಸಂ.4ಕ್ಕೆ, ಉಂಚೈ (ಹಿಂ): ಸಂ.6.55ಕ್ಕೆ.

ಸ್ಕ್ರೀನ್ 3 ಗಂಧದ ಗುಡಿ (ಕ): ಬೆ.10.05ಕ್ಕೆ, ಮ.12.05ಕ್ಕೆ, ಮ.2.10ಕ್ಕೆ, ಯಶೋಧಾ (ತೆ): ಸಂ.4.15ಕ್ಕೆ, ದೃಶ್ಯಂ–2 (ಹಿಂ): ರಾ.7.05ಕ್ಕೆ, ರಾ.10ಕ್ಕೆ.

ಸ್ಕ್ರೀನ್ 4 ದೃಶ್ಯಂ–2 (ಹಿಂ): ಬೆ.10.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ದೃಶ್ಯಂ–2 (ಹಿಂ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ

ಸ್ಕ್ರೀನ್ 2 ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಸ್ಕ್ರೀನ್ 3 ಮಠ (ಕ): ಬೆ.11.30ಕ್ಕೆ, ಖಾಸಗಿ ಪುಟಗಳು (ಕ): ಮ.2.35ಕ್ಕೆ, ಅಬ್ಬರ (ಕ): ಸಂ.5ಕ್ಕೆ, ಗಂಧದ ಗುಡಿ (ಕ): ರಾ.8ಕ್ಕೆ, ಕಾಲಗ ತಲೈವನ್ (ತ): ರಾ.10.10ಕ್ಕೆ.

ಸ್ಕ್ರೀನ್ 4 ದೃಶ್ಯಂ–2 (ಹಿಂ): ಬೆ.10.45ಕ್ಕೆ, ರಾ.10.30ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.5ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಅಬ್ಬರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೃಶ್ಯಂ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗಂಧದ ಗುಡಿ (ಕ) ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಾನ್ ಮಿರುಗಮ್ಮೈ ಮಾರಾ (ತ)	2 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಅಬ್ಬರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಬ್ಬರ (ಕ)	4 ಪ್ರದರ್ಶನಗಳು
ಪ್ರಭಾ	
ದಿಲ್ ಪಸಂದ್ (ಕ)	4 ಪ್ರದರ್ಶನಗಳು

ಉತ್ತಮ ಕಾರ್ಯ ಮಾಡಲು ದೈವಕೃಪೆ ಬೇಕು

ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ



ಹುಣಸೂರು, ನ.21– ಉತ್ತಮ ಕಾರ್ಯ ಮಾಡಲು ದೇವರ ಕೃಪೆ, ಆಶೀರ್ವಾದ ಬೇಕು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಕಲ್ಲಹಳ್ಳಿಯಲ್ಲಿ ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ಬಸವೇಶ್ವರ ಮಹದೇಶ್ವರ ತೆಪ್ಪೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಮ್ಮಲ್ಲಿ ಭಕ್ತಿ ಮತ್ತು ಶ್ರದ್ಧೆ ಎರಡೂ ಸಮ್ಮಿಳಿತವಾಗಿದ್ದು, ದೇವರು ನಮಗೆ ಮುಂದಿನ ದಿನಗಳಲ್ಲಿ ಉತ್ತಮ ಜೀವನ ನೀಡಲಿದ್ದಾನೆ. ಯಾರೂ ಸಹ ಯಾವುದೇ ವಿಚಾರಕ್ಕೆ ತಲೆಕೆಡಿಸಿಕೊಳ್ಳದೆ ಉತ್ತಮ ಕಾರ್ಯದಲ್ಲಿ ತೊಡಗಬೇಕು ಎಂದರು.

ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ನಟರಾಜಸ್ವಾಮಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಧಾರ್ಮಿಕ ಕೈಂಕರ್ಯಗಳು ನಡೆದು ಮಕ್ಕಳು ದುಶ್ಚಟಗಳಿಗೆ ಬಲಿಯಾಗದೆ ಸುಸಂಸ್ಕೃತ ಗ್ರಾಮ ಅಭಿವೃದ್ಧಿ ಮಾಡಲು ಎಲ್ಲರೂ ಸಹಕಾರ ನೀಡಬೇಕೆಂದು ತಿಳಿಸಿದರು. ಸಮಾರಂಭದಲ್ಲಿ ಉಕ್ಕಿನಕಂತೆ ಮಾದಳ್ಳಿ ಮಠ ಸಾಂಬ ಸದಾಶಿವ ಸ್ವಾಮೀಜಿ, ಕೆಎಂಎಫ್ ನಿರ್ದೇಶಕ ಕೆ.ಎಸ್.ಕುಮಾರ್, ಸತೀಶ್, ಪಾಪಣ್ಣ, ದೊಡ್ಡಹೆಜ್ಜೂರು ಗ್ರಾಂಪಂ ಅಧ್ಯಕ್ಷ ಸುಭಾಷ್, ಬಸವಣ್ಣ, ವಿಷಕಂಠಪ್ಪ, ಶಿವಣ್ಣ ಸಾವಿರಾರು ಭಕ್ತರು ಇದ್ದರು.

ಸಿದ್ದಯ್ಯ ನಿಧನ



ಮಲ್ಕುಂಡಿ, ನ.21– ಇಲ್ಲಿಗೆ ಸಮೀಪದ ಹರದನಹಳ್ಳಿ ಗ್ರಾಮದ ನಿವಾಸಿ ಸಿದ್ದಯ್ಯ(105) ಸೋಮವಾರ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸ್ವಾಮಿಗೌಡ



ಹೆಚ್.ಡಿ.ಕೋಟೆ, ನ.21– ತಾಲೂಕಿನ ಕಣಿಯನಹುಂಡಿ ಗ್ರಾಮದ ನಿವಾಸಿ ಹಾಗೂ ಮೈಮುಲ್ ನಿರ್ದೇಶಕ ಈರೇಗೌಡರ ಚಿಕ್ಕಪ್ಪನ ಮಗ ಸ್ವಾಮಿಗೌಡ(48) ಸೋಮವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ತೋಟದ ಮನೆಯಲ್ಲಿ ಮಂಗಳವಾರ ನಡೆಯಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಸಂತಸದ ಹೊನಲು ಹರಿಸಿದ 'ದೀಪಧ್ವನಿ' ಸಾಂಸ್ಕೃತಿಕ ಕಾರ್ಯಕ್ರಮ


ಖ್ಯಾತ ಗಾಯಕಿ ಎಂ.ಡಿ.ಪಲ್ಲವಿ ಅವರಿಂದ ಗಾನಸುಧೆ


ರಘುಲೀಲಾ ಸಂಗೀತ ಮಂದಿರದ ವಿದ್ಯಾರ್ಥಿಗಳಿಂದ ನಗರ ಸಂಕೀರ್ತನೆ

ಮೈಸೂರು, ನ21(ಎಂಕೆ)– ಸುಂದರ ಮುಸ್ಸಂಜೆಯಲಿ ಬೆಳಗಿದ 'ದೀಪಧ್ವನಿ' ಎಲ್ಲರ ಮನೆ–ಮನಗಳಲ್ಲಿ ಸಂತೋಷದ ಹೊನಲು ಚೆಲ್ಲಿತು..

ಮೈಸೂರಿನ ವಿಜಯನಗರ ರೈಲ್ವೆ ಬಡಾವಣೆಯ ಮೈದಾನದ ರಂಗಮಂಟಪದಲ್ಲಿ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಕನ್ನಡ ರಾಜ್ಯೋತ್ಸವ ಹಾಗೂ ಕಡೇ ಕಾರ್ತಿಕ ಸೋಮವಾರದ ಅಂಗವಾಗಿ ಆಯೋಜಿಸಿದ್ದ 'ದೀಪಧ್ವನಿ' ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮ ಬಡಾವಣೆಯ ನಿವಾಸಿಗಳ ಮನಸ್ಸಿಗೆ ಮುದ ನೀಡಿತು.

ವಿಜಯನಗರ ರೈಲ್ವೆ ಬಡಾವಣೆಯ 2,3,4,5 ಮತ್ತು 6ನೇ ಅಡ್ಡರಸ್ತೆಗಳಲ್ಲಿ ಪಂಜಿನ ಬೆಳಕಿನ ನಡುವೆ ವಿದುಷಿ ಸುನೀತಾ ಚಂದ್ರಕುಮಾರ್ ನೇತೃತ್ವದಲ್ಲಿ ಸಾಗಿದ ರಘುಲೀಲಾ ಸಂಗೀತ ಮಂದಿರದ ವಿದ್ಯಾರ್ಥಿಗಳ 'ನಗರ ಸಂಕೀರ್ತನಾ' ಮೆರವಣಿಗೆ ಬಡಾವಣೆಗೆ ಬೆಳಕಿನ ಹಬ್ಬದ ಮೆರಗು ತಂದಿತಲ್ಲದೆ ನಿವಾಸಿಗಳ ಎದೆಯಲ್ಲಿ ಸಂಗೀತ ಸುಧೆಯ ಇಂಪು ಗುನುಗುವಂತೆ ಮಾಡಿತು.

ಕಂಸಾಳೆ ತಾಳವಾದ್ಯಗಳ ನಾದಕ್ಕೆ ಅನುಗುಣವಾಗಿ ಶಾಸ್ತ್ರೀಯ ಸಂಗೀತ, ಭರತನಾಟ್ಯ ಪ್ರದರ್ಶನ ಮನೆ ಮಂದಿಯ ಮನ ಸೆಳೆಯಿತು. 'ಅಸತೋಮ ಸದ್ಗಮಯ', 'ಗುರು ಬ್ರಹ್ಮ', 'ನಮಸ್ತೆ ಶಾರದಾದೇವಿ', 'ಪಾಲಿಸಯ್ಯ ಮಹಾಗಣಪತಿ', 'ನಿನ್ನ ಕಣ್ಣ ಕಡಗೊಲಿಂದ', 'ಅಂಭಿಕಾತನಯ ನಿನ್ನ ನಂಬಿ', 'ಭಾಗ್ಯದ ಲಕ್ಷ್ಮಿ ಬಾರಮ್ಮ' ಸೇರಿದಂತೆ ಹತ್ತು ಹಲವು ಹಾಡುಗಳನ್ನು ಹಾಡುತ್ತಾ, ಹೆಜ್ಜೆ ಹಾಕುತ್ತಾ ಸಾಗಿದ ಸಂಕೀರ್ತನೆ ಬಡಾವಣೆಯ ನಿವಾಸಿಗಳನ್ನು ತನ್ನತ್ತ ಸೆಳೆಯಿತು. ಹಾಗೆಯೇ ಸಂಕೀರ್ತನೆಯ ಸಂಗೀತ ಸೊಬಗಿಗೆ ಮಾರುಹೋದ ಮಹಿಳೆಯರು, ಮಕ್ಕಳು ಕೈಯಲ್ಲಿ ದೀಪಗಳನ್ನು ಹಿಡಿದು ಮೆರವಣಿಗೆಯಲ್ಲಿ ಭಾಗವಹಿಸಿ ಸಂಭ್ರಮವನ್ನು ಹಿಮ್ಮಡಿಗೊಳಿಸಿದರು.

ಎಂ.ಡಿ.ಪಲ್ಲವಿ ಗಾನ ಮೋಡಿ: ನಗರ ಸಂಕೀರ್ತನೆ ಬಳಿಕ ವೇದಿಕೆಯಲ್ಲಿ ಗಾಯನ ಸುಧೆ ನಡೆಸಿಕೊಟ್ಟ ಖ್ಯಾತ ಗಾಯಕಿ ಎಂ.ಡಿ.ಪಲ್ಲವಿ, ತಮ್ಮ ಅಮೋಘ ಕಂಠಸಿರಿಯಿಂದ ಮೋಡಿ ಮಾಡಿದರು. ಆದಿಕವಿ ಪಂಪ ರಚಿತ 'ಸೊಬಗಿಸಿ ಬಂದ ಮಾಮರನೆ', ವಚನಕಾರರ 'ನಿಮ್ಮ ಶರಣ ಶರಣೆಂಬುದ ಕರುಣಿಸು', ಪುರಂದರದಾಸರ 'ದಾರಿ ಯಾವುದಯ್ಯ ವೈಕುಂಠಕ್ಕೆ', ಕುವೆಂಪು ರಚಿತ ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು' ಹಾಗೂ ಮತಿನರ 'ಕನ್ನಡ ಉಳಿಸಿ ಕನ್ನಡ ಬೆಳೆಸಿ ಕನ್ನಡವನ್ನೇ ಬಳಸಿ' ಎಂಬಿತ್ಯಾದಿ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ನೆರೆದಿದ್ದ ಅಪಾರ ಜನರ ಮನಗೆದ್ದರು.

> ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್‌ನಿಂದ ಈ ವರ್ಷ ಸ್ನೇಹಿತರೊಡಗೂಡಿ 'ದೀಪಧ್ವನಿ' ಸಾಂಸ್ಕೃತಿಕ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಿದುಷಿ ಸನೀತಾ ಚಂದ್ರಕುಮಾರ್ ಅವರಿಂದ ನಗರ ಸಂಕೀರ್ತನೆ ಹಾಗೂ ಗಾಯಕಿ ಎಂ.ಡಿ.ಪಲ್ಲವಿ ಅವರ ಗಾನ ಸುಧೆ ಆಲಿಸಲು ಬಡಾವಣೆಯ ನಿವಾಸಿಗಳು ನಿರೀಕ್ಷೆಗೂ ಮೀರಿ ಆಗಮಿಸಿರುವುದು ಸಂತೋಷವಾಗಿದೆ
> – ಕೆ.ವಿ.ಶ್ರೀಧರ್, ನಗರಪಾಲಿಕೆ ಸದಸ್ಯ

ಅವರೊಂದಿಗೆ ಗಾಯನದಲ್ಲಿ ವಿನಯ್, ತಬಲದಲ್ಲಿ ಮಧುಸೂದನ್, ಡೊಲಕ್‌ನಲ್ಲಿ ಸತ್ಯಮೂರ್ತಿ, ರಿದಂಪ್ಯಾಡ್‌ನಲ್ಲಿ ವಾದಿ ಹಾಗೂ ಕೀಬೋರ್ಡ್ ವಾದನದಲ್ಲಿ ಶಬ್ಬಿರ್ ಅಹಮದ್ ಉತ್ತಮ ಸಾಥ್ ನೀಡಿದರು.

ಪ್ರಪಂಚದ ಸುಂದರ ನಗರ ಮೈಸೂರು: ದೀಪಧ್ವನಿ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ ಬಳಿಕ ವಾಗ್ಮಿ ಪ್ರೊ.ಕೃಷ್ಣೇಗೌಡ ಮಾತನಾಡಿ, ಮೈಸೂರು ಪ್ರಪಂಚದಲ್ಲಿಯೇ ಬಹಳ ಸುಂದರ ನಗರ. ಇಲ್ಲಿನ ಬದುಕಿನಲ್ಲಿ, ಜೀವನ ವಿಧಾನದಲ್ಲಿ ಸೌಂದರ್ಯವಿದೆ ಅಲ್ಲದೆ ಜಗತ್ತಿನಲ್ಲಿಯೇ 18 ವಿಷಯಗಳಿಗೆ ಅಂಟಿಕೊಂಡಿರುವ ಏಕೈಕ ನಗರ ಮೈಸೂರು. ಇದಕ್ಕೆ ಮುಖ್ಯ ಕಾರಣರು ಮೈಸೂರು ಮಹಾರಾಜರು. ಅವರನ್ನು ಸದಾ ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದರು.

ಭೂಮಿಗೆ ಬಂದ ಮಗು ಮಾತು ಕಲಿಯಲು ಒಂದೂವರೆ ವರ್ಷಬೇಕು. ಚೆನ್ನಾಗಿ ಮಾತು ಕಲಿಯಲು ಸುಮಾರು 20 ವರ್ಷಬೇಕು. ಆದರೆ ಮಾತಾಡದೆ ಬಾಯ್ ಮುಚ್ ಕೊಂಡು ಇರಲು ಸಾಧ್ಯವೇ ಇಲ್ಲ ಎಂದ ಅವರು, ಮಾತು ಎಲ್ಲಿ ಎಷ್ಟಿರಬೇಕು ಎಂಬುದನ್ನು ವಿವೇಚಿಸುವುದು ಮುಖ್ಯವಾಗುತ್ತದೆ ಎಂದರು.

ಇಡೀ ಜಗತ್ತು ಇಂದು ಅಪಾಯಕಾರಿ ಸ್ಥಿತಿಗೆ ಬಂದಿದೆ. ನೀವು ಯಾರನ್ನಾದರೂ ಯಾಕೆ ಬದುಕಿದ್ದೀರಿ ಎಂದರೆ ದುಡ್ಡು ಸಂಪಾದನೆಗೆ ಇಲ್ಲವೇ ಖರ್ಚು ಮಾಡುವುದಕ್ಕೆ ಎನ್ನುತ್ತಾರೆ. ಆದರೆ ಈ ಬದುಕಿಗೂ ಒಂದು ಅರ್ಥವಿದೆ ಎಂಬುದನ್ನು ಮರೆತುಬಿಟ್ಟಿದ್ದೇವೆ. ಮನುಷ್ಯ ಲಾಭಕ್ಕಾಗಿ ಮಾತ್ರವಲ್ಲ, ಆತ್ಮ ತೃಪ್ತಿಗಾಗಿಯೂ ದುಡಿಯ ಬೇಕಾಗುತ್ತದೆ. ಬದುಕಿಗೊಂದು ರುಚಿಯಿದ್ದು, ಅದನ್ನು ಸ್ವೀಕಾರ ಮಾಡ ಬೇಕು ಎಂದು ಸಂತೋಷದಾಯಕ ಬದುಕನ್ನು ರೂಪಿಸಿ ಕೊಳ್ಳುವುದರ ಕುರಿತು ಸಲಹೆ ನೀಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಪತ್ರಕರ್ತ ಸಿ.ಕೆ.ಮಹೇಂದ್ರ, ಯೋಗ ಶಿಕ್ಷಕ ಶ್ರೀಹರಿ, ನಗರಪಾಲಿಕೆ ಸದಸ್ಯರಾದ ಪೈಲ್ವಾನ್ ಶ್ರೀನಿವಾಸ್, ಲಕ್ಷ್ಮಿ ಶಿವಣ್ಣ, ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಜೆಡಿಎಸ್ ಮುಖಂಡ ಅರಕೆರೆ ಶಿವಶಂಕರ್ ಮತ್ತಿತರರು ಉಪಸ್ಥಿತರಿದ್ದರು.

ಕಡೆ ಕಾರ್ತಿಕ ಸೋಮವಾರ

ಮೈಸೂರಿನ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ

ಮೈಸೂರು, ನ.21(ಎಸ್‌ಪಿಎನ್)– ಕಡೆ ಕಾರ್ತಿಕ ಸೋಮವಾರದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿರುವ ಶಿವನ ದೇವಸ್ಥಾನಗಳಲ್ಲಿ ವಿಶೇಷ ಪೂಜಾ ಕೈಂಕರ್ಯದೊಂದಿಗೆ ದೀಪ ಬೆಳಗಿಸಿ ಸಾವಿರಾರು ಭಕ್ತರು ಶಿವನ ಅನುಗ್ರಹಕ್ಕೆ ಪಾತ್ರರಾದರು.

ಸಂಜೆಯಾಗುತ್ತಿದ್ದಂತೆ ಬಗೆ ಬಗೆಯ ಹೂಗಳ ಅಲಂಕಾರದಿಂದ ಕಂಗೊಳಿಸುತ್ತಿದ್ದ ದೇವಸ್ಥಾನಗಳಲ್ಲಿ ಸರತಿ ಸಾಲಿನಲ್ಲಿ ನಿಂತ ಭಕ್ತ ಸಮೂಹ ಪೂಜೆ ಸಲ್ಲಿಸಿ, ಪ್ರಾರ್ಥನೆ ನಡೆಸಿದರು. ಹಾಗೆಯೇ ದೇವಸ್ಥಾನಗಳ ಆವರಣದಲ್ಲಿ ಜೋಡಿಸಲಾಗಿದ್ದ ಸಾವಿರಾರು ದೀಪಗಳನ್ನು ಬೆಳಗಿಸಿ ಸಂಭ್ರಮಿಸಿದರು.

ಒಂಟಿಕೊಪ್ಪಲಿನಲ್ಲಿರುವ ಮಲೆ ಮಹದೇಶ್ವರ ದೇವಸ್ಥಾನ, ಜಯಲಕ್ಷ್ಮೀಪುರಂನ ಟೆಂಪಲ್ ರಸ್ತೆಯಲ್ಲಿರುವ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನ, ಬನುಮಯ್ಯ ಕಾಲೇಜಿನ ಸಮೀಪದ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ, ಅಗ್ರಹಾರದಲ್ಲಿರುವ ಮಲೆಮಹದೇಶ್ವರ ದೇವಸ್ಥಾನ, ಮೈಸೂರು–ಹುಣಸೂರು ರಸ್ತೆಯಲ್ಲಿರುವ ನನ್ನೇಶ್ವರ ದೇವಸ್ಥಾನ, ಬನ್ನೂರು ಮುಖ್ಯ ರಸ್ತೆಯಲ್ಲಿರುವ ಮಲೆ ಮಹದೇಶ್ವರ ದೇವಸ್ಥಾನ ಸೇರಿದಂತೆ ಹಲವು ದೇವಸ್ಥಾನಗಳಲ್ಲಿ ವಿಶೇಷ ಪೂಜೆಯೊಂದಿಗೆ ದೀಪೋತ್ಸವ ಆಚರಿಸಿದರು.



ಪ್ರಸಾದ ವಿತರಣೆ: ಕಾರ್ತಿಕ ಮಾಸದ ಕಡೇ ಸೋಮವಾರದಂದು ದೀಪೋತ್ಸವದೊಂದಿಗೆ ಪ್ರಸಾದ ವಿತರಣೆ ಮಾಡಲಾಯಿತು. ಕೆಲವು ದೇವಸ್ಥಾನಗಳಲ್ಲಿ ಅನ್ನಸಂತರ್ಪಣೆ ಕಾರ್ಯವೂ ನಡೆಯಿತು.

ದೀಪೋತ್ಸವ: ಹಿನಕಲ್‌ನಲ್ಲಿರುವ ನನ್ನೇಶ್ವರ ದೇವಸ್ಥಾನದ ಕಲ್ಯಾಣಿಯಲ್ಲಿ ಸಡಗರ ಸಂಭ್ರಮದಿಂದ 7ನೇ ವರ್ಷದ ದೀಪೋತ್ಸವ ನಡೆಯಿತು. ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಸಾವಿರಾರು ಭಕ್ತರು ನಂತರ ಮೈಸೂರು–ಹುಣಸೂರು ಮುಖ್ಯರಸ್ತೆಯಲ್ಲಿರುವ ಕಲ್ಯಾಣಿಯಲ್ಲಿ ಸಾವಿರಾರು ದೀಪಗಳನ್ನು ಬೆಳಗಿಸಿ ಹಬ್ಬ ಆಚರಿಸಿದರು.

ಹಿನಕಲ್ ಗ್ರಾಮದ ಮುಖಂಡರಾದ ಎ.ಪಾಪಣ್ಣ, ಹೆಚ್.ಸಿ.ರಾಜಣ್ಣ, ಲೋಹಿತ್ ಅರಸು, ಹಿನಕಲ್ ಪ್ರಕಾಶ್, ಈಶ್ವರಪ್ಪ, ಗಣೇಶ್, ಪಾಪಣ್ಣ, ಸ್ವಾಮಿ, ಜವರೇಗೌಡ, ವೆಂಕಟೇಶ್, ಮಾದೇವ್, ಕುಮಾರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಅತ್ಯಾಚಾರ, ಕೊಲೆ ಪ್ರಕರಣಗಳಲ್ಲಿ

ತಪ್ಪಿತಸ್ಥರಿಗೆ ಶೀಘ್ರ ಗಲ್ಲು ಶಿಕ್ಷೆ ವಿಧಿಸಬೇಕು; ಚಿಂತಕಿ ಡಾ.ಶ್ವೇತಾ ಮಡಪ್ಪಾಡಿ

ಮೈಸೂರು,ನ.21(ಪಿಎಂ)– ಪ್ರಸ್ತುತ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳು ಹೆಚ್ಚಳಗೊಳ್ಳುತ್ತಿದ್ದು, ಈ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶೀಘ್ರ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಚಿಂತಕಿ ಮತ್ತು ಹೋಟೆಲ್ ಉದ್ಯಮಿ ಡಾ.ಶ್ವೇತಾ ಮಡಪ್ಪಾಡಿ ಆಗ್ರಹಿಸಿದರು.





ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅತ್ಯಾಚಾರ ನಡೆಸಿ ಕೊಲೆಗೈಯುವ ಭಯಾನಕ ಕೃತ್ಯಗಳಿಗೆ ದೇಶ ಸಾಕ್ಷಿಯಾಗುತ್ತಿದೆ. ಈ ಕೃತ್ಯಗಳು ಮರುಕಳಿಸದಂತೆ ತಡೆಯಲು ಸರ್ಕಾರ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳಬೇಕು. ಜೊತೆಗೆ ಅತ್ಯಾಚಾರ–ಕೊಲೆ ವಿರುದ್ಧ ಪ್ರಬಲವಾದ ಧ್ವನಿಗಳು ಮೊಳಗಬೇಕಿದೆ. ಹೆಣ್ಣಿನ ರಕ್ಷಣೆಗೆ ಹೆಣ್ಣೇ ನಿಲ್ಲಬೇಕಿದೆ. ಇದಕ್ಕೆ ಪ್ರತಿ ಕುಟುಂಬದ ಮಾನವೀಯ ಮನಸ್ಸುಳ್ಳ ಪುರುಷರು ಕೈಜೋಡಿಸಬೇಕಿದೆ ಎಂದರು.

ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ನ.21– ಕೃಷಿ ಇಲಾಖೆಯ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಯೋಜನೆಯಡಿ ಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸಲು ಆಸಕ್ತಿ ಹಾಗೂ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಹಾಗೂ ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ನವೆಂಬರ್ 16 ರಿಂದ 30 ರವರೆಗೆ ಹುದ್ದೆವಾರು ಪ್ರತ್ಯೇಕ ಅರ್ಜಿಗಳನ್ನು ಕಛೇರಿ ವೇಳೆಯಲ್ಲಿ ಪಡೆದು ಪೂರ್ಣ ಮಾಹಿತಿಯೊಂದಿಗೆ ಸೀಲು ಮಾಡಿದ ಲಕೋಟೆಯಲ್ಲಿ ಡಿ.01 ರ ಅಪರಾಹ್ನ 04 ಗಂಟೆಯ ಒಳಗಾಗಿ ಮುದ್ದಾಂ/ ಅಂಚೆ ಮೂಲಕ ಮೈಸೂರಿನ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಲ್ಲಿಸಬಹುದಾಗಿದೆ. ಜಿಲ್ಲಾ ಸಲಹೆಗಾರರ ಹುದ್ದೆ ಹಾಗೂ ತಾಂತ್ರಿಕ ಸಹಾಯಕರ ಹುದ್ದೆಯ ವಿದ್ಯಾರ್ಹತೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಜಂಟಿ ಕೃಷಿ ನಿರ್ದೇಶಕರ ಕಚೇರಿಯ ಎನ್.ಎಫ್.ಎಸ್.ಎಂ (ತಾಂತ್ರಿಕ) ಅಧಿಕಾರಿಗಳಿಂದ ಪಡೆಯಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗಾಗಿ ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರು 2 ಲಕ್ಷ ರೂ. ಡಿಡಿ ಸಹಿತ ಕೆಪಿಸಿಸಿ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಜವರಪ್ಪ, ತ್ಯಾಗರಾಜು ಇನ್ನಿತರರಿದ್ದರು.


ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್‌ಗಾಗಿ ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹದೇವ ಅವರು 2 ಲಕ್ಷ ರೂ. ಡಿಡಿಯೊಂದಿಗೆ ಕೆಪಿಸಿಸಿ ಕಚೇರಿಗೆ ಅರ್ಜಿ ಸಲ್ಲಿಸಿದರು. ಈ ವೇಳೆ ಗ್ರಾಪಂ ಮಾಜಿ ಸದಸ್ಯ ಚಿಕ್ಕಣ್ಣ, ತಾಪಂ ಮಾಜಿ ಸದಸ್ಯ ಬೆಳವಾಡಿ ಲೋಕೇಶ್, ಮೈಸೂರು ಜಿಲ್ಲಾ ಗ್ರಾಮಾಂತರ ಯುವ ಕಾಂಗ್ರೆಸ್ ಉಪಾಧ್ಯಕ್ಷ ಹಿನಕಲ್ ಮಂಜು, ಚಾಮುಂಡೇಶ್ವರಿ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಸ್‌ಆರ್‌ಎಸ್ ವಿನೋದ್, ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ನವೀನ್ ಹಾಗೂ ಕಾಂಗ್ರೆಸ್ ಯುವ ಮುಖಂಡ ಜೀವನ್ ಮಹಾದೇವ ಉಪಸ್ಥಿತರಿದ್ದರು.

ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ನ21– ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ದಾರ್ಥನಗರ, ಮೈಸೂರು ಸಂಸ್ಥೆಯಲ್ಲಿ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ) [ಎರಡು ಶೈಕ್ಷಣಿಕ ವರ್ಷದ ನಾಲ್ಕು ಸೆಮಿಸ್ಟರ್ ಸಿ.ಬಿ.ಸಿ.ಎಸ್ ಪದ್ಧತಿ] ದೃಶ್ಯ ಕಲೆಯಲ್ಲಿ 2022–23 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಸದರಿ ಸ್ನಾತಕೋತ್ತರ ಪದವಿಯಲ್ಲಿ ಚಿತ್ರಕಲೆ ಮತ್ತು ಶಿಲ್ಪಕಲೆ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕೋತ್ತರ ಪದವಿಯಾಗಿರುತ್ತದೆ. ಪ್ರಥಮ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ) ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಲು 2022 ರ ನವೆಂಬರ್ 24 ಅಂತಿಮ ದಿನಾಂಕವಾಗಿದ್ದು, 2022 ರ ನವೆಂಬರ್ 25 ರಂದು ಬೆಳಿಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಹಾಗೂ ಮಧ್ಯಾಹ್ನ 2 ಗಂಟೆಗೆ ವಯಕ್ತಿಕ ಸಂದರ್ಶನ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಸಕ್ತರು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ http://www.mysore.nic.in ಮತ್ತು http://www.cavamysore.karnataka.gov.in ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ ಅಥವಾ ಕಾರ್ಯಾಲಯದ ದೂರವಾಣಿ ಸಂಖ್ಯೆ 0821–2438931 ಯನ್ನು ಸಂಪರ್ಕಿಸಬಹುದು ಎಂದು ಕಾವಾದ ಡೀನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಅಶ್ವರೋಹಿ ಕ್ರೀಡಾಕೂಟ: ಮೌಂಟೆಡ್ ಕಮಾಂಡೆಂಟ್ ನಾಗರಾಜುಗೆ ಕಂಚು



ಮೈಸೂರು, ನ.21– ಮಧ್ಯಪ್ರದೇಶದ ಗ್ವಾಲಿಯರ್‌ನ ಟೆಕನ್‌ಪುರ್ ಬಿಎಸ್‌ಎಫ್ ಅಕಾಡೆಮಿಯಲ್ಲಿ ನಡೆದ ಅಖಿಲ ಭಾರತ ಪೊಲೀಸ್ ಅಶ್ವರೋಹಿ ಕ್ರೀಡಾಕೂಟದಲ್ಲಿ ಕರ್ನಾಟಕ ಅಶ್ವರೋಹಿ ದಳದ ಕಮಾಂಡೆಂಟ್ ಎಂ.ಜಿ.ನಾಗರಾಜು ಕಂಚಿನ ಪದಕ ಜಯಿಸಿದ್ದಾರೆ.

ಹ್ಯಾಕ್ಸ್(ಓಪನ್)ವಿಭಾಗದಲ್ಲಿ ಕಿಂಗ್ ಪವರ್ ಅಶ್ವರೋಹಿಯಾಗಿ ಭಾಗವಹಿಸಿದ ಅವರು, ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಪೊಲೀಸ್ ಉನ್ನತ ಅಧಿಕಾರಿಗಳು ರಾಷ್ಟ್ರ ಮಟ್ಟದಲ್ಲಿ ಪದಕಗಳಿಸುತ್ತಿರುವುದು ವಿಶೇಷವಾಗಿದೆ. ಹಾಕಿ ಮಾಂತ್ರಿಕ ಧ್ಯಾನಚಂದ್ ಅವರ ಮಗ ಮತ್ತು 1975ರ ಒಲಂಪಿಕ್ ಹಾಕಿಯಲ್ಲಿ ಸ್ವರ್ಣ ಪದಕ ವಿಜೇತರಾದ ಅಶೋಕ ಕುಮಾರ ಅವರಿಂದ ಕಂಚಿನ ಪದಕ ಸ್ವೀಕರಿಸಿದರು.